# ಸಾಮಾಜಿಕ & ರಾಜಕೀಯ ಜೀವನ

## ವೈವಿಧ್ಯತೆ

### ರಾಷ್ಟ್ರೀಯತೆ

- ರಾಷ್ಟ್ರ ಎಂಬ ಪದದಿಂದ ರಾಷ್ಟ್ರೀಯತೆ ಎನ್ನುವ ಪದ ಬಂದಿದೆ.
- ಆಧುನಿಕ ವಿದ್ವಾಂಸರ ಅಭಿಪ್ರಾಯದಲ್ಲಿ ರಾಷ್ಟ್ರೀಯತೆಯನ್ನು ನಿರ್ಧರಿಸುವ ಅಂಶಗಳೆಂದರೆ ತಾವು ವಾಸಿಸುವ ನೆಲವನ್ನು ಮಾತೃಭೂಮಿ ಎಂದು ತಿಳಿಯುವ ಜನ ಸಮೂಹ,
- ಜನ ಸಮೂಹದಲ್ಲಿ ಪರಸ್ಪರ ಸೋದರತೆಯ ಭಾವನೆ ಮತ್ತು ರಾಷ್ಟ್ರದ ಸುಖ-ದುಃಖಗಳಲ್ಲಿ ಸಮಾನ ಭಾಗಿತ್ವ ಹೊಂದಿರುವ ಭಾವನೆಯನ್ನು ರಾಷ್ಟ್ರೀಯತೆ ಎಂದು ಕರೆಯುತ್ತಾರೆ.
- ಅನಾದಿಕಾಲದಿಂದ  ಭಾರತದ ಉದ್ದಗಲಕ್ಕೂ ವಾಸಿಸುವ ಜನರಲ್ಲಿ ಇಂತಹ ರಾಷ್ಟ್ರೀಯಭಾವನೆ ಇರುವುದನ್ನು ಕಾಣುತ್ತೇವೆ.
- ನಮ್ಮ ದೇಶದ ಮೇಲೆ ಆದ ವಿದೇಶಿಯರ ಆಕ್ರಮಣದ ವಿರುದ್ಧ ಹೋರಾಡಲು ಪ್ರೇರೆಪಿಸಿದ್ದು ಈ ರಾಷ್ಟ್ರೀಯ ಭಾವನೆಯೆ.
- ಬ್ರಿಟೀಷರ ವಿರುದ್ಧ ನಮ್ಮ ಹೋರಾಟದ ಮೂಲ ಸ್ಫೂರ್ತಿ ಇದೇ.
- ಒಂದು ರಾಷ್ಟ್ರದ ಜನರಲ್ಲಿ ನಾವೆಲ್ಲಾ ಒಂದೇ ಎನ್ನುವ ಭಾವನೆ ಇರುವದಕ್ಕೆ ರಾಷ್ಟ್ರೀಯ ಭಾವೈಕ್ಯತೆ ಎನ್ನುವರು.
- ಇದರ ಅರ್ಥ ವಿವಿಧ ಜಾತಿ, ಧರ್ಮ, ಪ್ರಾದೇಶಿಕತೆ ಮತ್ತು ವಿವಿಧ ಭಾಷೆಗಳನ್ನು ಮಾತನಾಡುವ ಜನರು ನಾವೆಲ್ಲಾ ಒಂದೇ ಎಂದು ಗುರುತಿಸಿಕೊಳ್ಳುವುದು.
- ಈ ರೀತಿಯ ಐಕ್ಯತೆಯು ಶಕ್ತಿಯುತವಾದ ರಾಷ್ಟ್ರವನ್ನು ಕಟ್ಟಲು ಬಹಳ ಮಹತ್ವದ್ದಾಗಿದೆ.
- ಭಾರತವು ವಿಶಾಲವಾದ ರಾಷ್ಟ್ರವಾಗಿದ್ದು, ಪ್ರಪಂಚದ ಜನಸಂಖ್ಯೆಯಲ್ಲಿ 2ನೇ ಸ್ಥಾನ ಪಡೆದಿದೆ.
- ಈ ದೇಶದಲ್ಲಿ ಸುಮಾರು 1652 ಭಾಷೆ ಮತ್ತು ಉಪಭಾಷೆಗಳನ್ನು ಮಾತನಾಡುವ ಜನರಿದ್ದಾರೆ.
- ಇದರಲ್ಲಿ 22 ಭಾಷೆಗಳನ್ನು ರಾಷ್ಟ್ರೀಯ ಭಾಷೆಗಳನ್ನಾಗಿ ನಮ್ಮ ಸಂವಿಧಾನ ಅಂಗೀಕರಿಸಿದೆ.
- ನಮ್ಮ ದೇಶದಲ್ಲಿ ಹಲವಾರು ಧರ್ಮ ಮತ್ತು ಮತಗಳು (ಹಿಂದೂ, ಇಸ್ಲಾಂ, ಕ್ರೈಸ್ತ, ಬೌದ್ಧ, ಜೈನ, ಸಿಖ್ ಮತ್ತು ಪಾರ್ಸಿ) ಆಚರಣೆಯಲ್ಲಿರುವುದು ಒಂದು ಅದ್ವಿತೀಯ ಲಕ್ಷಣವಾಗಿದೆ.
- ಅದೇ ರೀತಿ ವಿವಿಧ ಉಡುಗೆ, ಅಹಾರ ಪದ್ಧತಿ ಮತ್ತು ಸಾಮಾಜಿಕ ವ್ಯವಸ್ಥೆ ಇದ್ದರೂ ನಾವೆಲ್ಲಾ ಒಂದೇ ಎಂಬ ಭಾವನೆಯುಳ್ಳವರಾಗಿದ್ದೇವೆ.
- ಭೌಗೋಳಿಕವಾಗಿ ಮತ್ತು ಪ್ರಾಕೃತಿಕವಾಗಿ ವೈವಿಧ್ಯತೆಯಿಂದ ಕೂಡಿದ್ದರೂ ರಾಜಕೀಯವಾಗಿ ಒಗ್ಗಟ್ಟಾಗಿ ಪ್ರತಿ ಭಾಗವೂ ಒಂದೇ ಸಂವಿಧಾನದಡಿಯಲ್ಲಿ ಆಳಲ್ಪಟ್ಟಿದೆ.

- ವೈವಿಧ್ಯತೆಯಲ್ಲಿ ಏಕತೆ: ಭೌಗೋಳಿಕ, ಸಾಮಾಜಿಕ, ಭಾಷೆ, ಸಂಪ್ರದಾಯ, ರಾಜಕೀಯ, ಧಾರ್ಮಿಕ, ಜನಾಂಗೀಯ ಹಾಗೂ ಸಂಸ್ಕೃತಿಗಳ ನಡುವೆ ಅನೇಕ ವೈವಿಧ್ಯತೆಯನ್ನು ಹೊಂದಿದ್ದರೂ ಹಿಮಾಲಯದಿಂದ ಕನ್ಯಾಕುಮಾರಿಯವರೆಗಿನ ಜನರಲ್ಲಿ ನಾವೆಲ್ಲಾ ಒಂದು ಎನ್ನುವ ಮನೋಭಾವನೆಯನ್ನು ವೈವಿಧ್ಯತೆಯಲ್ಲಿ ಏಕತೆ ಎನ್ನುವರು.
- ಏಕರೀತಿಯ ಆಡಳಿತ ವ್ಯವಸ್ಥೆ, ಸುಲಭ ಸಂಪರ್ಕ ಸಾಧನಗಳು, ಆಧುನಿಕ ಶಿಕ್ಷಣ, ಸ್ವಾಸ್ಥ್ಯ, ಕಾನೂನು ಪದ್ಧತಿಗಳು ಮುಂತಾದವು ಏಕತೆಯ ಅಂಶವನ್ನು ಮೂಡಿಸಿವೆ.

**ವಿವಿಧತೆಯಲ್ಲಿ ಐಕ್ಯತೆಯನ್ನು ಮೂಡಿಸುವ 4 ಅಂಶಗಳು-**

- **ಭೌಗೋಳಿಕ ಐಕ್ಯತೆ :** ಭಾರತವು ವಿಶ್ವದ ಇತರ ರಾಷ್ಟ್ರಗಳಿಂದ ಬೇರ್ಪಡಿಸಿರುವ ಹಿಮಾಲಯ ಪರ್ವತ, ಬಂಗಾಳಕೊಲ್ಲಿ, ಹಿಂದೂ ಮಹಾಸಾಗರ, ಅರಬ್ಬಿ ಸಮುದ್ರ ಇವುಗಳು ಭಾರತವನ್ನು ನೈಸರ್ಗಿಕವಾಗಿ ಐಕ್ಯಗೊಳ್ಳುವಂತೆ ಮಾಡಿವೆ. ಭೌಗೋಳಿಕವಾಗಿ ವಾಸಿಸುವ ಜನರು ರಾಷ್ಟ್ರಗೀತೆಯನ್ನು ಹಾಡುವುದು ರಾಷ್ಟ್ರದ ಐಕ್ಯತೆಯನ್ನು ಸೂಚಿಸುತ್ತದೆ.
- **ರಾಜಕೀಯ ಐಕ್ಯತೆ:** ಅನಾದಿಕಾಲದಿಂದಲೂ ಏಕರೂಪತೆಯನ್ನು ಹೊಂದಿರುವ ಭಾರತ ಇಂದಿಗೂ ಒಂದೇ ಸಂವಿಧಾನ, ಏಕರೀತಿಯ ಕಾನೂನು, ಶಿಕ್ಷಣ ಕ್ರಮ, ಒಕ್ಕೂಟ ನ್ಯಾಯಾಂಗ ವ್ಯವಸ್ಥೆ, ಬಲಿಷ್ಠ ಕೇಂದ್ರ ಸರ್ಕಾರದ ಆಡಳಿತಗಳಿಂದ ರಾಜಕೀಯ ಗುರುತಿಸುವಿಕೆ, ಜೊತೆಗೆ ಶಿಕ್ಷಣ, ಸ್ವಾಸ್ಥ್ಯ ಕಾನೂನು, ಸಂಪರ್ಕ ಸಾಧನ ಮುಂತಾದ ಕ್ಷೇತ್ರಗಳು ಸರ್ವಮಾನ್ಯ ಮಾನದಂಡಗಳಾಗಿವೆ.
- **ಧಾರ್ಮಿಕ ಐಕ್ಯತೆ:** ಭಾರತವು ಅನೇಕ ಮತಗಳಿಂದ ಕೂಡಿದ್ದು, ಹಿಂದೂ, ಬೌದ್ಧ, ಜೈನ, ಸಿಖ್, ಕ್ರಿಶ್ಚಿಯ್ನ, ಇಸ್ಲಾಂ, ಪಾರ್ಸಿ ಮುಂತಾದ ಮತಗಳು ಇಲ್ಲಿ ಬೇರೂರಿವೆ. ಪ್ರತಿಯೊಂದು ಮತವೂ ತನ್ನದೇ ಆದ ಹಬ್ಬ, ಹರಿದಿನಗಳನ್ನು ಆಚರಿಸುತ್ತಿವೆ. ಒಂದು ಮತದ ಜನತೆಯನ್ನು ಇನ್ನೊಂದು ಮತದ ಜನತೆಯು ತಮ್ಮೊಡನೆ, ಭಾಗವಹಿಸುವುದರ ಮೂಲಕ ಐಕ್ಯತೆಯನ್ನು ಮೂಡಿಸುವುದೇ ಅಲ್ಲದೇ, ಸರ್ವಮತ ಸಮನ್ವಯತೆ ಅಥವಾ ಭಾರತದಲ್ಲಿ ಎಲ್ಲ ಮತೀಯರಿಗೂ ತಮ್ಮ ತಮ್ಮ ಮತ ಪಾಲಿಸುವ ಸಮಾನ ಹಕ್ಕು ಇದೆ.
- **ಭಾಷಾ ಐಕ್ಯತೆ:** ಭಾರತವು ವಿವಿಧ ಭಾಷೆಗಳ ತವರೂರಾಗಿದೆ. ಬಹುತೇಕ ಭಾಷೆಗಳಿಗೆ ಸಂಸ್ಕೃತವು ಮೂಲವಾಗಿದೆ. ವಿವಿಧ ಭಾಷೆಗಳನ್ನು ಮಾತನಾಡುವ ಜನರು ಭಾರತದಲ್ಲಿದ್ದಾರೆ. ಪ್ರತಿಯೊಂದು ರಾಜ್ಯವೂ ತನ್ನದೇ ಆದ ಭಾಷೆ, ಸಾಹಿತ್ಯವನ್ನು ಹೊಂದಿದೆ. ಆದರೂ ಭಾಷಾ ಐಕ್ಯತೆಗೆ ಧಕ್ಕೆ ಬಂದಿಲ್ಲ. ಒಂದು ಭಾಷೆಯ ಜನರು ಇತರೆ ಭಾಷೆಗಳನ್ನು ಗೌರವಿಸುತ್ತಾರೆ.
- **ಸಾಂಸ್ಕೃತಿಕ ಐಕ್ಯತೆ:** ಭಾರತದಲ್ಲಿ ವಿವಿಧ ಜನಾಂಗಗಳು, ಧರ್ಮಗಳಿದ್ದರೂ ಸಾಂಸ್ಕೃತಿಕ ಐಕ್ಯತೆಯನ್ನು ಎಲ್ಲೆಲ್ಲೂ ಕಾಣಬಹುದು. ವಿವಿಧ ಭಾಗದ ಜನರು ತಮ್ಮದೇ ಆದ ಸಂಪ್ರದಾಯ,

ಆಚಾರ ವಿಚಾರಗಳು, ವೇಷ ಭೂಷಣಗಳು, ಆಹಾರ ಪದ್ಧತಿ, ಜೀವನ ಶೈಲಿ ಮುಂತಾದ ಸಾಂಸ್ಕೃತಿಕ ವೈವಿಧ್ಯತೆ ಇದ್ದರೂ ಸಾಮ್ಯತೆಯನ್ನು ಹೊಂದಿದ್ದಾರೆ.

**ರಾಷ್ಟ್ರೀಯ ಐಕ್ಯತೆಯನ್ನು ಪ್ರೋತ್ಸಾಹಿಸುವ ಅಂಶಗಳು:**

- **ಜಾತ್ಯಾತೀತತೆ (ಮತನಿರಪೇಕ್ಷ):** ಭಾರತ ಒಂದು ಜಾತ್ಯಾತೀತ ರಾಷ್ಟ್ರ. ಧರ್ಮ ವಿರೋಧಿ ರಾಷ್ಟ್ರವಲ್ಲ. ಇದರ ಅರ್ಥ ರಾಷ್ಟ್ರದ ಪ್ರತಿಯೊಬ್ಬ ಪೌರನು ತನ್ನದೇ ಆದ ಮತವನ್ನು ಆಚರಿಸವು ಧಾರ್ಮಿಕ ಹಕ್ಕನ್ನು ಹೊಂದಿದ್ದಾನೆ. ಸರ್ವಧರ್ಮ ಸಮನ್ವಯತೆಯಿದೆ. ಆದುದರಿಂದ ಇದು ರಾಷ್ಟ್ರದ ಐಕ್ಯತೆಯನ್ನು ಪ್ರೋತ್ಸಾಹಿಸಿದಂತಾಗುತ್ತದೆ.
- **ಪ್ರಜಾಪ್ರಭುತ್ವ:** ಭಾರತ ಒಂದು ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು, ಎಲ್ಲಾ ಪೌರರು ದೇಶದ ಕಾನೂನಿನಡಿಯಲ್ಲಿ ಸಮಾನರಾಗಿರುತ್ತಾರೆ. ಮೂಲಭೂತ ಹಕ್ಕುಗಳು ಮತ್ತು ರಾಜ್ಯ ನಿರ್ದೇಶಕ ತತ್ವಗಳಲ್ಲಿ ರಾಜ್ಯದ ಎಲ್ಲಾ ಪೌರರು ಒಂದೇ ಒಂದು ಎಂದು ಪರಿಗಣಿಸಲ್ಪಟ್ಟಿದೆ. ಜನತೆ ವಿವಿಧ ಭಾಷೆ ಮತ್ತು ಸಂಸ್ಕೃತಿಯ ಆಧಾರದ ಮೇಲೆ ಭೇದಭಾವ ಮಾಡುವಂತಿಲ್ಲ. ಆದರಿಂದ ಭಾರತ ಒಂದು ಐಕ್ಯ ರಾಷ್ಟ್ರವೆಂದು ತಿಳಿಯಬಹುದು.
- **ರಾಷ್ಟ್ರೀಯ ಹಬ್ಬಗಳು:** ದೇಶದ ರಾಷ್ಟ್ರೀಯ ಹಬ್ಬಗಳಾದ ಸ್ವಾತಂತ್ರ್ಯೋತ್ಸವ, ಗಣರಾಜ್ಯೋತ್ಸವ, ಗಾಂಧಿ ಜಯತಿ ಮುಂತಾದವುಗಳು ಭಾರತೀಯರನ್ನು ಒಂದುಗೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಈ ಹಬ್ಬಗಳನ್ನು ಎಲ್ಲಾ ಭಾರತೀಯ ಪೌರರು ಪ್ರತಿಯೊಂದು ಭಾಗದಲ್ಲೂ ಆಚರಿಸುತ್ತಾರೆ. ಯಾವುದೇ ಭಾಷೆ ಮತ್ತು ಸಂಸ್ಕೃತಿಯನ್ನು ಗಣನೆಗೆ ತೆಗೆದುಕೊಳ್ಳದೆ ಆಚರಿಸುವುದರಿಂದ ನಮ್ಮ ಹಬ್ಬಗಳು ನಮ್ಮ ಏಕ ರಾಷ್ಟ್ರೀಯತೆಯನ್ನು ನೆನಪಿಸುತ್ತವೆ.
- **ನಮ್ಮ ರಾಷ್ಟ್ರೀಯ ಲಾಂಛನಗಳು:** ನಮ್ಮ ರಾಷ್ಟ್ರೀಯ ಚಿನ್ಹೆಗಳು ಅಥವಾ ರಾಷ್ಟ್ರಲಾಂಛನ, ರಾಷ್ಟ್ರಗೀತೆ, ರಾಷ್ಟ್ರಧ್ವಜ, ರಾಷ್ಟ್ರೀಯ ಹೂ, ರಾಷ್ಟ್ರ ಪಕ್ಷಿ, ರಾಷ್ಟ್ರೀಯ ಪ್ರಾಣಿ ಮುಂತಾದವು ಸಹ ನಾವೆಲ್ಲಾ ಒಂದು ಎಂದು ಗುರುತಿಸಿಕೊಳ್ಳಲು ಸಹಾಯಕವಾಗಿವೆ. ಈ ಅಂಶವೂ ಸಹ ಆಚರಣೆಯ ಸಂಧರ್ಭದಲ್ಲಿಯಾಗಲೀ  ಅಥವಾ ವಿಪತ್ತಿನ ಸಂದರ್ಭದಲ್ಲಾಗಲಿ ನಾವೆಲ್ಲಾ ಒಂದು ಎಂದು ಒಗ್ಗೂಡಿಸುವ ಆರೋಗ್ಯಕರ ಅಂಶವಾಗಿದೆ.
- **ಪರಸ್ಪರ ಅನ್ಯೋನ್ಯತೆ :** ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಾಮಾನ್ಯ ಧ್ಯೇಯೋದ್ದೇಶಗಳ ಮೂಲಕ ಕಾರ್ಯ ಸಾಧನೆ ಮಾಡುತ್ತವೆ. ರಾಷ್ಟ್ರದ ಪ್ರತಿಯೊಂದು ಭಾಗವೂ ಇನ್ನೊಂದು ಭಾಗದ ಮೇಲೆ ಅವಲಂಬಿತವಾಗಿವೆ. ಆಯಾ ಭಾಗದ ಉತ್ಪಾದನೆಗಳು ಆರ್ಥಿಕ ಬೆಳವಣಿಗೆಯನ್ನು ಒಳಗೊಂಡಿರುತ್ತದೆ. **ಉದಾ:-** ಪಂಜಾಬ್ ನಲ್ಲಿ ಗೋಧಿ ಬೆಳೆದರೆ ತಮಿಳುನಾಡಿನಲ್ಲಿ ಮಾರಾಟವಾಗುತ್ತದೆ. ಆದುದರಿಂದ ಯಾವುದೇ ಭಾಗವು ಇತರೆ ಭಾಗದ ಮೇಲೆ

ಅವಲಂಬಿಸಬೇಕಾಗುತ್ತದೆ. ಯಾವುದು ಸಂಪೂರ್ಣವಾಗಿ ಸ್ವಾವಲಂಬಿಯಾಗದು. ಈ ಅಂಶವೂ ಕೂಡ ನಾವೆಲ್ಲಾ ಒಂದೇ ರಾಷ್ಟ್ರದವರು ಎಂಬುದನ್ನು ಸೂಚಿಸುತ್ತದೆ.

- ಇವಲ್ಲದೆ ಇತರೆ ಅಂಶಗಳಾದ ಸಂಪರ್ಕ ವಿಧಾನ, ಸಮೂಹ ಮಾಧ್ಯಮಗಳು, ನೈಸರ್ಗಿಕ ಅಂಶಗಳು, ವಿವಿಧ ಸಂಸ್ಕೃತಿ, ಪ್ರಾಂತೀಯತೆ, ಮತ, ಭಾಷೆ ಮುಂತಾವುಗಳಿದ್ದರೂ ಇಡೀ ರಾಷ್ಟ್ರದ ಜನತೆ ಒಂದೇ ಎಂಬ ಐಕ್ಯತೆ ಕಾಣಬಹುದಾಗಿದೆ.

**ರಾಷ್ಟ್ರೀಯ ಐಕ್ಯತೆಗಿರುವ ಅಡೆತಡೆಗಳು-**

- ದೇಶದ ವಿವಿಧ ಕೋಮುಗಳು ತಮ್ಮ ಕೋಮುಗಳ ಸಂಘಟನೆಗಳನ್ನು ಹೊಂದಿ, ತಮ್ಮ ತಮ್ಮ ಕೋಮುಗಳನ್ನು ಸಂಘಟಿಸುವುದು.
- ಅಂಧ ಪ್ರಾದೇಶಿಕ ಭಾಷಾಭಿಮಾನದ ಬೆಳವಣಿಗೆ
- ಜನರಲ್ಲಿ ಜಾತಿಯ ಮನೋಭಾವನೆಯು ಹೆಚ್ಚುತ್ತಿರುವುದು.
- ಪ್ರಾಂತೀಯ ಮನೋಭಾವನೆಯು ರಾಷ್ಟ್ರೀಯ ಐಕ್ಯತೆಗೆ ಸಮಸ್ಯೆಯಾಗಿದೆ.
- ಗಡಿ ವಿವಾದ, ಜಲ ವಿವಾದ ಮತ್ತು ಭಾಷಾ ವಿವಾದಗಳು.
- ಇವುಗಳಲ್ಲದೇ ಭಯೋತ್ಪಾದನೆ, ಅಸ್ಪೃಶ್ಯತೆ, ರಾಜಕಾರಣಿಗಳಲ್ಲಿನ ಇಚ್ಛಾಶಕ್ತಿಯ ಕೊರತೆ, ಜನರಲ್ಲಿನ ಅಜಾಗೂಕತೆ ಮುಂತಾದವುಗಳೆಲ್ಲವೂ ರಾಷ್ಟ್ರೀಯ ಐಕ್ಯತೆಗೆ ಅಡೆತಡೆಗಳಾಗಿವೆ.

**ರಾಷ್ಟ್ರೀಯ ಐಕ್ಯತೆಗೆ ಇರುವ ಅಡೆತಡೆಗಳನ್ನು ನಿವಾರಿಸಲು ಸಲಹೆಗಳು:**

- ವಿವಿಧ ಮತ ವರ್ಗಗಳು, ಜನಾಂಗದವರಿದ್ದು ಪ್ರತಿಯೊಂದು ವರ್ಗವು ಇನ್ನೋಂದು ವರ್ಗವನ್ನು, ಮತ ಬೋಧಕರನ್ನು ಗೌರವಿಸಬೇಕು.
- ದೇಶದ ಶಿಕ್ಷಣ ನೀತಿಯನ್ನು ಪುನರ್ ರೂಪಿಸುವುದು
- ವೃತ್ತಿ ಶಿಕ್ಷಣಕ್ಕೆ ಹೆಚ್ಚು ಮಹತ್ವ ನೀಡುವುದು.
- ಶಾಲೆ ಬಿಡುವ ಮಕ್ಕಳನ್ನು ನಿಯಂತ್ರಿಸುವುದು
- ಎಲ್ಲರೂ ಇತರೆ ಭಾಷೆಗಳಿಗೆ, ಸಂಸ್ಕೃತಿಗೆ, ಮತಗಳಿಗೆ ಸೂಕ್ತ ಗೌರವ ಕೊಡಬೇಕು.

## ಪ್ರಜಾಪ್ರಭುತ್ವ

- ಪ್ರಜಾಪ್ರಭುತ್ವವೆಂಬುದು ಅತ್ಯಂತ ಪುರಾತನ ಸರ್ಕಾರಗಳಲ್ಲೊಂದು.
- ಪ್ರಾಚೀನ ಭಾರತದಲ್ಲೂ ಪ್ರಜಾಪ್ರಭುತ್ವದ ಹೆಗ್ಗುರುತುಗಳು ಕಾಣಿಸಿವೆ.
- ಪ್ರಜಾಪ್ರಭುತ್ವ ಮಾದರಿ ಸರ್ಕಾರ ಸ್ಥಾಪನೆಗಾಗಿ ಅನೇಕ ಕ್ರಾಂತಿಗಳು, ದಂಗೆಗಳು ಪ್ರಪಂಚದ ಬೇರೆ ಬೇರೆ ಪ್ರದೇಶಗಳಲ್ಲಿ ನಡೆದಿರುವುದಕ್ಕೆ ಪುರಾವೆಗಳಿವೆ.
- 'ಡೆಮಾಕ್ರಸಿ' ಎಂಬ ಪದವು ಗ್ರೀಕ್ ಭಾಷೆಯ ಪದವಾದ 'ಡೆಮೋಕ್ರೇಷಿಯಾ' (Demokratia) ಪದದಿಂದ ಉತ್ಪತ್ತಿ ಹೊಂದಿದ್ದು 'ಜನರ ಆಡಳಿತ' ಎಂಬ ಅರ್ಥವನ್ನು ಹೊಂದಿದ್ದಾಗಿದೆ.
- ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಗಳು ಮಹತ್ತರ ಪಾತ್ರವಹಿಸುತ್ತವೆ.
- ಜನರು ತಮ್ಮದೇ ಆದ ಸರ್ಕಾರವನ್ನು ರಚಿಸಿಕೊಳ್ಳಲು ಚುನಾವಣೆಗಳು ಅವಕಾಶಗಳನ್ನು ಒದಗಿಸಿಕೊಡುತ್ತವೆ.
- ಚುನಾವಣೆಗಳು ಒಬ್ಬ ಪ್ರಜೆ ಒಂದು ಮತ ಎನ್ನುವ ತತ್ವದ ಮೇಲೆ ಕಾರ್ಯವೆಸಗುತ್ತದೆ.
- ಸರ್ಕಾರವು ಜನರಿಂದ ರಚಿತಗೊಂಡಿದ್ದು ಜನರೆ ನಿರ್ಧಾರ ಕೈಗೊಳ್ಳುವ ಪ್ರಭುಗಳಾಗಿರುತ್ತಾರೆ.
- ಅಮೆರಿಕಾದ ಮಾಜಿ ಅಧ್ಯಕ್ಷರಾಗಿದ್ದ ಅಬ್ರಹಾಂ ಲಿಂಕನ್‌ರು ಪ್ರಜಾಪ್ರಭುತ್ವವನ್ನು 'ಜನರಿಂದ, ಜನರಿಗಾಗಿ ಮತ್ತು ಜನರಿಗೋಸ್ಕರ ರಚಿತಗೊಂಡ ಸರ್ಕಾರ.' ಎಂದು ವ್ಯಾಖ್ಯಾನಿಸಿದ್ದಾರೆ.
- ಪ್ರಜಾಪ್ರಭುತ್ವದಲ್ಲಿ ಪರಮಾಧಿಕಾರವನ್ನು ಪ್ರಜೆಗಳೇ ಹೊಂದಿರುತ್ತಾರೆ.

### ಪ್ರಜಾಪ್ರಭುತ್ವದ ವಿಧಗಳು :

- ಪ್ರಜಾಪ್ರಭುತ್ವದಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷ ಪ್ರಜಾಪ್ರಭುತ್ವ ಎಂಬ ಎರಡು ವಿಧಗಳಿವೆ.

## ಪ್ರತ್ಯಕ್ಷ ಪ್ರಜಾಪ್ರಭುತ್ವ (Direct Democracy) :

- ಈ ಪ್ರಕಾರದ ಸರ್ಕಾರದಲ್ಲಿ ಜನರು ತಮ್ಮದೇ ಸರ್ಕಾರವನ್ನು ಚುನಾವಣೆ ಮೂಲಕ ರಚಿಸಿಕೊಂಡು ಅವರ ಪ್ರಗತಿಗೆ ಸಹಕಾರಿಯಾಗುವ ನಿಯಮ, ಕಾನೂನುಗಳನ್ನು ರೂಪಿಸಿಕೊಳ್ಳುತ್ತಾರೆ.
- ಪ್ರತ್ಯಕ್ಷ ಪ್ರಜಾಪ್ರಭುತ್ವ ಮಾದರಿ ಸರ್ಕಾರಗಳನ್ನು ಸಾಧಾರಣವಾಗಿ ಜನಸಂಖ್ಯೆ ಮತ್ತು ವಿಸ್ತೀರ್ಣಗಳಲ್ಲಿ ನಿಯಮಿತ ವ್ಯಾಪ್ತಿಯನ್ನು ಹೊಂದಿರುವ ದೇಶಗಳು ಪಾಲಿಸುತ್ತವೆ.
- ಈ ವ್ಯವಸ್ಥೆಗಳು ಪ್ರಾಚೀನ ಗ್ರೀಕ್ ಮತ್ತು ಪ್ರಸ್ತುತ ಸ್ವಿಜ್ಜರ್‌ಲೆಂಡ್ ದೇಶಗಳಲ್ಲಿ ಚಾಲ್ತಿಯಲ್ಲಿವೆ.
- ಪ್ರತ ್ಯಕ್ಷ ಪ್ರಜ ಾಪ್ರಭ ು ತ್ವವ ು ಪ್ರಜಾಭಿಪ್ರಾಯ ಮತ್ತು ನೇತೃತ್ವದ ಆಧಾರದ ಮೇಲೆ ಪರಿಣಾಮಕಾರಿಯಾಗಬಲ್ಲುದುದಾಗಿದೆ.
- ಭಾರತದಲ್ಲಿ ಈ ಪ್ರಕಾರದ ಸರ್ಕಾರದ ರಚನೆ ಅದರ ಭೌಗೋಳಿಕ ವ್ಯಾಪ್ತಿ ಮತ್ತು ಜನಸಂಖ್ಯೆ ಪ್ರಮಾಣದಿಂದಾಗಿ ರೂಢಿಸಿಕೊಳ್ಳುವುದು ಅಸಾಧ್ಯವಾದುದಾಗಿದೆ.

## ಪರೋಕ್ಷ ಪ್ರಜಾಪ್ರಭುತ್ವ (Indirect Democracy) :

- ಈ ಪ್ರಕಾರದ ಅಂದರೆ ಪರೋಕ್ಷ ಪ್ರಜಾಪ್ರಭುತ್ವ ಮಾದರಿಯ ಸರ್ಕಾರವು ಭಾರತ, ಅಮೇರಿಕಾ ಸಂಯುಕ್ತ ಸಂಸ್ಥಾನಗಳಂತಹ ರಾಷ್ಟ್ರಗಳಿಗೆ ಅತ್ಯಂತ ಸೂಕ್ತವಾದದ್ದಾಗಿದೆ.
- ಪರೋಕ್ಷ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರು ತಮ್ಮ ಪ್ರತಿನಿಧಿಗಳನ್ನು ಆವರ್ತಿತ ಚುನಾವಣೆಗಳಲ್ಲಿ ಚುನಾಯಿಸಿ ಶಾಸನ ಸಭೆಗಳಿಗೆ ಕಳುಹಿಸಿಕೊಡುತ್ತಾರೆ.
- ಚುನಾಯಿತಗೊಂಡ ಈ ಸದಸ್ಯರುಗಳು ಶಾಸನಗಳನ್ನು ಅಥವಾ ಕಾನೂನುಗಳನ್ನು ರೂಪಿಸಿಕೊಂಡು ಆಡಳಿತ ನಿರ್ವಹಣೆ ಮಾಡುತ್ತಾರೆ.
- ಈ ದೃಷ್ಠಿಯಿಂದ ಪ್ರಜಾಪ್ರಭುತ್ವವನ್ನು ಕಾಲಕಾಲಕ್ಕೆ ನಡೆಯುವ ಚುನಾವಣೆಗಳಲ್ಲಿ ಚುನಾಯಿತಗೊಂಡ ಜನಪ್ರತಿನಿಧಿಗಳ ಸರ್ಕಾರ ಎಂದು ವ್ಯಾಖಾನಿಸಬಹುದಾಗಿದೆ.
- ಹೀಗೆ ಚುನಾಯಿತಗೊಂಡ ಪ್ರತಿನಿಧಿಗಳು ತಮ್ಮ ರಾಷ್ಟ್ರನಾಯಕನನ್ನು ಆಯ್ಕೆ ಮಾಡಿಕೊಳ್ಳುತ್ತಾರೆ.

## ಪ್ರಜಾಪ್ರಭುತ್ವದ ಲಕ್ಷಣಗಳು

- ಪ್ರಜಾಪ್ರಭುತ್ವವು ಜನತೆಯ ಸಮ್ಮತಿಯನ್ನು ಆಧರಿಸಿದೆ. ಇದು ಜನರ ಸರ್ಕಾರ.
- ಇದು ಪ್ರಾತಿನಿಧಿಕ ಸರ್ಕಾರವಾಗಿದ್ದು, ಜನರು ತಮ್ಮ ಪ್ರತಿನಿಧಿಗಳನ್ನು ಚುನಾಯಿಸುತ್ತಾರೆ. ಪ್ರತಿನಿಧಿಗಳು ಜನರ ಪರವಾಗಿ ಕಾನೂನುಗಳನ್ನು ರಚಿಸುತ್ತಾರೆ.
- ಇದು ಸಾರ್ವತ್ರಿಕ ವಯಸ್ಕ ಮತದಾನದ ತತ್ವವನ್ನು ಆಧರಿಸಿದೆ.
- ಇಲ್ಲಿ ಚುನಾವಣೆಗಳು ನಿಗದಿತ ಕಾಲಕ್ಕೆ ನಿಷ್ಪಕ್ಷಪಾತವಾಗಿ ಹಾಗೂ ಮುಕ್ತವಾಗಿ ಚುನಾವಣೆಗಳು ನಡೆಯುತ್ತವೆ.
- ನಾಗರಿಕರು ಯಾವ ತಾರತಮ್ಯವಿಲ್ಲದೆ ಸ್ವತಂತ್ರವಾಗಿ ಹಾಗೂ ಮುಕ್ತವಾಗಿ ಹಕ್ಕುಗಳನ್ನು ಅನುಭವಿಸುತ್ತಾರೆ. ಆದುದರಿಂದ ಪ್ರಜಾಪ್ರಭುತ್ವದಲ್ಲಿ ವೈಯಕ್ತಿಕ ಅಭಿವೃದ್ಧಿಗೆ ಅವಕಾಶವಿದೆ. ಪ್ರಜಾಪ್ರಭುತ್ವ ಸರ್ಕಾರವು ಜನತೆಗೆ ಸ್ಪಂದಿಸುವ ಸರ್ಕಾರವಾಗಿದೆ.
- ಸರ್ಕಾರವು ಜನರ ಆಶೋತ್ತರಗಳಿಗೆ ಸ್ಪಂದಿಸದಿದ್ದರೆ, ಅಂತಹ ಸರ್ಕಾರವನ್ನು ಶಾಂತಿಯುತ ಹಾಗೂ ಸಂವಿಧಾನಾತ್ಮಕ ವಿಧಾನಗಳಿಂದ ಬದಲಾಯಿಸುವ ಹಕ್ಕು ಜನತೆಗೆ ಇರುತ್ತದೆ.

- ಈ ಸರ್ಕಾರದಲ್ಲಿ ಎಲ್ಲಾ ಪ್ರಜೆಗಳು ಕಾನೂನು ದೃಷ್ಟಿಯಲ್ಲಿ ಸಮಾನರು ಎಂಬ ಕಾನೂನಿನ ಆಧಿಪತ್ಯ ತತ್ವವನ್ನು ಅನುಸರಿಸಲಾಗುತ್ತದೆ. ಸರ್ಕಾರದ ಅಧಿಕಾರಗಳು ಸಂವಿಧಾನಾತ್ಮಕ ನಿಯಮಗಳ ಮಿತಿಗೊಳಪಟ್ಟಿವೆ.
- ರಾಜಕೀಯ ಪಕ್ಷಗಳ ಅಸ್ತಿತ್ವ ಪ್ರಜಾಪ್ರಭುತ್ವದ ಮತ್ತೊಂದು ಲಕ್ಷಣವಾಗಿದೆ. ಜನರು ತಮ್ಮದೇ ಆದ ಪಕ್ಷಗಳನ್ನು ರಚಿಸಿಕೊಳ್ಳಲು ಪ್ರಜಾಪ್ರಭುತ್ವದಲ್ಲಿ ಅವಕಾಶವಿರುತ್ತದೆ.
- ಪ್ರಜಾಪ್ರಭುತ್ವವು ಪ್ರತಿಯೊಬ್ಬ ವ್ಯಕ್ತಿಯ ಘನತೆಯನ್ನು ಎತ್ತಿಹಿಡಿಯುತ್ತದೆ.
- ಸಮಾನತೆ ಮತ್ತು ಸ್ವಾತಂತ್ರ್ಯ ಪ್ರಜಾಪ್ರಭುತ್ವದ ಪ್ರಮುಖ ತತ್ವಗಳಾಗಿದೆ. ಜಾತಿ, ಧರ್ಮ, ಲಿಂಗ ಮತ್ತು ಅಂತಸ್ತು
- ಇವುಗಳ ಆಧಾರದ ಮೇಲೆ ಜನರಲ್ಲಿ ತಾರತಮ್ಯ ಮಾಡುವಂತಿಲ್ಲ.
- ಪ್ರಜಾಪ್ರಭುತ್ವದಲ್ಲಿ ಅಂತಿಮ ಅಧಿಕಾರ (ಪರಮಾಧಿಕಾರ) ಜನತೆಯಲ್ಲಿದ್ದು, ಸರ್ಕಾರ ಜನರಿಂದ ಅಧಿಕಾರ ಪಡೆಯುತ್ತದೆ. ಈ ಉದ್ದೇಶಕ್ಕಾಗಿ ನಿಗದಿತಕಾಲಕ್ಕೆ ಚುನಾವಣೆಗಳು ನಡೆಯುತ್ತವೆ. ಭಾರತದಲ್ಲಿ ಸಾರ್ವತ್ರಿಕ ಚುನಾವಣೆಗಳು ಐದು ವರ್ಷಕ್ಕೊಮ್ಮೆ ನಡೆಯುತ್ತವೆ.
- ಪ್ರಜಾಪ್ರಭುತ್ವವು ಕಲ್ಯಾಣ ರಾಜ್ಯವಾಗಿದ್ದು, ಜನರ ಸರ್ವತೋಮುಖ ಅಭಿವೃದ್ಧಿಗಾಗಿ ವಿಶೇಷ ಗಮನಹರಿಸುತ್ತದೆ.

## ಪ್ರಜಾಪ್ರಭುತ್ವದ ಯಶಸ್ಸಿಗೆ ಅವಶ್ಯಕವಾಗುವ ಅಂಶಗಳು

1. ಪ್ರಜಾಪ್ರಭುತ್ವವನ್ನು ರಕ್ಷಿಸುವ ಮನೋಭಾವ ಜನರಲ್ಲಿರಬೇಕು.
2. ಜನರು ಸದಾ ಜಾಗರೂಕತೆಯಿಂದಿರಬೇಕು.
3. ಪ್ರಜಾಪ್ರಭುತ್ವದ ಯಶಸ್ಸು ಯಾವತ್ತೂ ತಾಳ್ಮೆಯನ್ನು ಅವಲಂಬಿಸಿರುವುದಾಗಿದೆ. ಜನರು ಕೊಡುವ ಹಾಗೂ ತೆಗೆದುಕೊಳ್ಳುವ ತತ್ವಪಾಲಕರಾಗಬೇಕು.
4. ಪ್ರಜಾಪ್ರಭುತ್ವದ ಯಶಸ್ಸು ಉತ್ತಮ ನಾಯಕತ್ವವನ್ನು ಅವಲಂಬಿಸಿರುತ್ತದೆ. ನಾಯಕನಾದವನು ಸಾಮಾನ್ಯ ಪ್ರಜೆಯ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವ, ಅವುಗಳಿಗೆ ಪರಿಹಾರ ನೀಡುವ, ಸೇವಾ ಮನೋಭಾವ, ದೇಶಭಕ್ತಿ ಮತ್ತು ತ್ಯಾಗಮಾಡುವ ಗುಣಗಳನ್ನು ಹೊಂದಿರಬೇಕು.
5. ವಿರೋಧ ಪಕ್ಷವು ಆಡಳಿತ ಪಕ್ಷದ ಕಾರ್ಯ ವೈಖರಿಗಳ ಬಗ್ಗೆ ಸದಾ ಎಚ್ಚರಿಕೆಯಿಂದಿದ್ದು ಅವರುಗಳ ಸರ್ವಾಧಿಕಾರಿ ಧೋರಣೆಗಳನ್ನು ನಿಯಂತ್ರಿಸುತ್ತಿರಬೇಕು.
6. ವಿದ್ಯಾವಂತ ಮತ್ತು ಪ್ರಜ್ಞಾವಂತ ಮತದಾರ ಪ್ರಜಾಪ್ರಭುತ್ವದ ಯಶಸ್ಸಿಗೆ ಕಾರಣನಾಗಬಲ್ಲ.
7. ಪ್ರಜಾಪ್ರಭುತ್ವದ ಯಶಸ್ಸು ಜನರ ಮೇಲೆ ಅವಲಂಬಿತವಾಗಿದ್ದು, ಜನರು ಕಡ್ಡಾಯವಾಗಿ ಮತ ಚಲಾಯಿಸಬೇಕು ಮತ್ತು ಜನರು ಭ್ರಷ್ಟ ಹಾಗೂ ಅನಿಷ್ಟ ಮಾರ್ಗಗಳನ್ನು ಅನುಸರಿಸಬಾರದು. ಜನರು ತಮ್ಮ ಸಮಸ್ಯೆಗಳಿಗೆ ಸ್ಪಂದಿಸುವಂತಹ ಯೋಗ್ಯ ಹಾಗೂ ಭ್ರಷ್ಟರಲ್ಲದ ಅಭ್ಯರ್ಥಿಗಳನ್ನು ಚುನಾಯಿಸಬೇಕು.
8. ಸ್ವತಂತ್ರ ನಿರ್ಭಯ, ನಿಷ್ಪಕ್ಷಪಾತ ಪ್ರತಿಕಾ ಮಾಧ್ಯಮ ಪ್ರಜಾಪ್ರಭುತ್ವದ ಯಶಸ್ಸಿಗೆ ಪ್ರಮುಖ ಕಾರಣವಾಗುತ್ತದೆ.
9. ಉತ್ತಮವಾಗಿ ಸಂಘಟಿತವಾದ ಪರಿಣಾಮಕಾರಿ ಮತ್ತು ಜವಾಬ್ದಾರಿಯುತ ಸ್ಥಳೀಯ ಸಂಸ್ಥೆಗಳು ಪ್ರಜಾಪ್ರಭುತ್ವದ ಯಶಸ್ಸಿಗೆ ಕಾರಣವಾಗುತ್ತದೆ.

## ಪ್ರಜಾಪ್ರಭುತ್ವದ ಅನುಕೂಲಗಳು

- ಪ್ರಪಂಚದ ಬಹುತೇಕ ರಾಷ್ಟ್ರಗಳು, ಪ್ರಜಾಪ್ರಭುತ್ವ ಮಾದರಿ ಸರ್ಕಾರಗಳು ಬಹು ಅನುಕೂಲಕಾರಿಯಾದವುಗಳೆಂದು ಸ್ವೀಕರಿಸಿ ಆಚರಣೆಯಲ್ಲಿ ರೂಡಿಸಿಕೊಂಡಿವೆ. ಪ್ರಜಾಪ್ರಭುತ್ವದ ಅನುಕೂಲಗಳು ಈ ಕೆಳಗಿನಂತಿವೆ :

1. ಪ್ರಜಾಪ್ರಭುತ್ವವು ಪ್ರಜೆಗಳ ಹಕ್ಕು ಮತ್ತು ಸ್ವಾತಂತ್ರ್ಯವನ್ನು ಸ್ವತಂತ್ರ ನ್ಯಾಯಾಂಗದಡಿಯಲ್ಲಿ ರಕ್ಷಿಸುತ್ತದೆ.
2. ಪ್ರಜಾಪ್ರಭುತ್ವವು ಸಮಾನತೆಯ ತತ್ವಾಧಾರಿತವಾದುದಾಗಿದೆ.
3. ಪ್ರಜಾಪ್ರಭುತ್ವದಲ್ಲಿ ಜನರು ನಿರ್ಧಾರ ಕೈಗೊಳ್ಳುವಲ್ಲಿ ಸ್ವತಃ ಭಾಗಿಯಾಗಿ ಕಾನೂನು ರಚಿಸಿಕೊಳ್ಳುವ ಅವಕಾಶವಿರುತ್ತದೆ.
4. ಜನರು ತಮ್ಮ ಆಯ್ಕೆಯ ಪ್ರತಿನಿಧಿ ಮತ್ತು ಸರ್ಕಾರವನ್ನು ಚುನಾಯಿಸಿಕೊಳ್ಳಬಹುದಾಗಿದೆ.
5. ಪ್ರಜಾಪ್ರಭುತ್ವದಲ್ಲಿ ನಿರ್ಧಾರಕ ತೀರ್ಪುಗಳು ಸಾರ್ವಜನಿಕರ ಅಭಿಪ್ರಾಯ ಮತ್ತು ಚರ್ಚೆಗಳ ಮೂಲಕ ನಿರ್ಧರಿಸಲಾಗುತ್ತವೆ.
6. ವಿರೋಧ ಪಕ್ಷವು ಆಡಳಿತ ಪಕ್ಷದ ದುರುಪಯೋಗವನ್ನು ಪರೀಕ್ಷಿಸಿ ತಡೆಗಟ್ಟುವ ಅವಕಾಶವಿದೆ.
7. ವ್ಯಕ್ತಿಯ ವ್ಯಕ್ತಿತ್ವ ವಿಕಸನಕ್ಕೆ ಮೂಲಭೂತ ಹಕ್ಕು ಅವಕಾಶ ಕಲ್ಪಿಸುತ್ತವೆ.
8. ಪ್ರಜಾಪ್ರಭುತ್ವವು ಶಾಂತಿಯುತವಾಗಿ ಚುನಾವಣೆ ಮೂಲಕ ಸರ್ಕಾರಗಳನ್ನು ಬದಲಿಸಲು ಅವಕಾಶವಿರುವುದರಿಂದ ಕ್ರಾಂತಿಗಳನ್ನು ಪುರಸ್ಕರಿಸುವುದಿಲ್ಲ.
9. ಪ್ರಜಾಪ್ರಭುತ್ವವು ರಾಷ್ಟ್ರೀಯತೆ, ದೇಶಭಕ್ತಿ, ಪ್ರಜಾಗೌರವಗಳನ್ನು ಅಭಿವೃದ್ಧಿಗೊಳಿಸಿ ವಿವಿಧತೆಯಲ್ಲಿ ಏಕತೆಯನ್ನು ಹುಟ್ಟು ಹಾಕುತ್ತದೆ.

## ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿ:

- ಭಾರತ ಪ್ರತಿನಿಧಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿದ್ದು ಚುನಾವಣೆಗಳು ಈ ನಿಟ್ಟಿನಲ್ಲಿ ಮಹತ್ತರ ಪಾತ್ರ ವಹಿಸುತ್ತವೆ.
- ಜನರು ಚುನಾವಣೆಗಳಲ್ಲಿ ಮತ ಚಲಾಯಿಸುವ ಹಕ್ಕನ್ನು ಹೊಂದಿದ್ದು,
- ಭಾರತದಲ್ಲಿ ಈ ಹಕ್ಕನ್ನು 18 ವರ್ಷಕ್ಕಿಂತ ಮೇಲ್ಪಟ್ಟ ವಯಸ್ಕರುಗಳು ಜಾತಿ, ಮತ, ವಿದ್ಯಾರ್ಹತೆ, ವರ್ಣ, ವರ್ಗ, ಧಾರ್ಮಿಕತೆ, ಭಾಷೆ, ಲಿಂಗ ಭೇದವಿಲ್ಲದೆ ಚಲಾಯಿಸಬಹುದಾಗಿದೆ.
  - ಭಾರತದಲ್ಲಿ 1989ಕ್ಕಿಂತ ಹಿಂದೆ ಮತದಾನದ ಕನಿಷ್ಠ ವಯಸ್ಸನ್ನು 21 ವರ್ಷಗಳಿಗೆ ನಿಗದಿಗೊಳಿಸಲಾಗಿತ್ತು.
- 61ನೇ ಸಂವಿಧಾನ ತಿದ್ದುಪಡಿಯ ಪ್ರಕಾರ 1989ರಿಂದ ಈಚೆಗೆ ಮತದಾನದ ಕನಿಷ್ಠ ವಯಸ್ಸನ್ನು 21 ವರ್ಷಗಳಿಂದ 18 ವರ್ಷಗಳಿಗೆ ಇಳಿಸಲಾಗಿದೆ.

## ಮಾಧ್ಯಮ ಮತ್ತು ಪ್ರಜಾಪ್ರಭುತ್ವ :

- ಪ್ರಸ್ತುತ ದಿನಂಪ್ರತಿ ಘಟಿಸುತ್ತಿರುವ ಘಟನೆಗಳ ಮಾಹಿತಿಗಳನ್ನು ಮಾಧ್ಯಮವು ಒದಗಿಸುತ್ತಿದೆ.
- ಮಾಧ್ಯಮಗಳು ಸರ್ಕಾರದ ಯೋಜನೆಗಳು ಮತ್ತು ನಿಯಮಗಳನ್ನು ಜನರು ತಿಳಿಯುವಂತೆ ಮಾಡುತ್ತವೆ.
- ಮಾಧ್ಯಮಗಳು ಸರ್ಕಾರದ ಕಾರ್ಯವೈಖರಿಯ ಬಗ್ಗೆ ಜನರಿಗೆ ಮಾಹಿತಿ ನೀಡುವುದರ ಜೊತೆ ಪ್ರಮುಖ ಸಂಗತಿಗಳ ಬಗೆಗಿನ ಜನಸಾಮಾನ್ಯರ ಅಭಿಪ್ರಾಯವನ್ನು ಸರ್ಕಾರ ಗಮನಿಸುವಂತೆ ಮಾಡುತ್ತದೆ.
- ಜನಸಾಮನ್ಯರಿಂದ ಎತ್ತಲ್ಪಟ್ಟ ವಿಷಯಗಳಿಗೆ ಜನಪ್ರತಿನಿಧಿಗಳು ಉತ್ತರಿಸುವಂತೆ ಮತ್ತು ಜವಾಬ್ದಾರರಾಗುವಂತೆ ಮಾಧ್ಯಮಗಳು ನೋಡಿಕೊಳ್ಳುತ್ತವೆ.

- ಆದಕಾರಣ ಮಾಧ್ಯಮವು ಯಾವತ್ತೂ ಸತ್ಯವಾದ, ಭೀತಿಯಿಲ್ಲದ, ಪಕ್ಷಪಾತವಿಲ್ಲದ ಅಭಿಪ್ರಾಯಗಳನ್ನು ದೊರಕಿಸಿಕೊಡಬೇಕೆ ಹೊರತು ಸೂಕ್ಷ್ಮ ವಿಚಾರಗಳನ್ನು ವೈಭವೀಕರಿಸಿ ಭಯದ ವಾತಾವರಣ ಸೃಷ್ಟಿಸಬಾರದು.
  ಮಾಧ್ಯಮವು ಸಂಗತಿಗಳನ್ನು
- ಬಿತ್ತರಿಸುವಾಗ ಐಕ್ಯತೆ, ಜಾತ್ಯತೀತತೆ, ಪ್ರಜಾಪ್ರಭುತ್ವದ ತತ್ವಗಳಿಗೆ ಹಾನಿಯುಂಟಾಗದಂತೆ ಎಚ್ಚರವಹಿಸಬೇಕು.
- ಪತ್ರಿಕಾ ಮಾಧ್ಯಮವು ದಿನಪತ್ರಿಕೆಗಳು ಮತ್ತು ನಿಯತಕಾಲಿಕೆಗಳನ್ನು ಒಳಗೊಂಡಿದ್ದು,
- ಭಾರತದಲ್ಲಿ ಈ ದಿನಪತ್ರಿಕೆಗಳು ಮತ್ತು ನಿಯತಕಾಲಿಕೆಗಳು ಕಡ್ಡಾಯವಾಗಿ ದಿನ ಪತ್ರಿಕಾ ನೋಂದಣಿ (Registrar of News Papers ) ಕಛೇರಿಯಲ್ಲಿ ನೋಂದಾಯಿಸಿಕೊಂಡಿರತಕ್ಕದ್ದು.
- ದಿನಪತ್ರಿಕೆಗಳ ಗುಣಮಟ್ಟ ಹೆಚ್ಚಿಸಲು ಮತ್ತು ಪತ್ರಿಕಾ ಸ್ವಾತಂತ್ರ್ಯ ರಕ್ಷಣೆಗಾಗಿ 'ಭಾರತೀಯ ಪತ್ರಿಕಾ ಪರಿಷತ್ತು' (Press Council of India) ಎಂಬ ಸಂಸ್ಥೆಯನ್ನು ಭಾರತದಲ್ಲಿ ಸ್ಥಾಪಿಸಲಾಗಿದೆ.
- ಮಾಧ್ಯಮಕ್ಷೇತ್ರದಲ್ಲಿ ದೂರದರ್ಶನ, ರೇಡಿಯೋ, ಅಂತರ್ಜಾಲ ಇತ್ಯಾದಿ ವಿದ್ಯುನ್ಮಾನ ಮಾಧ್ಯಮಗಳೂ ಸೇರ್ಪಡೆಗೊಂಡಿವೆ.
- ಈ ವಿದ್ಯುನ್ಮಾನ ಮಧ್ಯವರ್ತಿಗಳು 1962 ರ ಬಾನುಲಿ ಪ್ರಸರಣ ಸಂಹಿತೆಯಡಿ ಕಾರ್ಯನಿರ್ವಹಿಸುತ್ತಿದ್ದು ಜನಸಾಮಾನ್ಯರು, ಅಧಿಕಾರಿಗಳು ಮತ್ತು ಇತರೆ ನಾಯಕರುಗಳು ಅನೇಕ ಪ್ರಸಂಗಗಳಲ್ಲಿ ವಿಚಾರ ವಿನಿಮಯ ಮಾಡಿಕೊಳ್ಳಲು ಅವಕಾಶ ಕಲ್ಪಿಸಿಕೊಟ್ಟಿವೆ.

## ಮಾಹಿತಿ ಹಕ್ಕು :

- ಭಾರತ ದೇಶದಲ್ಲಿ ಮಾಹಿತಿ ಹಕ್ಕು ಕಾಯಿದೆಯನ್ನು 2005 ರಲ್ಲಿ ಜಾರಿಗೊಳಿಸಲಾಗಿದೆ.
- ಈ ಕಾಯ್ದೆಯ ಮುಖ್ಯ ಉದ್ದೇಶವೇನೆಂದರೆ ಸಾರ್ವಜನಿಕ ಜೀವನದಲ್ಲಿ ಭ್ರಷ್ಟಾಚಾರ ನಿರ್ಮೂಲನೆ,
- ಆಡಳಿತದಲ್ಲಿ ಪಾರದರ್ಶಕತೆ ತರುವುದು ಹಾಗೂ ಸರ್ಕಾರವನ್ನು ಪ್ರಜೆಗಳಿಗೆ ಜವಾಬ್ದಾರಯುತವಾಗಿರುವಂತೆ
- ಮಾಡುವುದು.
- ಜನಸಾಮಾನ್ಯರು ಒಂದು ಅರ್ಜಿಯ ಮೂಲಕ ಸರ್ಕಾರದಿಂದ ತಮಗೆ ಬೇಕಾದ
- ಮಾಹಿತಿಯನ್ನು ಪಡೆದುಕೊಳ್ಳುವ ಅವಕಾಶವನ್ನು ಈ ಕಾಯಿದೆ ಒದಗಿಸಿಕೊಟ್ಟಿದೆ.
- ಸಂಬಂಧಪಟ್ಟ ಅಧಿಕಾರಿಯು ಮಾಹಿತಿ ಬಯಸಿದವರಿಗೆ ಮಾಹಿತಿಯನ್ನು ಅರ್ಜಿಸಲ್ಲಿಸಿದ ಮೂವತ್ತು ದಿವಸಗಳೊಳಗೆ
- ರವಾನಿಸಬೇಕಾಗುತ್ತದೆ.
- ಜೀವನ ಮತ್ತು ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ನಲವತ್ತೆಂಟು ಘಂಟೆಗಳೊಳಗೆ ನೀಡಬೇಕಾಗುತ್ತದೆ.
- ಆದಾಗ್ಯೂ ವ್ಯಕ್ತಿ ಬಯಸಿದ ಮಾಹಿತಿಯು ರಾಷ್ಟ್ರದ ರಕ್ಷಣೆ, ಭದ್ರತೆ, ಐಕ್ಯತೆಗಳಿಗೆ ಸಂಬಂಧಪಟ್ಟಿದ್ದರೆ ಸರ್ಕಾರ ಮಾಹಿತಿ ನೀಡುವಿಕೆಯನ್ನು ತಿರಸ್ಕರಿಸಬಹುದಾಗಿದೆ.

## ರಾಜ್ಯ ಸರ್ಕಾರ

* ಭಾರತವು 29 ರಾಜ್ಯಗಳನ್ನು ಮತ್ತು 6 ಕೇಂದ್ರಾಡಳಿತ ಪ್ರದೇಶಗಳನ್ನು ಒಳಗೊಂಡ ಕ್ಕೂಟ ರಾಷ್ಟ್ರವಾಗಿದೆ.

* ಕೇಂದ್ರ ಸರ್ಕಾರದ ಮಾದರಿಯಂತೆ ರಾಜ್ಯಗಳು ಶಾಸಕಾಂಗ, ಕಾರ್ಯಾಂಗಗಳನ್ನು ಹೊಂದಿವೆ.

* ರಾಜ್ಯ ಸರ್ಕಾರಗಳು ರಾಜ್ಯ ಪಟ್ಟಿಯಲ್ಲಿನ ವಿಷಯಗಳ ಬಗ್ಗೆ ಕಾನೂನು ಮಾಡುವ ಮತ್ತು ಜಾರಿಗೆ ತರುವ ಅಧಿಕಾರ ಹೊಂದಿವೆ.

* ಕೆಲವು ರಾಜ್ಯಗಳು ವಿಧಾನ ಸಭೆಯನ್ನು (ಕೆಳಮನೆ) ಮಾತ್ರ ಹೊಂದಿದ್ದು, ವಿಧಾನ ಪರಿಷತ್ತು (ಮೇಲ್ಮನೆ) ಇರುವುದಿಲ್ಲ.

**ರಾಜ್ಯ ಶಾಸಕಾಂಗ**

* ರಾಜ್ಯ ಶಾಸಕಾಂಗವು ರಾಜ್ಯಪಾಲರನ್ನು ಒಳಗೊಂಡಿದೆ.

* ರಾಜ್ಯ ಶಾಸಕಾಂಗವು ಎರಡು ಸದನಗಳು ಇಲ್ಲವೇ ಒಂದೇ ಸದನಗಳನ್ನು ಹೊಂದಿರಬಹುದು.

* ಮೇಲ್ಮನೆಯನ್ನು ವಿಧಾನ ಪರಿಷತ್ತು ಮತ್ತು ಕೆಳಮನೆಯನ್ನು ವಿಧಾನ ಸಭೆ ಎಂದು ಕರೆಯುತ್ತಾರೆ.

* ವಿಧಾನ ಸಭೆಯು ರಾಜ್ಯದ ಜನತೆಯನ್ನು ಪ್ರತಿನಿಧಿಸಿದರೆ, ವಿಧಾನ ಪರಿಷತ್ ವಿವಿಧ ಕ್ಷೇತ್ರಗಳನ್ನು ಪ್ರತಿನಿಧಿಸುತ್ತದೆ.

**ವಿಧಾನ ಸಭೆ**

* ರಾಜ್ಯ ಶಾಸಕಾಂಗದ ಕೆಳಮನೆಯನ್ನು **"ವಿಧಾನ ಸಭೆ"** ಎಂದು ಕರೆಯುತ್ತಾರೆ.

* ವಿಧಾನ ಸಭೆಯ ಸದಸ್ಯರ ಸಂಖ್ಯೆಯು ಆ ರಾಜ್ಯದ ಜನಸಂಖ್ಯೆಯನ್ನು ಆಧರಿಸುತ್ತದೆ.

* ರಾಜ್ಯ ವಿಧಾನ ಸಭೆಗಳ ಗರಿಷ್ಠ ಸದಸ್ಯರ ಸಂಖ್ಯೆಯು **500,** ಕನಿಷ್ಠ **60.**

* ಆದರೆ ಚಿಕ್ಕ ರಾಜ್ಯಗಳಲ್ಲಿ ಸದಸ್ಯರ ಸಂಖ್ಯೆ ಕಡಿಮೆ ಇದೆ. ಉದಾ: ಮಿಜೋರಾಂ, ಗೋವಾ.

* ಕರ್ನಾಟಕ ವಿಧಾನ ಸಭೆಯು **225** ಸದಸ್ಯರನ್ನು ಹೊಂದಿದೆ.

* ಇದರಲ್ಲಿ **224** ಸದಸ್ಯರು ಜನರಿಂದ ಚುನಾಯಿಸಲ್ಪಟ್ಟರೆ, ಉಳಿದ ಒಬ್ಬರು ಆಂಗ್ಲೋ-ಇಂಡಿಯನ್ ಸಮುದಾಯದವರನ್ನು ರಾಜ್ಯಪಾಲರು ನಾಮಕರಣ ಮಾಡುತ್ತಾರೆ.

## ವಿಧಾನ ಸಭೆಯ ಸದಸ್ಯರ ಅರ್ಹತೆಗಳು

1) ಭಾರತದ ಪ್ರಜೆಯಾಗಿರಬೇಕು.

2) 25 ವರ್ಷ ವಯೋಮಿತಿಯನ್ನು ಹೊಂದಿರಬೇಕು.

3) ಸರ್ಕಾರದ ಯಾವುದೇ ಹುದ್ದೆಯಲ್ಲಿರಬಾರದು.

4) ಮಾನಸಿಕ ಸ್ವಾಸ್ಥ್ಯ ಕಳೆದುಕೊಂಡಿರಬಾರದು.

5) ನ್ಯಾಯಾಲಯದಿಂದ ಅಪರಾಧ ಶಿಕ್ಷೆಗೆ ಒಳಗಾಗಿರಬಾರದು.

6) ಸಂಸತ್ತು ಕಾಲಕಾಲಕ್ಕೆ ನಿಗಧಿಪಡಿಸುವ ಅರ್ಹತೆ ಪಡೆದಿರಬೇಕು.

## ಅಧಿಕಾರ ಅವಧಿ

* ವಿಧಾನ ಸಭೆಯ ಸದಸ್ಯರ ಅಧಿಕಾರ ಅವಧಿ 5 ವರ್ಷ.
* ಸದಸ್ಯರು ತಮ್ಮ ಸ್ಥಾನದಲ್ಲಿ ಮುಂದುವರೆಯಲು ಇಷ್ಟವಿಲ್ಲದಿದ್ದರೆ ಸಭಾಧ್ಯಕ್ಷರಿಗೆ ರಾಜೀನಾಮೆ ನೀಡಬೇಕು.
* ವಿಧಾನ ಸಭೆಯನ್ನು ಅವಧಿಗೆ ಮುಂಚೆ ಸಂಪುಟದ ಸಲಹೆಯಂತೆ ವಿಸರ್ಜಿಸಬುಹುದು.
* ವಿಧಾನ ಸಭೆ ವಿಸರ್ಜನೆಯಾದಾಗ ಆ ರಾಜ್ಯವನ್ನು ರಾಷ್ಟ್ರಪತಿಯ ಆಳ್ವಿಕೆಗೆ ಒಳಪಡಿಸಬಹುದು.
* ಸದಸ್ಯರು ತಮ್ಮಲ್ಲಿ ಒಬ್ಬರನ್ನು ಸಭಾಧ್ಯಕ್ಷರನ್ನಾಗಿ, ಮತ್ತೊಬ್ಬರನ್ನು ಉಪಸಭಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗುವುದು.
* ಸದನದ ಅಧ್ಯಕ್ಷತೆಯನ್ನು ಸಭಾಧ್ಯಕ್ಷರು ವಹಿಸಿಕೊಳ್ಳುತ್ತಾರೆ.
* ಅಧಿವೇಶನ ಕರೆಯುವ, ಮುಂದುಡೂವ ಅಧಿಕಾರ ಹೊಂದಿದ್ದಾರೆ.
* ಸದನದಲ್ಲಿ ಶಾಂತಿ, ಶಿಸ್ತನ್ನು ಕಾಪಾಡುವ ಕಾರ್ಯವನ್ನು ಮಾಡುತ್ತಾರೆ.
* ಸದನದಲ್ಲಿ ಸಮ ಮತಗಳು ಬಂದಾಗ ನಿರ್ಣಾಯಕ ಮತ ಚಲಾಯಿಸುತ್ತಾರೆ.

## ವಿಧಾನ ಸಭೆಯ ಅಧಿಕಾರ ಕಾರ್ಯಗಳು

**1) ಶಾಸನೀಯ ಕಾರ್ಯಗಳು :**

* **ವಿಧಾನ ಸಭೆಯು ರಾಜ್ಯಪಟ್ಟಿ ಮತ್ತು ಸಮವರ್ತಿ ಪಟ್ಟಿಯ ಮೇಲೆ ಶಾಸನ ಮಾಡುವ ಅಧಿಕಾರ ಹೊಂದಿದೆ.**
* **ಮಸೂದೆಗಳು ಶಾಸನಗಳಾಗಬೇಕಾದರೆ ಎರಡು ಸದನಗಳ ಒಪ್ಪಿಗೆ ಪಡೆದು ರಾಜ್ಯಪಾಲರ ಸಹಿ ಪಡೆಯಬೇಕು.**
* **ರಾಜ್ಯಪಾಲರು ಮಸೂದೆಯನ್ನು ತಡೆಹಿಡಿಯುವ, ವಾಪಸ್ಸು ಕಳಿಸುವ, ರಾಷ್ಟ್ರಪತಿಯ ಒಪ್ಪಿಗೆಗೆ ಕಳುಹಿಸಬಹುದು.**

**2) ಹಣಕಾಸಿನ ಕಾರ್ಯಗಳು :**

* **ಹಣಕಾಸಿನ ವಿಷಯದಲ್ಲಿ ವಿಧಾನಸಭೆಗೆ ಹೆಚ್ಚು ಅಧಿಕಾರವಿದೆ.**
* **ಹಣಕಾಸಿನ ಮಸೂದೆಯನ್ನು ಮೊದಲು ವಿಧಾನ ಸಭೆಯಲ್ಲಿ ಮಂಡಿಸಬೇಕು.**
* **ವಿಧಾನ ಸಭೆ ಅಂಗಿಕರಿಸಿದ ಮಸೂದೆಯನ್ನು ವಿಧಾನ ಪರಿಷತ್ ಗೆ ಕಳುಹಿಸಲಾಗುವುದು.**
* **ವಿಧಾನ ಪರಿಷತ್ ಹಣಕಾಸಿನ ಮಸೂದೆಯನ್ನು 14 ದಿನಗಳವರೆಗೆ ತಡೆಹಿಡಿಯುವ ಅಧಿಕಾರ ಮಾತ್ರ ಇದೆ.**

**3) ಕಾರ್ಯಾಂಗದ ಮೇಲೆ ನಿಯಂತ್ರಣ :**

* ರಾಜ್ಯ ಕಾರ್ಯಾಂಗವು ವಿಧಾನ ಸಭೆಗೆ ಜವಾಬ್ದಾರಿಯಾಗಿರುತ್ತದೆ.

* ವಿಧಾನ ಸಭೆಯ ವಿಶ್ವಾಸವಿರುವವರೆಗೆ ಮಂತ್ರಿಮಂಡಲ ಅಧಿಕಾರದಲ್ಲಿ ಮುಂದುವರೆಯುತ್ತದೆ.

* ವಿಧಾನ ಸಭೆಯಲ್ಲಿ ವಿಶ್ವಾಸ ಕಳೆದುಕೊಂಡಾಗ ಮಂತ್ರಿಮಂಡಲ ರಾಜೀನಾಮೆ ನೀಡಬೇಕಾಗುತ್ತದೆ.

* ಪ್ರತಿಯೊಬ್ಬ ಮಂತ್ರಿ ವೈಯಕ್ತಿಕವಾಗಿ ಹಾಗೂ ಮಂತ್ರಿಂಡಲ ಸಾಮೂಹಿಕವಾಗಿ ವಿಧಾನ ಸಭೆಗೆ ಜವಾಬ್ದಾರಿಯಾಗಿರುತ್ತದೆ.

**4) ಚುನಾವಣೆಯ ಅಧಿಕಾರ ಕಾರ್ಯ :**

* ರಾಷ್ಟ್ರಪತಿಗಳು
* ರಾಜ್ಯಸಭಾ ಸದಸ್ಯರು
* ವಿಧಾನ ಪರಿಷತ್ ಸದಸ್ಯರು
* ವಿಧಾನಸಭಾಧ್ಯಕ್ಷರು
* ಉಪ ಸಭಾಧ್ಯಕ್ಷರು

**5) ಇತರೆ ಅಧಿಕಾರ ಕಾರ್ಯ :**

* ಕೇಂದ್ರ ಸಂಸತ್ತು ಅಂಗೀಕರಿಸಿದ ಮಸೂದೆಗಳ ಬಗ್ಗೆ ಚರ್ಚಿಸುವುದು.
* ರಾಜ್ಯ ಲೋಕಸೇವಾ ಆಯೋಗದ ವರದಿಯ ಬಗ್ಗೆ ಚರ್ಚೆ.

**ವಿಧಾನ ಪರಿಷತ್**

* ರಾಜ್ಯ ಶಾಸಕಾಂಗದ ಮೇಲ್ಮನೆಯನ್ನು **"ವಿಧಾನ ಪರಿಷತ್ತು"** ಎಂದು ಕರೆಯುತ್ತಾರೆ.
* ಇದರ ಸದಸ್ಯರ ಸಂಖ್ಯೆಯು ಆ ರಾಜ್ಯದ ವಿಧಾನ ಸಭಾ ಸದಸ್ಯರ 1/3 ರಷ್ಟು ಇರುತ್ತದೆ.
* ವಿಧಾನ ಪರಿಷತ್ತಿನ ಸದಸ್ಯರ ಸಂಖ್ಯೆ 40 ಕ್ಕಿಂತ ಕಡಿಮೆ ಇರಬಾರದು.
* ಕೆಲವು ರಾಜ್ಯಗಳಲ್ಲಿ ವಿಧಾನ ಪರಿಷತ್ತು ಇರುವುದಿಲ್ಲ.
* ಕರ್ನಾಟಕದ ವಿಧಾನ ಪರಿಷತ್ ಸದಸ್ಯರ ಸಂಖ್ಯೆ 75 ಇದೆ.
* ವಿಧಾನ ಸಭಾ ಸದಸ್ಯರಿಂದ, ಸ್ಥಳೀಯ ಸಂಸ್ಥೆಗಳಿಂದ, ಪದವೀಧರ ಕ್ಷೇತ್ರದಿಂದ, ಶಿಕ್ಷಕರ ಕ್ಷೇತ್ರದಿಂದ ಆಯ್ಕೆ ಆಗುತ್ತಾರೆ.
* ಕಲೆ, ಸಾಹಿತ್ಯ, ಶಿಕ್ಷಣ, ಸಮಾಜ ಸೇವೆ, ವಿಜ್ಞಾನ ಮುಂತಾದ ಕ್ಷೇತ್ರದ ಸೇವೆಯನ್ನು ಪರಿಗಣಿಸಿ ರಾಜ್ಯಪಾಲರು ನಾಮಕರಣ ಮಾಡುತ್ತಾರೆ.
* ಇದು ಖಾಯಂ ಸದನವಾಗಿದೆ.
* ಪ್ರತಿ ಎರಡು ವರ್ಷಕ್ಕೊಮ್ಮೆ ಅವಧಿ ಪೂರ್ಣಗೊಂಡ 1/3 ರಷ್ಟು ಸದಸ್ಯರು ನಿವೃತ್ತಿಯಾಗುತ್ತಾರೆ.

**ವಿಧಾನ ಪರಿಷತ್ ಸದಸ್ಯರ ಅರ್ಹತೆಗಳು**

1) ಭಾರತದ ಪ್ರಜೆಯಾಗಿರಬೇಕು.

2) 30 ವರ್ಷ ವಯೋಮಿತಿಯನ್ನು ಹೊಂದಿರಬೇಕು.

3) ವಿಧಾನ ಸಭಾ ಸದಸ್ಯರಿಗೆ ಇರಬೇಕಾದ ಎಲ್ಲಾ ಅರ್ಹತೆಗಳನ್ನು ಹೊಂದಿರಬೇಕು.

**ವಿಧಾನ ಪರಿಷತ್ ಸದಸ್ಯರ ಅಧಿಕಾರವಧಿ**

* ವಿಧಾನ ಪರಿಷತ್ ಸದಸ್ಯರ ಅಧಿಕಾರವಧಿ 6 ವರ್ಷಗಳು.

* ಪ್ರತಿ 2 ವರ್ಷಕ್ಕೊಮ್ಮೆ 1/3 ರಷ್ಟು ಸದಸ್ಯರು ನಿವೃತ್ತರಾಗುತ್ತಾರೆ.

* ಸದಸ್ಯರು ತಮ್ಮಲ್ಲಿ ಒಬ್ಬರನ್ನು ಸಭಾಧ್ಯಕ್ಷರನ್ನಾಗಿ, ಮತ್ತೊಬ್ಬರನ್ನು ಉಪಸಭಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗುವುದು.

* ಸಭಾಧ್ಯಕ್ಷರು ಸದನದ ಅಧ್ಯಕ್ಷತೆಯನ್ನು ವಹಿಸಿಕೊಂಡು ಕಾರ್ಯಕಲಾಪಗಳನ್ನು ನಿರ್ವಹಿಸಿಕೊಂಡು ಹೋಗುತ್ತಾರೆ.

**ವಿಧಾನ ಪರಿಷತ್ ನ ಅಧಿಕಾರಗಳು**

**1) ಶಾಸನೀಯ ಅಧಿಕಾರಗಳು :**

* ಎರಡು ಸದನಗಳಿಗೆ ಶಾಸನ ಮಾಡಲು ಸಮಾನ ಅಧಿಕಾರಗಳಿವೆ.

* ಸಾಮಾನ್ಯ ಮಸೂದೆಗಳನ್ನು ಮೊದಲು ಯಾವುದಾದರೂ ಸದನದಲ್ಲಿ ಮಂಡಿಸಬಹುದು.

* ಒಂದು ಸದನ ಅಂಗೀಕರಿಸಿದ ಮಸೂದೆಯನ್ನು ಮತ್ತೊಂದು ಸದನಕ್ಕೆ ಕಳುಹಿಸಲಾಗುವುದು.

* ವಿಧಾನ ಪರಿಷತ್ ಮಸೂದೆಯನ್ನು 3 ತಿಂಗಳವರೆಗೆ ತಡೆಹಿಡಿಯಬಹುದು.

* ವಿಧಾನ ಪರಿಷತ್ ಗೆ ಎರಡನೇ ಬಾರಿ ಕಳುಹಿಸಿದಾಗ ಒಂದು ತಿಂಗಳಲ್ಲಿ ಒಪ್ಪಿಗೆ ನೀಡಬೇಕು.

* ಒಂದು ತಿಂಗಳಲ್ಲಿ ಒಪ್ಪಿಗೆ ನೀಡದಿದ್ದರೆ, ಎರಡು ಸದನಗಳಿಂದ ಅಂಗೀಕರಿಸಲ್ಪಟ್ಟಿದೆ ಎಂದು ಭಾವಿಸಿ ರಾಜ್ಯಪಾಲರ ಒಪ್ಪಿಗೆಗಾಗಿ ಕಳುಹಿಸಲಾಗುವುದು.

**2) ಶಾಸನಾ ರಚನಾ ಪ್ರಕಿಯೆ :**

* ಮೊದಲ ಓದುವಿಕೆ : ಸದನದಲ್ಲಿ ಮಸೂದೆ ಮಂಡಿಸುವವರು ಮಸೂದೆಯನ್ನು ಗಟ್ಟಿಯಾಗಿ ಓದುತ್ತಾರೆ.

* ಎರಡನೇ ಓದುವಿಕೆ : ಮಸೂದೆಯ ಬಗ್ಗೆ ಚರ್ಚಿಸುವುದು ಅಥವಾ ಸಂಬಧಪಟ್ಟ ಸಮಿತಿಗೆ ಕಳುಹಿಸುವುದು.

* ಮೂನನೇ ಓದುವಿಕೆ : ಬಾಯಿ ಮಾತಿನ ಅಥವಾ ಮೌಖಿಕ ಚರ್ಚೆ ಮಾಡುವುದು.

* ಈ ರೀತಿಯ ಪ್ರಕ್ರಿಯೆ ಎರಡು ಸದನಗಳಲ್ಲಿ ನಡೆಯುತ್ತದೆ.

* ಈ ಪ್ರಕ್ರಿಯೆ ಮುಗಿದ ನಂತರ ರಾಜ್ಯಪಾಲರ ಒಪ್ಪಿಗೆಗಾಗಿ ಕಳುಹಿಸಲಾಗುವುದು.

* ರಾಜ್ಯಪಾಲರು ಒಪ್ಪಿಗೆ ನೀಡಬಹುದು ಅಥವಾ ರಾಷ್ಟ್ರಪತಿಗಳ ಒಪ್ಪಿಗೆಗಾಗಿ ಕಳುಹಿಸಬಹುದು.

**3) ಹಣಕಾಸಿನ ಅಧಿಕಾರಗಳು :**

* ವಿಧಾನ ಪರಿಷತ್ ಗೆ ಹೆಚ್ಚಿನ ಹಣಕಾಸಿನ ಅಧಿಕಾರಗಳಿಲ್ಲ.

* ಹಣಕಾಸಿನ ಮಸೂದೆಯನ್ನು 14 ದಿನಗಳವರೆಗೆ ತಡೆಹಿಡಿಯುವ ಅಧಿಕಾರ ಮಾತ್ರವಿದೆ.

* 14 ದಿನಕ್ಕಿಂತ ಹೆಚ್ಚು ಕಾಲ ತಡೆ ಹಿಡಿದರೆ ಎರಡು ಸದನಗಳಿಂದ ಅಂಗೀಕಾರವಾಗಿದೆ ಎಂದು ತಿಳಿದು ರಾಜ್ಯಪಾಲರ ಒಪ್ಪಿಗೆಗೆ ಕಳುಹಿಸಲಾಗುವುದು.

**4) ಆಡಳಿತಾಧಿಕಾರ :**

* ಇದು ಆಡಳಿತದ ಮೇಲೆ ನಿಯಂತ್ರಣ ಹೊಂದಿದೆ.

* ಸದಸ್ಯರು ಸಚಿವರಿಗೆ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯಬಹುದು.

* ಸಚಿವರ ಉತ್ತರ ಸಮರ್ಪಕವಾಗಿಲ್ಲದಿದ್ದರೆ ರಾಜೀನಾಮೆ ನೀಡಲು ಒತ್ತಾಯಿಸಬಹುದು.

**5) ಚರ್ಚಾ ಅಧಿಕಾರ :**

⁎ ಕರ್ಾರದ ಕಾರ್ಯಕ್ರಮಗಳು, ನೀತಿ ನಿರ್ಧಾರಗಳು.

⁎ ಮಸೂದೆಗಳ ಬಗ್ಗೆ ಚರ್ಚೆ.

⁎ ಇದು ಹಿರಿಯರ ಸದನವಾಗಿರುವುದರಿಂದ ಚರ್ಚೆ ಬಹಳ ಗಂಭೀರವಾಗಿರುತ್ತದೆ.

**ರಾಜ್ಯ ಕಾರ್ಯಾಂಗ**

⁎ ರಾಜ್ಯ ಕಾರ್ಯಾಂಗವು ರಾಜ್ಯಪಾಲರು, ಮುಖ್ಯಮಂತ್ರಿ ಮತ್ತು ಮಂತ್ರಿಮಂಡಲವನ್ನು ಒಳಗೊಂಡಿದೆ.

⁎ ರಾಜ್ಯಪಾಲರು ಸಂವಿಧಾನಾತ್ಮಕವಾಗಿ ಮುಖ್ಯಸ್ಥರಾದರೆ, ಮುಖ್ಯಮಂತ್ರಿ ಮತ್ತು ಮಂತ್ರಿಮಂಡಲ ನಿಜವಾದ ಕಾರ್ಯಾಂಗವಾಗಿದೆ.

⁎ ರಾಜ್ಯಪಾಲರು ತಾವಾಗಲಿ ಅಥವಾ ತಮ್ಮ ಅಧೀನ ಅಧಿಕಾರಿಗಳ ಮೂಲಕವಾಗಲಿ ಅಧಿಕಾರ ಚಲಾಯಿಸಬಹುದು.

**ರಾಜ್ಯಪಾಲರು**

⁎ ಪ್ರಧಾನಿ ಮತ್ತು ಮಂತ್ರಿಮಂಡಲದ ಶಿಫಾರಸ್ಸಿನ ಮೇರೆಗೆ ರಾಜ್ಯಪಾಲರನ್ನು ರಾಷ್ಟ್ರಪತಿಗಳು ನೇಮಕ ಮಾಡುತ್ತಾರೆ.

⁎ ಪ್ರತಿ ರಾಜ್ಯಕ್ಕೆ ಒಬ್ಬ ರಾಜ್ಯಪಾಲ ಇರಬೇಕು ಎಂಬ ನಿಯಮವಿದೆ, ಆದರೆ ಎರಡು ಮತ್ತು ಎರಡಕ್ಕಿಂತ ಹೆಚ್ಚು ರಾಜ್ಯಗಳಿಗೆ ಒಬ್ಬರೆ ರಾಜ್ಯಪಾಲರನ್ನು ನೇಮಕ ಮಾಡಬಹುದು.

**ರಾಜ್ಯಪಾಲರ ಅರ್ಹತೆಗಳು**

1) ಭಾರತದ ಪ್ರಜೆಯಾಗಿರಬೇಕು.

2) 35 ವರ್ಷ ವಯೋಮಿತಿಯನ್ನು ಹೊಂದಿರಬೇಕು.

3) ಯಾವುದೇ ಸರ್ಕಾರಿ ಉದ್ದೆಯಲ್ಲಿರಬಾರದು.

4) ಸಂಸತ್ ಅಥವಾ ರಾಜ್ಯ ಶಾಸಕಾಂಗದ ಸದಸ್ಯರಾಗಿರಬಾರದು. ಸದಸ್ಯತ್ವ ಹೊಂದಿದ್ದರೆ ಆಯ್ಕೆಯಾದ ನಂತರ ರಾಜೀನಾಮೆಯನ್ನು ನೀಡಬೇಕು.

**ರಾಜ್ಯಪಾಲರ ಅಧಿಕಾರವಧಿ**

⁎ ರಾಜ್ಯಪಾಲರ ಅಧಿಕಾರ ಅವಧಿ 5 ವರ್ಷಗಳು.

⁎ ರಾಜ್ಯಪಾಲರು ಆಯ್ಕೆ ಆಗುವವರೆಗೆ ಅಧಿಕಾರದಲ್ಲಿ ಮುಂದುವರೆಯುತ್ತಾರೆ.

⁎ ಕೇಂದ್ರ ಮಂತ್ರಿ ಮಂಡಲದ ಸಲಹೆಯ ಮೇರೆಗೆ ರಾಷ್ಟ್ರಪತಿಗಳು ಅವಧಿಗೆ ಮುಂಚಿತವಾಗಿಯೇ ವಾಪಸ್ ಕರೆಸಿಕೊಳ್ಳಬಹುದು.

⁎ ರಾಜ್ಯಪಾಲರಿಗೆ ವೇತನ, ಭತ್ಯೆ, ಬಾಡಿಗೆ ಇಲ್ಲದ ಅಧಿಕೃತ ನಿವಾಸವನ್ನು ನೀಡಲಾಗಿದೆ.

⁎ ಇವರ ಅಧಿಕಾರ ಕಾರ್ಯಗಳನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ ಹಾಗೂ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡುವಂತಿಲ್ಲಾ.

**ಅಧಿಕಾರ ಕಾರ್ಯಗಳು**

⁎ ಕಾನೂನು ಬದ್ದವಾಗಿ ಎಲ್ಲ ಅಧಿಕಾರಗಳು ರಾಜ್ಯಪಾಲರಿಗೆ ಸೇರಿವೆ.

⁎ ರಾಜ್ಯಪಾಲರ ಅಧಿಕಾರವನ್ನು ನೈಜವಾಗಿ ಮುಖ್ಯಮಂತ್ರಿ ಮತ್ತು ಮಂತ್ರಿಮಂಡಲ ಚಲಾಯಿಸುತ್ತದೆ.

**1) ಕಾರ್ಯಾಂಗಾಧಿಕಾರಗಳು :**

* ಇವರು ನಾಮಮಾತ್ರ ಕಾರ್ಯಾಂಗದ ಮುಖ್ಯಸ್ಥರಾಗಿದ್ದಾರೆ.
* ರಾಜ್ಯದ ಮುಖ್ಯಮಂತ್ರಿಯನ್ನು ನೇಮಕ ಮಾಡುತ್ತಾರೆ.
* ಮುಖ್ಯಮಂತ್ರಿಯ ಸಲಹೆಯ ಮೇರೆಗೆ ಇತರೆ ಮಂತ್ರಿಗಳನ್ನು ನೇಮಕ ಮಾಡುತ್ತಾರೆ.
* ರಾಜ್ಯ ಲೋಕಸೇವಾ ಆಯೋಗದ ಅಧ್ಯಕ್ಷರನ್ನು ನೇಮಕ ಮಾಡುತ್ತಾರೆ.
* ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಕುಲಪತಿಗಳು ಇವರೆ ಆಗಿರುತ್ತಾರೆ.
* ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಉಪ ಕುಲಪತಿಗಳನ್ನು ಇವರೆ ನೇಮಕ ಮಾಡುತ್ತಾರೆ.

**2) ಶಾಸನೀಯ ಅಧಿಕಾರಗಳು :**

* ಮುಖ್ಯಮಂತ್ರಿಯ ಶಿಫಾರಸ್ಸಿನ ಮೇರೆಗೆ ವಿಧಾನ ಸಭೆಯನ್ನು ವಿಸರ್ಜಿಸುವ ಅಧಿಕಾರವಿದೆ.
* ಅಧಿವೇಶನ ಕರೆಯುವ, ಮುಂದೂಡುವ ಅಧಿಕಾರವಿದೆ.
* ವಿಧಾನ ಸಭೆಗೆ ಒಬ್ಬರು ಮತ್ತು ವಿಧಾನ ಪರಿಷತ್ ಗೆ ಆರನೇ ಒಂದರಷ್ಟು ಸದಸ್ಯರನ್ನು ನೇಮಕ ಮಾಡುವ ಅಧಿಕಾರ ಹೊಂದಿದ್ದಾರೆ.
* ಶಾಸಕಾಂಗ ಅಂಗೀಕರಿಸಿದ ಮಸೂದೆಗಳಿಗೆ ತಮ್ಮ ಅಂಕಿತ ಹಾಕುವ, ತಡೆ ಹಿಡಿಯುವ ಅಧಿಕಾರವಿದೆ.
* ರಾಜ್ಯಪಾಲರು ಅಗತ್ಯ ಬಿದ್ದರೆ ಮಸೂದೆಗಳನ್ನು ರಾಷ್ಟ್ರಪತಿಗಳ ಅಂಕಿತಕ್ಕೆ ಕಳುಹಿಸಬಹುದು.

**3) ಹಣಕಾಸಿನ ಅಧಿಕಾರಗಳು :**

* ರಾಜ್ಯಪಾಲರ ಒಪ್ಪಿಗೆ ಇಲ್ಲದೆ ಹಣಕಾಸಿನ ಮಸೂದೆಯನ್ನು ವಿಧಾನ ಸಭೆಯಲ್ಲಿ ಮಂಡಿಸುವಂತಿಲ್ಲ.
* ರಾಜ್ಯ ಹಣಕಾಸು ಆಯೋಗ, ಯೋಜನಾ ಆಯೋಗವನ್ನು ನೇಮಕ ಮಾಡುವ ಅಧಿಕಾರ ಹೊಂದಿದ್ದಾರೆ.
* ಬರ, ಪ್ರವಾಹ, ಭೂಕಂಪದಂತಹ ಆಕಸ್ಮಿಕ ಘಟನೆಗಳನ್ನು ನಿಭಾಯಿಸಲು ರಾಜ್ಯದ ತುರ್ತು ನಿಧಿಯಿಂದ ಹಣ ಬಿಡುಗಡೆ ಮಾಡಲು ಅವಕಾಶವಿದೆ.

**4) ನ್ಯಾಯಾಂಗೀಯ ಅಧಿಕಾರಗಳು :**

* ಅಪರಾಧಿಗಳಿಗೆ ಕ್ಷಮಾಧಾನ ಮಾಡುವ, ಶಿಕ್ಷೆಯನ್ನು ಕಡಿಮೆ ಮಾಡುವ, ರದ್ದು ಮಾಡುವ ಅಧಿಕಾವಿದೆ.
* ರಾಜ್ಯದ ಅಡ್ವೋಕೇಟ್ ಜನರಲ್ ರನ್ನು ನೇಮಕ ಮಾಡುವ ಅಧಿಕಾರವಿದೆ.
* ಜಿಲ್ಲಾ ನ್ಯಾಯಾಧೀಶರನ್ನು ನೇಮಕ ಮಾಡುವ ಅಧಿಕಾರವಿದೆ.

**5) ವಿವೇಚನಾಧಿಕಾರ :**

* ರಾಜ್ಯದ ಮುಖ್ಯಮಂತ್ರಿಯನ್ನು ನೇಮಕ ಮಾಡುವಾಗ.
* ಶಾಸಕಾಂಗ ಅಂಗೀಕರಿಸಿದ ಮಸೂದೆಗಳನ್ನು ರಾಷ್ಟ್ರಪತಿಗಳಿಗೆ ಕಳಿಸುವ ಸಮಯದಲ್ಲಿ.
* ರಾಜ್ಯದಲ್ಲಿ ಸಂವಿಧಾನಿಕ ಬಿಕ್ಕಟ್ಟು ಉಂಟಾದಾಗ.
* ಮಂತ್ರಿ ಮಂಡಲವನ್ನು ವಜಾ ಮಾಡುವಾಗ.
* ವಿಧಾನ ಸಭೆಯನ್ನು ವಿಸರ್ಜಿಸುವಾಗ.

## ರಾಜ್ಯ ಮಂತ್ರಿಮಂಡಲ

* ನಮ್ಮ ಸಂವಿಧಾನವು ರಾಜ್ಯಗಳಲ್ಲಿ ಮುಖ್ಯಮಂತ್ರಿ ನೇತೃತ್ವದ ಮಂತ್ರಿ ಮಂಡಲಕ್ಕೆ ಅವಕಾಶ ನೀಡಿದೆ.
* ಮಂತ್ರಿ ಮಂಡಲವು ರಾಜ್ಯಪಾಲರ ಕಾರ್ಯ ನಿರ್ವನೆಯಲ್ಲಿ ಸಹಾಯ ಮಾಡುತ್ತದೆ.
* ಮಂತ್ರಿ ಮಂಡಲವು ವಿಧಾನ ಸಭೆಗೆ ಜವಾಬ್ದಾರಿಯುತವಾಗಿರುತ್ತದೆ.

**ರಾಜ್ಯ ಮಂತ್ರಿಮಂಡಲ ಕಾರ್ಯಗಳು**

* ಸರ್ಕಾರದ ನೀತಿಯನ್ನು ನಿರ್ಧರಿಸುತ್ತದೆ.
* ರಾಜ್ಯದ ಆಯ-ವ್ಯಯವನ್ನು ತಯಾರಿಸುವುದು.
* ರಾಜ್ಯ ಲೋಕಸೇವಾ ಆಯೋಗದ ಅಧ್ಯಕ್ಷರು, ಸದಸ್ಯರು, ಲೋಕಾಯುಕ್ತರನ್ನು ನೇಮಕ ಮಾಡಲು ರಾಜ್ಯಪಾಲರಿಗೆ ಶಿಫಾರಸ್ಸು ಮಾಡುವುದು.
* ಪ್ರತಿಯೊಬ್ಬ ಮಂತ್ರಿ ತಮ್ಮ ಇಲಾಖೆಗೆ ಸಂಬಂಧಿಸಿದ ಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸುವಂತೆ ನೋಡಿಕೊಳ್ಳುವುದು.
* ವಿವಿಧ ಇಖಾಲೆಯ ಕಾರ್ಯಗಳನ್ನು ಮೇಲ್ವಿಚಾರಣೆ ಮಾಡುವುದು.

**ಮುಖ್ಯಮಂತ್ರಿ**

* ರಾಜ್ಯ ಸರ್ಕಾರದ ಮುಖ್ಯಸ್ಥರಾಗಿದ್ದಾರೆ.
* ರಾಜ್ಯ ಸರ್ಕಾರದ ಯಶಸ್ಸು ಅಥವಾ ಅವನತಿ ಇವರ ವರ್ಚಸ್ಸನ್ನುಅವಲಂಬಿಸಿದೆ.
* ಶಾಸಕಾಂಗದಲ್ಲಿ ಬಹುಮತ ಪಡೆದ ಪಕ್ಷದ ನಾಯಕರಾಗಿದ್ದಾರೆ.
* ರಾಜ್ಯದ ಸಮಸ್ತ ಅಧಿಕಾರವೆಲ್ಲವೂ ಇವರಿಗೆ ಸೇರಿವೆ.
* ಮುಖ್ಯಮಂತ್ರಿಗಳಾಗುವವರು ಯಾವುದಾದರೂ ಒಂದು ಸದನದ ಸದಸ್ಯತ್ವ ಹೊಂದಿರಬೇಕು.
* ಒಂದು ವೇಳೆ ಸದಸ್ಯತ್ವ ಹೊಂದಿರದಿದ್ದರೆ ೬ ತಿಂಗಳ ಒಳಗಾಗಿ ಯಾವುದಾದರೂ ಒಂದು ಸದನದ ಸದಸ್ಯತ್ವ ಹೊಂದಿರಬೇಕು.

**ಮುಖ್ಯಮಂತ್ರಿಯ ಅಧಿಕಾರ ಕಾರ್ಯಗಳು**

* ಸಚಿವರ ಪಟ್ಟಿ ಸಿದ್ದ ಪಡಿಸಿ ರಾಜ್ಯಪಾಲರಿಗೆ ಶಿಫಾರಸ್ಸು ಮಾಡುವುದು.
* ಸಚಿವರಿಗೆ ಖಾತೆಗಳನ್ನು ಹಂಚುವುದು ಮತ್ತು ಬದಲಾವಣೆ ಮಾಡುವುದು.
* ಮಂತ್ರಿಗಳನ್ನು ಸಂಪುಟದಿಂದ ವಜಾ ಮಾಡುವುದು.
* ಸಚಿವ ಸಂಪುಟದ ಅಧ್ಯಕ್ಷತೆ ವಹಿಸುವುದು.
* ವಿವಿಧ ಇಲಾಖೆಗಳ ಕಾರ್ಯದಕ್ಷತೆಯನ್ನು ಪರಿಶೀಲಿಸುವುದು.
* ವಿಧಾನ ಸಭೆಯನ್ನು ವಿಸರ್ಜಿಸಲು ರಾಜ್ಯಪಾಲರಿಗೆ ಶಿಫಾರಸ್ಸು ಮಾಡುವುದು.
* ರಾಜ್ಯಪಾಲರು ಮತ್ತು ಸಚಿವ ಸಂಪುಟದ ನಡುವೆ ಸಂಪರ್ಕದ ಸೇತುವೆ.
* ರಾಜ್ಯಪಾಲರಿಗೆ ಸಲಹೆಗಾರರು.
* ವಿವಿಧ ಹುದ್ದೆಗಳ ನೇಮಕಾತಿ ಮಾಡಲು ರಾಜ್ಯಪಾಲರಿಗೆ ಶಿಫಾರಸ್ಸು ಮಾಡುವುದು.

## ಲಿಂಗ ಬೇದವನ್ನು ಹೋಗಲಾಡಿಸುವುದು

- ಸಮಾಜವು ಸಂಕೀರ್ಣವಾದಂತೆಲ್ಲಾ, ಮುಗಿಲು ಮುಟ್ಟುವ ಕಾರ್ಯನಿರ್ವಹಣೆಯ ಬಿಕ್ಕಟ್ಟುಗಳು ಕೆಲವೊಮ್ಮೆ ವ್ಯಕ್ತಿ ಮತ್ತು ಸಂಸ್ಥೆಗಳನ್ನು ಕುಬ್ಜವಾಗಿಸಿ ಶೋಷಣೆಗೆ ದೂಡುವುದುಂಟು.
- ಅವು ಆಯಾ ಕಾಲದ ಸಾಮಾಜಿಕ ಶೋಷಣೆಗಳಾಗಿ, ಸಮಸ್ಯೆಗಳಾಗಿ ವ್ಯಕ್ತ ವಾಗುತ್ತವೆ.
- ಸಾಮಾಜಿಕ ಸಮಸ್ಯೆಗಳಲ್ಲಿ ಕೆಲವು ಆಧುನಿಕತೆಯ ಉತ್ಪನ್ನವೂ ಹೌದು! ಅವುಗಳಲ್ಲಿ ಕೆಲವನ್ನು ಇಲ್ಲಿ ನೀವು ತಿಳಿಯುವಿರಿ.
- ಭಾರತದಂತಹ ಅಭಿವೃದ್ಧಿ ಪಥದಲ್ಲಿರುವ ಸಮಾಜಗಳಲ್ಲಿ ಹಲವಾರು ಬಗೆಯ ಸಾಮಾಜಿಕ ಸಮಸ್ಯೆಗಳು ತಾಂಡವವಾಡುತ್ತಿವೆ.
- ಉದಾಹರಣೆಗೆ : ಮಿತಿಮೀರಿದ ಜನಸಂಖ್ಯೆ, ಬಡತನ, ನಿರುದ್ಯೋಗ, ಭಿಕ್ಷಾಟನೆ, ಬಾಲಾಪರಾಧ, ಬಾಲಕಾರ್ಮಿಕರ ಸಮಸ್ಯೆ, ಭ್ರಷ್ಟಾಚಾರ, ಮಹಿಳೆಯರ ಶೋಷಣೆ, ವರದಕ್ಷಿಣೆ ಕಿರುಕುಳ, ಯುವಜನರ ಅಶಾಂತಿ, ಇತ್ಯಾದಿ.

<u>**ಸ್ತ್ರೀಯರ ಮೇಲಿನ ಹಿಂಸಾಚಾರ:–**</u>

- ಭಾರತೀಯ ಸ್ತ್ರೀಯರು ಎದುರಿಸುತ್ತಿರುವ ಹಲವಾರು ಸಮಸ್ಯೆಗಳಲ್ಲಿ ಹಿಂಸಾಚಾರವೂ ಒಂದು.
- ಇತ್ತೀಚಿನ ಶೈಕ್ಷಣಿಕ, ಆರ್ಥಿಕ, ರಾಜಕೀಯ ಹಾಗೂ ಔದ್ಯೋಗಿಕ ಕ್ಷೇತ್ರಗಳಲ್ಲಿ ಸ್ತ್ರೀಯರ ಮೇಲೆ ಹಿಂಸಾಚಾರಗಳು ನಡೆಯುತ್ತಲೇ ಇವೆ.
- ಅತ್ಯಾಚಾರ, ದೌರ್ಜನ್ಯ, ವರದಕ್ಷಿಣೆ ಕಿರುಕುಳ, ದೈಹಿಕ ಮತ್ತು ಮಾನಸಿಕ ಕಿರುಕುಳ, ಗರ್ಭಪಾತಕ್ಕೆ ಪ್ರೇರೇಪಿಸುವುದು, ಅವಾಚ್ಯ ಪದಗಳ ಬಳಕೆ ಮುಂತಾದ ರೂಪದಲ್ಲಿ ಹಿಂಸಾಚಾರಗಳು ಕುಟುಂಬದ ಒಳಗೂ ಮತ್ತು ಹೊರಗೂ ಸ್ತ್ರೀಯರ ಮೇಲೆ ನಡೆಯುತ್ತಲೇ ಇವೆ. ಅವುಗಳಲ್ಲಿ ಕೆಲವು ಪ್ರಮುಖ ಸಮಸ್ಯೆಗಳ ಬಗ್ಗೆ ಚರ್ಚಿಸೋಣ.

**ವರದಕ್ಷಿಣೆ :**

- ವರದಕ್ಷಿಣೆ ಎಂಬುದು ಭಾರತೀಯ ವಿವಾಹ ಪದ್ಧತಿಯಲ್ಲಿ ಕಂಡು ಬಂದಿರುವ ಒಂದು ಆಚರಣೆ.
- ‘ವರ’ ಎಂದರೆ ವಿವಾಹವಾಗುವ ಪ್ರಾಪ್ತ ವಯಸ್ಸಿನ ಗಂಡು ಎಂದರ್ಥ. ದಕ್ಷಿಣೆ ಎಂದರೆ ‘ಬಳುವಳಿ ನೀಡುವಿಕೆ’.

- ವಿವಾಹದ ಉಡುಗೊರೆಯಾಗಿ ವಧುವಿನ ಕುಟುಂಬದವರಿಂದ ನಾನಾರೂಪದಲ್ಲಿ ಅಪೇಕ್ಷಿಸಲಾಗುವ ಸ್ವತ್ತು, ಚಿನ್ನಾಭರಣ, ನಗದು ಅಥವಾ ವಾಹನ ಇತ್ಯಾದಿಗಳು ವರದಕ್ಷಿಣೆಯ ರೂಪಗಳಾಗಿರುತ್ತವೆ. ವರದಕ್ಷಿಣೆಯನ್ನು ಕೊಡುವುದು ಹಾಗೂ ಪಡೆಯುವುದು ಶಿಕ್ಷಾರ್ಹ ಅಪರಾಧ.
- ವರನ ಕಡೆಯವರ ಬೇಡಿಕೆ ಮೇರೆಗೆ ಕೇಳಿದಷ್ಟು ಹಣ, ಚಿನ್ನಾಭರಣ ಇತ್ಯಾದಿಗಳನ್ನು ನೀಡಬೇಕಾದ ಅನಿವಾರ್ಯತೆ ವಧುವಿನ ಕಡೆಯವರಿಗೆ ಉಂಟಾದರೆ ಅದು ಒಂದು ಬಗೆಯ ಶೋಷಣೆಯಾಗುತ್ತದೆ.
- ಈ ಶೋಷಣೆಯಿಂದ ವಧುವಿನ ಕಡೆಯವರು ತೀವ್ರ ಆರ್ಥಿಕ ಮತ್ತು ಮಾನಸಿಕ ಸಂಕಷ್ಟಗಳಿಗೆ ಒಳಗಾಗುತ್ತಾರೆ.
- ಹೀಗೆ ವರದಕ್ಷಿಣೆ ಎಂಬುದು ಸ್ತ್ರೀಯರನ್ನು ಕಾಡುತ್ತಿರುವ ಒಂದು ಸಾಮಾಜಿಕ ಪಿಡುಗಾಗಿದೆ.
- ವರದಕ್ಷಿಣೆಯಿಂದ ಸ್ತ್ರೀಯರ ಮೇಲೆ ದೌರ್ಜನ್ಯವೆಸಗಲಾಗುತ್ತಿದೆಯಲ್ಲದೆ ಅವರನ್ನು ಶೋಷಣೆ, ಕೊಲೆ ಮತ್ತು ಹಿಂಸೆಗಳಿಗೆ ಒಳಪಡಿಸಲಾಗುತ್ತಿದೆ.
- **ವರದಕ್ಷಿಣೆಯ ದುಷ್ಪರಿಣಾಮಗಳು:–**
- ವರದಕ್ಷಿಣೆ ಸ್ತ್ರೀಯರ ಸ್ವಾಭಿಮಾನ, ಗೌರವ, ಸ್ಥಾನಮಾನವನ್ನು ಕುಗ್ಗಿಸುತ್ತದೆ ಮತ್ತು ಕೌಟುಂಬಿಕ ಕಲಹಗಳನ್ನುಂಟು ಮಾಡುತ್ತದೆ.
- ಅದು ಸ್ತ್ರೀ ಪುರುಷರ ನಡುವೆ ಒಡಕು ಉಂಟಾಗಲು ಕಾರಣವಾಗಿದೆ.
- ವರದಕ್ಷಿಣೆ ಪಿಡುಗಿನಿಂದಾಗಿ ಅನೈತಿಕತೆ ಮತ್ತು ಕ್ರೌರ್ಯ ಹೆಚ್ಚುವುದು, ಕೌಟುಂಬಿಕ ಸಂಬಂಧಗಳು ಹಾಳಾಗುವುವು.
- ವರದಕ್ಷಿಣೆ ಹಣದ ದಾಹದಿಂದಾಗಿ ಮೋಸದ ವಿವಾಹಗಳು ಕೂಡಾ ನಡೆಯುತ್ತಿವೆ.
- ಹೆಣ್ಣು ಭ್ರೂಣ ಹತ್ಯೆ ಮತ್ತು ಹೆಣ್ಣು ಶಿಶು ಹತ್ಯೆ ಪ್ರಕರಣಗಳು ಹೆಚ್ಚುತ್ತಿವೆ. ವಿವಾಹ ವಿಚ್ಛೇದನ ಪ್ರಕರಣಗಳ ಸಂಖ್ಯೆಗಳು ಹೆಚ್ಚುತ್ತಿವೆ.

**ವರದಕ್ಷಿಣೆ ಸಮಸ್ಯೆಯ ಪರಿಹಾರ ಕ್ರಮಗಳು :**

1. **1961 ರ ವರದಕ್ಷಿಣೆ ನಿಷೇಧ ಕಾಯ್ದೆ** : ವರದಕ್ಷಿಣೆ ಪಿಡುಗನ್ನು ಶಾಸನಾತ್ಮಕವಾಗಿ ನಿವಾರಣೆ ಮಾಡಲು ಭಾರತ ಸರ್ಕಾರ 1961 ರಲ್ಲಿ 'ವರದಕ್ಷಿಣೆ ನಿಷೇಧ' ಕಾಯ್ದೆಯನ್ನು ಜಾರಿಗೊಳಿಸಿತು. ವರದಕ್ಷಿಣೆ ಷರತ್ತಿನ ಮೇರೆಗೆ ವಿವಾಹವಾಗುವುದನ್ನು ಈ ಕಾನೂನು ನಿಷೇಧಿಸಿದೆ. ಈ ಕಾಯ್ದೆ ಉಲ್ಲಂಘಿಸಿದವರಿಗೆ 5000 ರೂ.ಗಳ ದಂಡ, ಇಲ್ಲವೇ 6 ತಿಂಗಳ ಕಾರಾಗೃಹವಾಸ, ಇಲ್ಲವೇ ಎರಡನ್ನೂ ಒಟ್ಟಿಗೆ ವಿಧಿಸಬಹುದಾಗಿದೆ.
2. **ಈ ಕಾಯ್ದೆಯನ್ನು 1986ರಲ್ಲಿ ತಿದ್ದುಪಡಿಮಾಡಿ** ಅದನ್ನು ಮತ್ತಷ್ಟು ಕಠಿಣಗೊಳಿಸಲಾಯಿತು. ತಿದ್ದುಪಡಿಗೊಂಡಿರುವ ಈ ಕಾಯ್ದೆ ಪ್ರಕಾರ ವರದಕ್ಷಿಣೆ ಕೊಡುವ ಮತ್ತು ತೆಗೆದುಕೊಳ್ಳುವ ಹಾಗೂ ಕೊಡುವಂತೆ ಒತ್ತಾಯಿಸುವ ವ್ಯಕ್ತಿಗಳಿಗೆ 5 ವರ್ಷಗಳಿಗೂ ಕಡಿಮೆಯಿರದ ಕಾರಾಗೃಹ ಶಿಕ್ಷೆ ಮತ್ತು 15,000 ರೂಗಳಿಗೆ ಕಡಿಮೆಯಿರದ ಹಣವನ್ನು ದಂಡವಾಗಿ ವಿಧಿಸಬಹುದು.
3. ವರದಕ್ಷಿಣೆ ಸಾವು ಪ್ರಕರಣವನ್ನು 'ಭಾರತ ದಂಡ ಸಂಹಿತೆ' (Indian Penal Code) ಹಾಗೂ 'ಭಾರತ ಅಪರಾಧ ವಿಚಾರಣಾ ಸಂಹಿತೆ'ಗೆ (Criminal Procedure Code.) ಸೇರ್ಪಡೆಗೊಳಿಸಲಾಗಿದೆ. ಈ ವಿಚಾರಣೆಯನ್ನು ಜಾಮೀನು ರಹಿತ ಮತ್ತು ರಾಜಿರಹಿತ ನೆಲೆಯಲ್ಲಿ ನಡೆಸಬಹುದಾಗಿದೆ.
4. ಕಾನೂನಿನ ಮೂಲಕವಲ್ಲದೆ ಜನಜಾಗೃತಿ, ಅಂತರ್ಜಾತಿ ವಿವಾಹ, ಆಧುನಿಕ ಪ್ರಚಾರ ಮಾಧ್ಯಮಗಳು, ಸ್ವಯಂ ಸೇವಾ ಸಂಘಟನೆಗಳು ಮತ್ತು ಮಹಿಳಾ ಸಂಘಟನೆಗಳನ್ನು ಪ್ರೋತ್ಸಾಹಿಸುವುದರ ಮೂಲಕ ವರದಕ್ಷಿಣೆ ಪಿಡುಗನ್ನು ತೊಲಗಿಸಬಹುದು.

**ಹೆಣ್ಣು ಭ್ರೂಣಹತ್ಯೆ ಮತ್ತು ಹೆಣ್ಣು ಶಿಶುಹತ್ಯೆ:-**

- ಆಧುನಿಕ ಸ್ವತಂತ್ರ ಭಾರತದ ಸ್ತ್ರೀಯರು ಎದುರಿಸುತ್ತಿರುವ ಸಮಸ್ಯೆಗಳಲ್ಲಿ ಹೆಣ್ಣು ಭ್ರೂಣ ಹತ್ಯೆ ಮತ್ತು ಹೆಣ್ಣು ಶಿಶು ಹತ್ಯೆಗಳೆರಡೂ ಕೂಡ ಅಮಾನವೀಯ ಪದ್ಧತಿಗಳಾಗಿವೆ.

**ಹೆಣ್ಣು ಭ್ರೂಣ ಹತ್ಯೆ:-**

- ಗರ್ಭದಲ್ಲಿರುವ ಭ್ರೂಣವು ಹೆಣ್ಣು ಭ್ರೂಣವಾಗಿದ್ದು, ಅದು ತಂದೆ-ತಾಯಿಯರಿಗೆ ಬೇಡವಾದರೆ ಅದನ್ನು ಗರ್ಭದಲ್ಲಿಯೇ ಕೊಂದು ಹಾಕುವುದೇ 'ಹೆಣ್ಣು ಭ್ರೂಣಹತ್ಯೆ'.
- ಆಧುನಿಕ ವೈದ್ಯಕೀಯ ಕ್ಷೇತ್ರದಲ್ಲಿ ಹೆಚ್ಚು ಪ್ರಗತಿಯಾಗಿರುವ ಹಿನ್ನೆಲೆಯಲ್ಲಿ ತಾಯಿಯ ಗರ್ಭದಲ್ಲಿರುವ ಭ್ರೂಣವು ಹೆಣ್ಣೇ ಅಥವಾ ಗಂಡೇ ಎಂಬುದನ್ನು ಲಿಂಗ ಪರೀಕ್ಷಾ ವಿಧಾನಗಳಿಂದ ತಿಳಿಯಲು ಸಾಧ್ಯವಾಗಿದೆ.
- ಗಂಡು ಮಕ್ಕಳ ಬಯಕೆಯ ವ್ಯಾಮೋಹದಿಂದಾಗಿ ಆಧುನಿಕ ತಂತ್ರಜ್ಞಾನದ ದುರ್ಬಳಕೆ ನಡೆಯುತ್ತಿದೆ.
- ಸ್ಕ್ಯಾನಿಂಗ್ ಎಂಬ ಆಧುನಿಕ ತಂತ್ರಜ್ಞಾನದ ಬಳಕೆಯಿಂದ ತಾಯಿಯ ಗರ್ಭದಲ್ಲಿರುವ ಮಗುವಿನ ಲಿಂಗವನ್ನು ಪತ್ತೆ ಹಚ್ಚಿ ಅದು ಹೆಣ್ಣು ಶಿಶುವಾಗಿದ್ದರೆ ಅದನ್ನು ಗರ್ಭದಲ್ಲಿಯೇ ಕೊಂದು ಹಾಕುವುದರ ಮೂಲಕ ಗರ್ಭಪಾತದ ಪ್ರಕರಣಗಳು ಹೆಚ್ಚುತ್ತಿವೆ.
- ಬಡತನ, ವರದಕ್ಷಿಣೆಯ ಭೀತಿ, ಅನಕ್ಷರತೆ, ಅಜ್ಞಾನ, ಸ್ತ್ರೀ ವಿರೋಧಿ ನಿಲುವುಗಳು, ಗಂಡುಮಗುವಿನ ಬಯಕೆ ಮುಂತಾದ ಕಾರಣಗಳಿಂದಾಗಿ ಹೆಣ್ಣು ಭ್ರೂಣ ಹತ್ಯೆ ಪ್ರಕರಣಗಳು ನಡೆಯುತ್ತಿವೆ.
- ಹೆಣ್ಣು ಭ್ರೂಣ ಹತ್ಯೆಯಂತಹ ಪ್ರಕರಣಗಳಿಂದ ಸ್ತ್ರೀಪುರುಷರ ಲಿಂಗಾನುಪಾತದಲ್ಲಿ ಏರುಪೇರು, ಲಿಂಗ ತಾರತಮ್ಯತೆ, ಹೆಣ್ಣಿನ ಅಪಮೌಲ್ಯೀಕರಣ ಮುಂತಾದ ದುಷ್ಪರಿಣಾಗಳುಂಟಾಗುತ್ತಿವೆ.
- ಆಧುನಿಕ ತಂತ್ರಜ್ಞಾನದ ಮೂಲಕ ಗರ್ಭದಲ್ಲಿರುವ ಲಿಂಗ ಪತ್ತೆ ಹಚ್ಚುವುದನ್ನು ನಿಯಂತ್ರಿಸಲು 1994 ರಲ್ಲಿ 'ಪ್ರಸವಪೂರ್ವ ಲಿಂಗ ಪರೀಕ್ಷೆ ಪ್ರತಿಬಂಧಕ ಕಾಯ್ದೆ'ಯನ್ನು ಜಾರಿಗೆ ತರಲಾಯಿತು. ಆದರೂ ರಹಸ್ಯವಾಗಿ ಹೆಣ್ಣು ಭ್ರೂಣ ಹತ್ಯೆ ಪ್ರಕರಣಗಳು ಇಂದಿಗೂ ನಡೆಯುತ್ತಲೇ ಇವೆ.

**ಹೆಣ್ಣು ಶಿಶು ಹತ್ಯೆ:-**

- 'ಜನನದ ನಂತರದಲ್ಲಿ ಹೆಣ್ಣು ಮಗುವನ್ನು ಹತ್ಯೆ ಮಾಡುವ ಕ್ರೂರ ಪದ್ಧತಿಯೇ ಹೆಣ್ಣು ಶಿಶು ಹತ್ಯೆ'.
- ಇತ್ತೀಚಿನ ದಿನಗಳಲ್ಲಿಯೂ ಹೆಣ್ಣು ಶಿಶು ಹತ್ಯೆಯ ಪ್ರಕರಣಗಳು ಅಲ್ಲಲ್ಲಿ ಬೆಳಕಿಗೆ ಬಂದಿವೆ.
- ಹೆಣ್ಣು ಶಿಶು ಹತ್ಯೆಯಂತಹ ಹೇಯ ಕೃತ್ಯಗಳನ್ನು ತಡೆಗಟ್ಟಲು ಸರ್ಕಾರ ಪ್ರತಿಬಂಧಕ ಕಾಯ್ದೆಗಳನ್ನು ಜಾರಿಗೊಳಿಸಿದೆ.
- ಹೆಣ್ಣು ಭ್ರೂಣ ಹತ್ಯೆ ಮತ್ತು ಹೆಣ್ಣು ಶಿಶು ಹತ್ಯೆಗಳೆರಡು ಶಿಕ್ಷಾರ್ಹ ಅಪರಾಧವಾಗಿವೆ.

**<u>ಮಹಿಳೆಯರ ಸ್ಥಾನಮಾನ :</u>**

- ಸ್ವಾತಂತ್ರ್ಯಪೂರ್ವದಲ್ಲಿಯೂ ಮಹಿಳೆಯ ಸಾಧನೆಗಳನ್ನು ಗುರುತಿಸಬಹುದಾಗಿದೆ.
- ಝಾನ್ಸಿರಾಣಿ ಲಕ್ಷ್ಮಿಬಾಯಿ, ಕಿತ್ತೂರುರಾಣಿ ಚನ್ನಮ್ಮ, ಅನಿಬೆಸೆಂಟ್, ಕಸ್ತೂರಬಾ ಗಾಂಧಿ ಮೊದಲಾದವರನ್ನು ಸ್ಮರಿಸಬಹುದಾಗಿದೆ.
- ಇಂದು ಮಹಿಳೆಯರು ವೈದ್ಯಕೀಯ, ಅಧ್ಯಾಪಕ, ಇಂಜಿನಿಯರ್, ಪೈಲಟ್, ಗಗನಯಾತ್ರಿ, ಪೋಲೀಸ್, ರಾಜಕೀಯ, ರಕ್ಷಣಾಪಡೆ ಈ ರೀತಿ ಎಲ್ಲಾ ಕ್ಷೇತ್ರಗಳಲ್ಲಿನ ಕಾರ್ಯಗಳಲ್ಲಿ ತೊಡಗಿದ್ದಾರೆ. ಆದರೂ ಮಹಿಳೆಯರ ಸ್ಥಾನಮಾನ ಇನ್ನೂ ಉತ್ತಮವಾಗಬೇಕಿದೆ.

- ಸಾಮಾಜಿಕ ಪದ್ಧತಿಗಳು, ಬಡತನ ಮತ್ತು ಅನಕ್ಷರತೆಯಂತಹ ಕಾರಣಗಳಿಂದ ಸ್ತ್ರೀಯರ ಸ್ಥಾನಮಾನವು ಪ್ರಗತಿಯ ಪಥದಲ್ಲಿ ಹಿಂದಿರುತ್ತದೆ. ಇದು ದೇಶದ ಅಭಿವೃದ್ಧಿಗೆ ಸಮಸ್ಯೆಯಾಗಿ ಕಾಡುತ್ತದೆ.
- ಮಹಿಳೆಯರ ಶಿಕ್ಷಣ ಮತ್ತು ಅಭಿವೃದ್ಧಿಯನ್ನು ಉತ್ತಮ ಪಡಿಸಲು ಸರ್ಕಾರವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯನ್ನು ಪ್ರಾರಂಭಿಸಿದೆ.
- ಇದರ ಮೂಲಕ ಮಹಿಳೆಯರ ಆರೋಗ್ಯ ಶಿಕ್ಷಣ ಮತ್ತು ಸಾಮಾಜಿಕ ಕ್ಷೇತ್ರದಲ್ಲಿನ ಸ್ಥಾನಮಾನವನ್ನು ಉತ್ತಮ ಪಡಿಸಲಾಗುತ್ತಿದೆ.
- ಮಹಿಳೆಯರ ಸಬಲೀಕರಣಕ್ಕಾಗಿ ಮಹಿಳಾ ಶಿಕ್ಷಣ, ಬಾಲ್ಯವಿವಾಹ ನಿಷೇಧಕಾಯ್ದೆ, ವರದಕ್ಷಿಣೆ ನಿಷೇಧ ಕಾಯ್ದೆ, ಮುಂತಾದ ಕಾರ್ಯಕ್ರಮಗಳನ್ನು ರೂಪಿಸಿದೆ.
- ಕರ್ನಾಟಕ ಸರ್ಕಾರವು 'ಸ್ತ್ರೀ ಶಕ್ತಿ' ಎಂಬ ಕಾರ್ಯಕ್ರಮವನ್ನು ರೂಪಿಸಿ, ಗ್ರಾಮಾಂತರ ಮಹಿಳೆಯರ ವಿಕಾಸಕ್ಕೆ ಪ್ರಯತ್ನಿಸಿದೆ.
- ಮಹಿಳೆಯರ ಸ್ವ–ಉದ್ಯೋಗಕ್ಕಾಗಿ ಸಾಲಸೌಲಭ್ಯ ಮತ್ತು ಸಬ್ಸಿಡಿ ನೀಡುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.
- ಮಹಿಳಾಮಂಡಲಗಳು, ಯುವತಿ ಮಂಡಲಗಳು, ಸ್ತ್ರೀ ಶಕ್ತಿ ಸಂಘಗಳು, ಸ್ವಸಹಾಯ ಸಂಘಗಳು ಮಹಿಳಾ ಸಹಕಾರಿ ಸಂಘಗಳು ಸ್ತ್ರೀಯರ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿವೆ.
- ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಮಹಿಳಾ ಆಯೋಗಗಳನ್ನು ರಚಿಸಿದ್ದು ಮಹಿಳೆಯರ ದೂರು–ದುಮ್ಮಾನಗಳನ್ನು ಇದು ಪರಿಶೀಲಿಸಿ ನ್ಯಾಯ ಒದಗಿಸಿಕೊಡುತ್ತಿದೆ.
- ಗ್ರಾಮ ಪಂಚಾಯ್ತಿ ಹಂತದಿಂದ ಸಂಸತ್ತಿನವರೆಗೂ ರಾಜಕೀಯದಲ್ಲಿ ಮಹಿಳಾ ಮೀಸಲಾತಿ ನೀಡುವಂತಹ ಪ್ರಯತ್ನ ನಡೆಯುತ್ತಿದ್ದು,
- ಈಗಾಗಲೇ ಕರ್ನಾಟಕದಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿನ ಚುನಾವಣೆಗಳಲ್ಲಿ ಮಹಿಳಾ ಮೀಸಲಾತಿಯನ್ನು ಶೇ 33 ರ ಪ್ರಮಾಣದಲ್ಲಿ ಅನುಷ್ಠಾನಗೊಳಿ ಸಲಾಗಿರುತ್ತದೆ.
- ಸರ್ಕಾರಿ ಉದ್ಯೋಗಗಳಲ್ಲಿ ಕೂಡಾ ಮಹಿಳೆಯರಿಗೆ ನಿಗದಿತ ಪ್ರಮಾಣದ ಮೀಸಲಾತಿಯನ್ನು ನೀಡಲಾಗುತ್ತದೆ.
- ಭಾರತದಲ್ಲಿ ಇಂದಿರಾಗಾಂಧಿಯವರು ಪ್ರಧಾನಮಂತ್ರಿಯಾಗಿ, ಪ್ರತಿಭಾಸಿಂಗ್ ಪಾಟೀಲ್‌ರವರು ರಾಷ್ಟ್ರಪತಿಯವರಾಗಿ ಕಾರ್ಯ ನಿರ್ವಹಿಸಿರುತ್ತಾರೆ.
- ಹಲವಾರು ಮಹಿಳೆಯರು, ರಾಜ್ಯಪಾಲರಾಗಿ, ಮುಖ್ಯಮಂತ್ರಿಗಳಾಗಿ, ವಿದೇಶೀ ರಾಯಭಾರಿಗಳಾಗಿ ಮತ್ತು ಇನ್ನಿತರ ಉನ್ನತ ಹುದ್ದೆಗಳನ್ನು ಅಲಂಕರಿಸಿ ಪರಿಣಾಮಕಾರಿಯಾಗಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆ.
- ಇಂದು ಉದ್ಯೋಗಗಳಲ್ಲಿ ಕೂಡಾ ಮಹಿಳೆಯರಿಗೆ ನಿಗದಿತ ಪ್ರಮಾಣದ ಮೀಸಲಾತಿಯನ್ನು ನೀಡಲಾಗುತ್ತಿದೆ.

## ಸಂವಿಧಾನ

**ಸಂವಿಧಾನದ ಅರ್ಥ** : ಇಡೀ ರಾಷ್ಟ್ರವನ್ನು ಒಂದು ಚೌಕಟ್ಟಿನಲ್ಲಿ ಹೇಗೆ ನಿಯಂತ್ರಿಸಬೇಕು ಎಂದು ತಿಳಿಸಿಕೊಡುವ ವ್ಯವಸ್ಥೆಯನ್ನು ಸಂವಿಧಾನ ಎನ್ನುವರು.

**ಸಂವಿಧಾನ ರಚನಾ ಸಭೆ** : ಮೋತಿಲಾಲ್ ನೆಹರು ಸಮಿತಿಯ ಶಿಪಾರಸ್ಸು ಹಾಗೂ ಕರಾಚಿ ಕಾಂಗ್ರೆಸ್ ಅಧಿವೇಶನದ ನಿರ್ಣಯಗಳು ಸಂವಿಧಾನ ರಚನಾ ಸಭೆ ರಚನೆಗೆ ಒತ್ತಾಯಿಸಿದವು.

**ಸಂವಿಧಾನ ರಚನಾ ಸಮಿತಿ**

- ಅಧ್ಯಕ್ಷರು : ಡಾ. ರಾಜೇಂದ್ರ ಪ್ರಸಾದ್
- **ಮೊದಲ ಸಂವಿಧಾನ ರಚನಾ ಸಭೆ : ಡಿಸೆಂಬರ್ 9 1946**
- ಅಧ್ಯಕ್ಷತೆ : ಸಚ್ಚಿದಾನಂದ ಸಿನ್ಹಾ ( ಹಂಗಾಮಿ ಅಧ್ಯಕ್ಷರು )
- **ಎರಡನೆಯ ಸಂವಿಧಾನ ರಚನಾ ಸಭೆ : ಡಿಸೆಂಬರ್ 11 1946**
- ಅಧ್ಯಕ್ಷತೆ : ಡಾ. ರಾಜೇಂದ್ರ ಪ್ರಸಾದ್
- ಸದಸ್ಯರು : ಜವಾಹರಲಾಲ್ ನೆಹರು, ಸರ್ದಾರ್ ವಲ್ಲಭ ಬಾಯಿ ಪಟೇಲ್, ಸುಚೇತಾ ಕೃಪಲಾನಿ, ಸರೋಜಿನಿ ನಾಯ್ಡು, ಕೆಂಗಲ್ ಹನುಮಂತಯ್ಯ, ಸಿ. ರಾಜಗೋಪಾಲಚಾರಿ, ಮೌಲಾನಾ ಅಬ್ದುಲ್ ಕಲಾಂ ಆಜಾದ್, ಕೆ.ಎಂ.ಮುನ್ಸಿ ಮುಂತಾದವರು.
- **ಸಂವಿಧಾನ ಕರಡು ಸಮಿತಿ**
- ಅಧ್ಯಕ್ಷರು : ಡಾ. ಬಿ ಆರ್ ಅಂಬೇಡ್ಕರ್
- ಸದಸ್ಯರು : ಎನ್ ಗೋಪಾಲಸ್ವಾಮಿ ಅಯ್ಯಂಗಾರ್, ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್, ವಿ.ಟಿ.ಕೃಷ್ಣಾಮಾಚಾರಿ, ಕೆ.ಎಂ.ಮುನ್ಸಿ ಮುಂತಾದವರು.

**ಸಂವಿಧಾನ ರಚನೆ :**

- 145 ದಿನ ಸಭೆ ( ಚರ್ಚೆ )
- 2 ವರ್ಷ,11 ತಿಂಗಳು,18 ದಿನ
- ಅಂಗೀಕಾರ : ನವೆಂಬರ್ 26, 1949
- ಜಾರಿಗೆ : ಜನವರಿ 26, 1950

( 1930, ಜನವರಿ 26 ರ ಲಾಹೋರ್ ಕಾಂಗ್ರೆಸ್ ಅಧಿವೇಶನದಲ್ಲಿ ಬಾರತ " ಪೂರ್ಣ ಸ್ವರಾಜ್ಯ " ಎಂದು ಅಂಗೀಕರಿಸಿದ್ದರ ಸವಿನೆನಪಿಗಾಗಿ )

**ಭಾರತ ಸಂವಿಧಾನದ ಪೂರ್ವಪೀಠಿಕೆ** ( ಪ್ರಸ್ತಾವನೆ )

- ಸಂವಿಧಾನದ ಒಡವೆ
- ರಾಜಕೀಯ ಜಾತಕ (ಕೆ.ಎಂ.ಮುನ್ಸಿ )
- ಸಂವಿಧಾನದ ರೂಪುರೇಷೆ, ಮೌಲ್ಯ, ಸಿದ್ಧಾಂತ ಮತ್ತು ಉದ್ದೇಶಗಳ ಸಾರಾಂಶವೇ ಪೂರ್ವಪೀಠಿಕೆ.
- ಬಾರತದ ಸಂವಿಧಾನದ ಮೂಲ ತಯ್ವಗಳು ಹಾಗೂ ಯೋಗ್ಯ ಸತ್ವಗಳನ್ನು ಒಳಗೊಂಡಿದೆ.

- ಸಂವಿಧಾನದ ಪ್ರಸ್ತಾವನೆಯನ್ನು ಡಿಸೆಂಬರ್ 13, 1946 ರಂದು ನೆಹರು ಅವರು ಮಂಡಿಸಿದ “ಧ್ಯೇಯಗಳ ನಿರ್ಣಯ” ಸಂವಿಧಾನ ರಚನಾ ಸಭೆ ಜನವರಿ 22, 1947 ರಂದು ಅಂಗೀಕರಿಸಲಾಯಿತು.

**ಪೂರ್ವಪೀಠಿಕೆ**

“ ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ, ಸಮಾಜವಾದಿ, ಜಾತ್ಯಾತೀತ, ಪ್ರಜಾಸತ್ತಾತ್ಮಕ ಗಣತಂತ್ರವನ್ನಾಗಿ ವಿಧಿಯುಕ್ತವಾಗಿ ಸ್ಥಾಪಿಸಿ, ಅದರ ಎಲ್ಲಾ ಪ್ರಜೆಗಳಿಗೆ ಈ ಕೆಳಗಿನ ಹಕ್ಕುಗಳಾದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು ವಿಚಾರ, ಅಭಿವ್ಯಕ್ತಿ, ನಂಬಿಕೆ, ಭಕ್ತಿ ಮತ್ತು ಆರಾಧನೆಗಳಲ್ಲಿ ಸ್ವಾತಂತ್ರ್ಯವನ್ನುಸ್ಥಾನಮಾನ ಮತ್ತು ಅವಕಾಶಗಳ ಸಮಾನತೆ ;ಗಳನ್ನು ದೊರಕಿಸಿ, ವ್ಯೆಯಕ್ತಿಕ ಘನತೆ ಮತ್ತು ದೇಶದ ಒಗ್ಗಟ್ಟು ಮತ್ತು ಐಕ್ಯತೆಗೆ ಎಲ್ಲರಲ್ಲೂ ಭ್ರಾತೃತ್ವತೆಯನ್ನು ಪ್ರೋತ್ಸಾಹಿಸಲು ನಿರ್ಧರಿಸಿ; ನಮ್ಮ ಸಂವಿಧಾನ ರಚನಾಸಭೆಯಲ್ಲಿ ಈ ೧೯೪೯ರ ನವೆಂಬರ್ ಮಾಹೆಯ ೨೬ನೇ ದಿನದಂದು, ನಾವಾಗಿ ನಾವೇ ಈ ಸಂವಿಧಾನವನ್ನು ಸ್ವೀಕರಿಸಿ,ಶಾಸನವನ್ನಾಗೆ ವಿಧಿಸಿಕೊಳ್ಳುತ್ತೇವೆ.”

**ಪೂರ್ವಪೀಠಿಕೆಯ ಪ್ರಮುಖ ಅಂಶಗಳು**

- ಭಾರತದ ಪ್ರಜೆಗಳಾದ ನಾವು
- ಸಾರ್ವಭೌಮ ರಾಷ್ಟ್ರ
- ಸಮಾಜವಾದಿ ( 1976 ರಲ್ಲಿ ಸಂವಿಧಾನದ 42 ನೇ ತಿದ್ದುಪಡಿ ಮೂಲಕ ಸೇರಿಸಲಾಗಿದೆ.)
- ಜಾತ್ಯಾತೀತ (ಮತ ನಿರಪೇಕ್ಷ ) ರಾಷ್ಟ್ರ. ( 1976 ರಲ್ಲಿ ಸಂವಿಧಾನದ 42 ನೇ ತಿದ್ದುಪಡಿ ಮೂಲಕ ಸೇರಿಸಲಾಗಿದೆ.)
- ಪ್ರಜಾಸತಾತ್ಮಕ ಗಣರಾಜ್ಯ

## ಸಂವಿಧಾನದ ಲಕ್ಷಣಗಳು

1. **ಲಿಖಿತ ಮತ್ತು ಬೃಹತ್ ಸಂವಿಧಾನ**
   - ಬರವಣಿಗೆ ರೂಪದಲ್ಲಿದೆ.
   - ಮೂಲತಃ 22 ಭಾಗಗಳು, 8 ಅನುಸೂಚಿಗಳು, 345 ವಿಧಿಗಳನ್ನು ಹೊಂದಿತ್ತು.
   - ಈಗ 25 ಭಾಗಗಳು, 12 ಅನುಸೂಚಿಗಳು, 450 ವಿಧಿಗಳನ್ನು ಹೊಂದಿದೆ.
2. **ಸರಳ – ಕಠಿಣ ಸಂವಿಧಾನ**
   - ಸಂವಿಧಾನ ತಿದ್ದುಪಡಿ ವಿಧಾನ ಸುಲಭವೂ ಆಗಿರದೇ ಹಾಗೂ ಕಠಿಣವೂ ಆಗಿರದೇ ಸರಳ ಮತ್ತು ಕಠಿಣತೆಯಿಂದ ಕೂಡಿದೆ
3. **ಸಂಸದೀಯ ಸರ್ಕಾರ ಪದ್ಧತಿ**
   - ಪ್ರಜೆಗಳಿಂದ ಆಯ್ಕೆಯಾದ ಸಂಸತ್ತು ಪರಮಾಧಿಕಾರ ಹೊಂದಿದೆ.
   - ಮಂತ್ರಿಮಂಡಳ ಶಾಸಕಾಂಕದ ವಿಶ್ವಾಸವಿರುವವರೆಗೂ ಅಧಿಕಾರದಲ್ಲಿರುತ್ತದೆ, ವಿಶ್ವಾಸ ಕಳೆದುಕೊಂಡ ತಕ್ಷಣ ರಾಜೀನಾಮೆ ನೀಡಬೇಕಾಗುತ್ತದೆ.

**4. ಗಣತಂತ್ರ ವ್ಯವಸ್ಥೆ**

- ಯಾವ ದೇಶದ ಮುಖ್ಯಸ್ಥನನ್ನು ಚುನಾವಣೆಯ ಮೂಲಕ ಆಯ್ಕೆಯಾಗುತ್ತಾರೋ ಅದನ್ನು ಗಣರಾಜ್ಯ ಎನ್ನುವರು
- ಅನುವಂಶಿಕವಾಗಿ ಯಾರೂ ದೇಶದ ಆಡಳಿತವನ್ನು ಹೊಂದಿಲ್ಲ.
- ರಾಷ್ಟ್ರಪತಿ ಸಂವಿಧಾನದ ಮುಖ್ಯಸ್ಥರಾಗಿದ್ದರೂ ಚುನಾವಣೆಯ ಮೂಲಕ ಆಯ್ಕೆಯಾಗುತ್ತಾರೆ.

**5. ಸಂಯುಕ್ತ ಪದ್ಧತಿ**

- ಭಾರತ ಅನೇಕ ರಾಜ್ಯಗಳ ಒಕ್ಕೂಟವಾಗಿದ್ದರೂ ಅಧಿಕಾರಗಳನ್ನು ಕೇಂದ್ರ ಹಾಗೂ ರಾಜ್ಯಗಳ ಮಧ್್ಯೆ ಹಂಚಲಾಗಿದೆ, ಕೇಂದ್ರ ಪಟ್ಟಿ– 100, ರಾಜ್ಯ ಪಟ್ಟಿ – 61, ಸಮವರ್ತಿ ಪಟ್ಟಿ – 52
- ಕೇಂದ್ರ – ರಾಜ್ಯಗಳ ಮಧ್ಯ ಉಂಟಾಗುವ ವಿವಾದಗಳನ್ನು ಬಗೆಹರಿಸಲು ಸುಪ್ರೀಂ ಕೋರ್ಟ್ ಅಧಿಕಾರ ಹೊಂದಿದೆ.

**6. ಮೂಲಭೂತ ಹಕ್ಕುಗಳು**

- ಜನರಿಗೆ ಸಂವಿಧಾನ ನೇರವಾಗಿ ನೀಡಿರುವ ಹಕ್ಕುಗಳೇ ಮೂಲಭೂತ ಹಕ್ಕುಗಳು.
- ಸಂವಿಧಾನದ 3ನೇ ಭಾಗದಲ್ಲಿ ಅಳವಡಿಸಲಾಗಿದೆ.
- ಸರ್ವೋಚ್ಛ ನ್ಯಾಲಾಲಯವನ್ನು ಮೂಲಭೂತ ಹಕ್ಕುಗಳು ರಕ್ಷಕ ಎನ್ನುವರು.

1. ಸ್ವಾತಂತ್ರ್ಯದ ಹಕ್ಕು
2. ಸಮಾನತೆಯ ಹಕ್ಕು
3. ಶೋಷಣೆಯ ವಿರುದ್ಧದ ಹಕ್ಕು
4. ಧಾರ್ಮಿಕ ಹಕ್ಕು
5. ಸಾಂಸ್ಕೃತಿಕ ಮತ್ತು ವಿದ್ಯಾಭ್ಯಾಸದ ಹಕ್ಕು
6. ಸಂವಿಧಾನಬದ್ಧ ಪರಿಹಾರದ ಹಕ್ಕು

**7. ಮೂಲಭೂತ ಕರ್ತವ್ಯಗಳು**

- ನಾವು ಏನನ್ನು ಮಾಡಬೇಕು ಎನ್ನುವುದೇ ಕರ್ತವ್ಯಗಳು.
- ಸಂವಿಧಾನದ 4ನೇA ಭಾಗದಲ್ಲಿವೆ.
- ಒಟ್ಟು 11 ಮೂಲಭೂತ ಕರ್ತವ್ಯಗಳಿವೆ.

**8. ರಾಜ್ಯನಿರ್ದೇಶಕ ತತ್ವಗಳು**

- ಸಂವಿಧಾನದ 4ನೇ ಭಾಗದಲ್ಲಿವೆ.
- ಐರಿಷ್ ಸಂವಿಧಾನದಿಂದ ಪ್ರಭಾವಿತವಾಗಿ ನಮ್ಮ ಸಂವಿಧಾನದಲ್ಲಿ ಅಳವಡಿಸಲಾಗಿದೆ.
- ಇವು ಸಾಮಾಜಿಕ ಹಾಗೂ ಆರ್ಥಿಕ ಪ್ರಜಾಪ್ರಭುತ್ವವನ್ನು ಪಡೆಯಲು ಬುನಾದಿಯಾಗಿವೆ.
- ಐರಿಷ್ ಸಂಇಧಾನದಿಂದ ಪಡೆಯಲಾಗಿದೆ.
- ದೇಶದ ಆಡಳಿತಕ್ಕೆ ಮೂಲ ನಿಯಮಗಳಾಗಿವೆ

- ಕಾನೂನನ್ನು ರೂಪಿಸಿ ಜಾರಿಗೆ ತರುವಾಗ ಸರ್ಕಾರ ಇವುಗಳಿಗೆ ಹೆಚ್ಚು ಗಮನವನ್ನು ನೀಡಬೇಕು.
- ಇವುಗಳನ್ನು ಸರ್ಕಾರ ಜಾರಿಗೊಳಿಸದಿದ್ದರೆ ನ್ಯಾಯಾಲಯದಲ್ಲಿ ಪ್ರಶ್ನಿಸಲು ಸಾಧ್ಯವಿಲ್ಲ.

**9. ಸ್ವತಂತ್ರ ಹಾಗೂ ಏಕೀಕೃತ ನ್ಯಾಯಾಂಗ ವ್ಯವಸ್ಥೆ**

- ಸ್ವತಂತ್ರವಾದ ಮತ್ತು ಏಕೀಕೃತ ವ್ಯವಸ್ಥೆಯಾಗಿದೆ.
- ಶಾಸಕಾಂಗ ಮತ್ತು ಕಾರ್ಯಾಂಗಗಳು ನ್ಯಾಯಾಂಗದ ಕಾರ್ಯದಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ.
- ಸರ್ವೋಚ್ಚ ನ್ಯಾಯಾಲಯ ಪ್ರಮುಖವಾಗಿದ್ದು ಇದರ ಅಡಿಯಲ್ಲಿ ಉಚ್ಚ ನ್ಯಾಯಾಲಯ ಹಾಗೂ ಇತರ ಆಧೀನ ನ್ಯಾಯಾಲಯಗಳು ಕಾರ್ಯ ನಿರ್ವಹಿಸುತ್ತವೆ.

**10. ಏಕಪೌರತ್ವ**

- ಜನತೆಯ ಸಂಕುಚಿತ ಪ್ರಾಂತೀಯ ಮನೋಭಾವನೆಯನ್ನು ನಿಯಂತ್ರಿಸಿ ರಾಷ್ಟ್ರೀಯ ಮನೋಭಾವನೆಯನ್ನು ಬೆಳೆಸಲು ಏಕಪೌರತ್ವಕ್ಕೆ ಅವಕಾಶ ಮಾಡಿಕೊಟ್ಟಿದೆ.
- ಯಾವುದೇ ರಾಜ್ಯದಲ್ಲಿ ಜನಿಸಿದ್ದರೂ ಯಾವುದೇ ಪ್ರದೇಶದಲ್ಲಿ ವಾಸಿಸಿದರೂ ಎಲ್ಲರಿಗೂ ಒಂದೇ ಪೌರತ್ವ ಇದೆ.

**11. ವಯಸ್ಕ ಮತದಾನ ಪದ್ಧತಿ**

- 18 ವರ್ಷ ಮೇಲ್ಪಟ್ಟ ಎಲ್ಲ ಪ್ರಜೆಗಳಿಗೂ ಮತದಾನದ ಹಕ್ಕನ್ನು ನೀಡಲಾಗಿದೆ.

**12. ದ್ವಿಸದನ ಶಾಸಕಾಂಗ**

- ಭಾರತದ ಶಾಸಕಾಂಗವನ್ನು ಸಂಸತ್ತು ಎಂದು ಕರೆಯುವರು.
- ಸಂಸತ್ತು 2 ಸದನಗಳನ್ನು ಹೊಂದಿದೆ.

1. ಮೇಲ್ಮನೆ ( ರಾಜ್ಯಸಭೆ )
2. ಕೆಳಮನೆ ( ಲೋಕಸಭೆ )

**13. ಪಕ್ಷಪದ್ಧತಿ**

- ರಾಜಕೀಯ ಪಕ್ಷಗಳು ಪ್ರಜಾಪ್ರಭುತ್ವದ ವ್ಯವಸ್ಥೆಯ ಬುನಾದಿ.
- ಅನೇಕ ಪಕ್ಷಗಳಿದ್ದು ಬಹು ಪಕ್ಷಪದ್ಧತಿ ಅಸ್ಥಿತ್ವದಲ್ಲಿದೆ.
- ಸಾರ್ವತ್ರಿಕ ಚುನಾವಣೆಯಲ್ಲಿ ಬಹುಮತ ಪಡೆದ ಪಕ್ಷ ಆಡಳಿತ ಪಕ್ಷವಾದರೆ ಉಳಿದವು ವಿರೋಧ ಪಕ್ಷಗಳಾಗುತ್ತವೆ.

**ಮೂಲಭೂತ ಹಕ್ಕುಗಳು**

- ಜನರಿಗೆ ಸಂವಿಧಾನ ನೇರವಾಗಿ ನೀಡಿರುವ ಹಕ್ಕುಗಳೇ ಮೂಲಭೂತ ಹಕ್ಕುಗಳು.
- ಸಂವಿಧಾನದ 3ನೇ ಭಾಗದಲ್ಲಿ ಅಳವಡಿಸಲಾಗಿದೆ.
- ಸಮಾಜದಲ್ಲಿ ಮಾನವನು ನಾಗರಿಕ ಜೀವನವನ್ನು ನಡೆಸಲು ಮೂಲಭೂತ ಹಕ್ಕುಗಳು ಅವಶ್ಯಕ
- ಮೊದಲು 7 ಮೂಲಭೂತ ಹಕ್ಕುಗಳಿದ್ದವು.
- ಸಂವಿಧಾನದ 44 ನೇ ತಿದ್ದುಪಡಿಯ ಮೂಲಕ ಆಸ್ತಿಯ ಹಕ್ಕನ್ನು ರದ್ದುಪಡಿಸಲಾಗಿದೆ.

1. **ಸಮಾನತೆಯ ಹಕ್ಕು**

   - ಸಂವಿಧಾನದ 14 ರಿಂದ 18 ನೇ ವಿಧಿಗಳು ಸಮಾನತೆಯ ಹಕ್ಕುಗಳ ಬಗ್ಗೆ ತಿಳಿಸುತ್ತವೆ.
   - ಶಾಸನಾತ್ಮಕವಾಗಿ,ಸಾಮಾಜಿಕವಾಗಿ, ಆರ್ಥಿಕವಾಗಿ, ಕಾನೂನಿನ ಮುಂದೆ ಎಲ್ಲರೂ ಸಮಾನರು.
   - ಕಾನೂನಿಗಿಂತ ಯಾರೂ ಶ್ರೇಷ್ಟರಲ್ಲ.ಸರ್ಕಾರಿ ಉದ್ಯೋಗ ಸೇರಲು ಪ್ರತಿಯೊಬ್ಬರಿಗೂ ಸಮಾನ ಅವಕಾಶವಿದೆ.
   - ಜಾತಿ, ಲಿಂಗ, ಧರ್ಮ, ಜನ್ಮಸ್ಥಳ ಮುಂತಾದವುಗಳ ಆಧಾರದ ಮೇಲೆ ಬೇಧಭಾವ ಮಾಡಬಾರದು.

2. **ಸ್ವಾತಂತ್ರ್ಯದ ಹಕ್ಕು**

   - ಸಂವಿಧಾನದ 19 ರಿಂದ 22 ನೇ ವಿಧಿಗಳು ಸ್ವಾತಂತ್ರ್ಯದ ಹಕ್ಕುಗಳ ಬಗ್ಗೆ ತಿಳಿಸುತ್ತವೆ.
   - ವಾಕ್ ಮತ್ತು ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕು
   - ಶಸ್ತ್ರರಹಿತ ಶಾಂತಿಯುತ ಸಭೆ ಸೇರುವ ಹಕ್ಕು
   - ಸಂಘಸಂಸ್ಥೆಗಳನ್ನು ಸ್ಥಾಪಿಸುವ ಹಕ್ಕು
   - ಭಾರತದಲ್ಲಿ ಸಂಚರಿಸುವ, ವಾಸಿಸುವ ಹಕ್ಕು
   - ಯಾವುದೇ ವೃತ್ತಿ ಹೊಂದುವ ಹಕ್ಕು

3. **ಶೋಷಣೆಯ ವಿರುದ್ಧದ ಹಕ್ಕು**

   - ಸಂವಿಧಾನದ 23 ಹಾಗೂ 24ನೇ ವಿಧಿಗಳು ಶೋಷಣೆಯ ವಿರುದ್ಧದ ಹಕ್ಕುಗಳ ಬಗ್ಗೆ ತಿಳಿಸುತ್ತವೆ.
   - ಶೋಷಣೆಯು ಸಾಮಾಜಿಕ ಪಿಡುಗಾಗಿದ್ದು, ಇದನ್ನು ನಿರ್ಮೂಲನೆ ಮಾಡಲು ಶೋಷಣೆಯ ವಿರುದ್ಧದ ಹಕ್ಕನ್ನು ಸಂವಿಧಾನದಲ್ಲಿ ಅಳವಡಿಸಲಾಗಿದೆ.
   - ದುರ್ಬಲರನ್ನು, ಬಡವರನ್ನು, ಮಹಿಳೆಯರನ್ನು ಮಕ್ಕಳನ್ನು ಶೋಷಣೆಯ ಮಾಡುವಂತಿಲ್ಲ.
   - ಬಿಕ್ಷಾಟನೆ, ಸತಿಪದ್ಧತಿ, ದೇವದಾಸಿಪದ್ಧತಿ, ಅನೈತಿಕ ಚಟುವಟಿಕೆ, ಬಲವಂತದ ದುಡಿಮೆಯನ್ನು ನಿಷೇಧಿಸಲಾಗಿದೆ.
   - 14 ವರ್ಷದ ಕಡಿಮೆ ಮಕ್ಕಳನ್ನು ದುಡಿಮೆಗೆ ನೇಮಿಸಿಕೊಳ್ಳುವಂತಿಲ್ಲ.
   - ಶೋಷಣೆಯನ್ನು ತಪ್ಪಿಸಲು ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಶಾಸನಗಳು
     1. ಕನಿಷ್ಟ ಕೂಲಿ ಕಾಯ್ದೆ – 1948
     2. ಅನೈತಿಕ ವ್ಯವಹಾರ ಕಾಯ್ದೆ – 1956
     3. ವರದಕ್ಷಿಣೆ ನಿಷೇಧ ಕಾಯ್ದೆ – 1961
     4. ಜೀತಪದ್ಧತಿ ನಿರ್ಮೂಲನಾ ಕಾಯ್ದೆ – 1976
     5. ಸತಿ ನಿಷೇಧ ಕಾಯ್ದೆ 1987
     6. ಮಾಣವ ಹಕ್ಕು ರಕ್ಷಣಾ ಕಾಯ್ದೆ – 1993

7. ಕೌಟುಂಬಿಕ ದೌರ್ಜನ್ಯ ಕಾಯ್ದೆ – 2005

4. **ಧಾರ್ಮಿಕ ಹಕ್ಕು**

- ಸಂವಿಧಾನದ 25 ರಿಂದ 28 ನೇ ವಿಧಿಗಳು ಧಾರ್ಮಿಕ ಹಕ್ಕುಗಳ ಬಗ್ಗೆ ತಿಳಿಸುತ್ತವೆ.
- ಯಾವುದೇ ಧರ್ಮವನ್ನು ರಾಷ್ಟ್ರೀಯ ಧರ್ಮವನ್ನಾಗಿ ಸ್ವೀಕರಿಸಿಲ್ಲ.
- ಪೌರರು ತಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿ ಯಾವುದೇಧರ್ಮವನ್ನು ಸ್ವೀಕರಿಸುವ, ಪಾಲಿಸುವ, ಪ್ರಸಾರ ಮಾಡುವ ಸ್ವಾತಂತ್ರ್ಯ ಪಡೆದಿದ್ದಾರೆ.
- ಧಾರ್ಮಿಕ ಸಂಸ್ಥೆಗಳನ್ನು ರಾಜಕೀಯ ಉದ್ದೇಶಗಳಿಗೆ ಬಳಸುವಂತಿಲ್ಲ.

5. **ಸಾಂಸ್ಕೃತಿಕ ಮತ್ತು ವಿದ್ಯಾಭ್ಯಾಸದ ಹಕ್ಕು**

ಸಂವಿಧಾನದ 29 ಮತ್ತು 30ನೇ ನೇ ವಿಧಿಗಳು ಸ್ವಾತಂತ್ರ್ಯದ ಹಕ್ಕುಗಳ ಬಗ್ಗೆ ತಿಳಿಸುತ್ತವೆ.

- ತಮ್ಮ ಲಿಪಿ, ಭಾಷೆ, ಸಂಸ್ಕೃತಿಯನ್ನು ರಕ್ಷಿಸುವ ಹೊಣೆ ರಾಜ್ಯಗಳದ್ದಾಗಿರುತ್ತದೆ.
- ಧಾರ್ಮಿಕ ಹಾಗೂ ಭಾಷಾ ಅಲ್ಪಸಂಖ್ಯಾತರ ಹಿತಾಸಕ್ತಿ ರಕ್ಷಿಸುವ ಉದ್ದೇಶದಿಂದ ಅಳವಡಿಸಲಾಗಿದೆ
- ಅಲ್ಪಸಂಖ್ಯಾತ ಸಂಸ್ಥೆಗಳು ಹಾಗೂ ರಾಜ್ಯ ಧನಸಹಾಯ ಪಡೆದ ವಿಧ್ಯಾ ಸಂಸ್ಥೆಗಳು ಯಾರಿಗೇ ಆಗಲಿ ಪ್ರವೇಶ ನಿರಾಕರಿಸುವಂತಿಲ್ಲ.
- ಸಂವಿಧಾನದ 21 ಂ ವಿಧಿಯನ್ವಯ ಶೀಕ್ಷಣವನ್ನು ಮೂಲಭೂತ ಹಕ್ಕು ಎಂದು ಪರಿಗಣಿಸಿದೆ.
- ಇದರಂತೆ 6 ರಿಂ 14 ವರ್ಷದ ಮಕ್ಕಳಿಗೆ ರಾಜ್ಯಸರ್ಕಾರವೇ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕು.

6. **ಸಂವಿಧಾನಬದ್ಧ ಪರಿಹಾರದ ಹಕ್ಕು**

ಮೂಲಭೂತ ಹಕ್ಕುಗಳ ರಕ್ಷಣೆಗಾಗಿ ಸಂವಿಧಾನದ 32ನೇ ವಿಧಿಯಲ್ಲಿ ಅವಕಾಶ ಮಾಡಿಕೊಡುತ್ತದೆ.

ಡಾ. ಬಿ ಆರ್ ಅಂಬೇಡ್ಕರ್ ಇದನ್ನು " ಸಂವಿಧಾನದ ಆತ್ಮ ಮತ್ತು ಹೃದಯ" ವಿದ್ದಂತೆ ಎಂದಿದ್ದಾರೆ.

ಯಾವುದೇ ವ್ಯಕ್ತಿ, ಕೇಂದ್ರ, ರಾಜ್ಯ ಸರ್ಕಾರದಿಂದ ಮೂಲಭೂತ ಹಕ್ಕುಗಳಿಗೆ ಧಕ್ಕೆಯುಂಟಾದರೆ ನೇರವಾಗಿ ಸುಪ್ರಿಂ ಕೋರ್ಟ್ ಗೆ ಅರ್ಜಿ ಸಲ್ಲಿಸಬಹುದು.

ಆದ್ದರಿಂದ ಸರ್ವೋಚ್ಛ ನ್ಯಾಯಾಲಯವನ್ನು ಮೂಲಭೂತ ಹಕ್ಕುಗಳ ರಕ್ಷಕ ಎನ್ನುವರು.

ಮೂಲಭೂತ ಹಕ್ಕುಗಳ ರಕ್ಷಣೆಗೆ 'ರಿಟ್' ಅರ್ಜಿ ಸ್ವೀಕರಿತ್ತದೆ.

**ವಿವಿಧ ರಿಟಗಳು**

1. ಬಂಧೀ ಪ್ರತ್ಯಕ್ಷೀಕರಣ : ಕಾರಣವಿಲ್ಲದೇ ವ್ಯಕ್ತಿಯನ್ನು ಪೋಲೀಶರು ಬಂಧಿಸಿದರೆ ವ್ಯಕ್ತಿ ಅಥವಾ ಅವನ ಪರವಾಗಿ ಸಲ್ಲಿಸುವ ರಿಟ್ ಅರ್ಜಿ
2. **ಪರಮಾದೇಶ :** ಅಧಿಕಾರಿಯೊಬ್ಬ ತಮ್ಮ ಅಧಿಕಾರ ಚಲಾಯಿಸಲು ನಿರಾಕರಿಸಿದಾಗ ಅಥವಾ ಸಾರ್ವಜನಿಕ ಕರ್ತವ್ಯ ಮಾಡಲು ನಿರಾಕರಿಸಿದಾಗ ನ್ಯಾಲಾಯದ ಸಂಬಂದಪಟ್ಟವರಿಗೆ ತಮ್ಮ ಕರ್ತವ್ಯ ನಿರ್ವಹಿಸಲು ಆದೇಶ ನೀಡುವುದೇ ಪರಮಾದೇಶ.

3. **ಪ್ರತಿಬಂಧಕಾಜ್ಞೆ :** ಆಧೀನ ನ್ಯಾಯಾಲಯವು ತನ್ನ ಅಧಿಕಾರ ವ್ಯಾಪ್ತಿಗೆ ಮೀರಿ ಮೊಕದ್ದಮೆಯನ್ನು ವಿಚಾರಣೆ ಮಾಡಬಾರದು ಎಂದು ಅಥವಾ ತೀರ್ಪು ನೀಡಬಾರದು ಎಂದು ಸುಪ್ರಿಂ ಕೋರ್ಟ್ ಹೊರಡಿಸುವ ಲಿಖಿತ ರೂಪದ ನಿಷೇಧಾಜ್ಞೆಯನ್ನು ಪ್ರತಿಬಂಧಕಾಜ್ಞೆ ಎನ್ನುವರು.
4. **ಸರ್ಷಿಯೋರರಿ :** ಕೆಳಗಿನ ನ್ಯಾಯಾಲಯವು ತನ್ನ ಅಧಿಕಾರ ವ್ಯಾಪ್ತಿಗೆ ಮೀರಿ ತೀರ್ಪು ನೀಡಿದ್ದಾದರೆ ಅದನ್ನು ರದ್ದುಗೊಳಿಸಿ ಅದಕ್ಕೆ ಸಂಬಂಧಿಸಿದ ಮೊಕದ್ದಮೆಯನ್ನು ಸಂಬಂದಪಟ್ಟ ಮೇಲಿನ ನ್ಯಾಯಾಲಯಕ್ಕೆ ವರ್ಗಾಯಿಸಬೇಕೆಂದು ಸರ್ವೋಚ್ಛ ನ್ಯಾಯಾಲಯವು ಕೆಳಗಿನ ನ್ಯಾಯಾಲಯಕ್ಕೆ ನೀಡುವ ಆಜ್ಞಾಪತ್ರವೇ ಸರ್ಷಿಯೋರರಿ.
5. **ಕೋ-ವಾರೆಂಟ್ :** ಅರ್ಹತೆಯಿಲ್ಲದ ವ್ಯಕ್ತಿ ಕಾನೂನುಬಾಹಿರವಾಗಿ ಸರ್ಕಾರದ ಹುದ್ದೆ ಹೊಂದಿದ್ದರೆ ಅಂತಹ ವ್ಯಕ್ತಿಗಳ ವಿರುದ್ಧ ನ್ಯಾಯಾಲಯದಲ್ಲಿ ಪ್ರಶ್ನಿಸುವುದಕ್ಕೆ ಕೋ-ವಾರೆಂಟ್ ಎನ್ನುವರು.

**ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳು**

- ಸಾಮಾಜಿಕವಾಗಿ ಸಷ್ಟವಾಗಿರುವಹಕ್ಕುಗಳ ರಕ್ಷಣೆಗಾಗಿ ಅಥವಾ ಸಾರ್ವಜನಿಕರ ಹಿತಾಸಕ್ತಿ ರಕ್ಷಣೆಗಾಗಿ ವ್ಯಕ್ತಿಗಳು ಅಥವಾ ಸಂಘ ಸಂಸ್ಥೆಗಳು ನ್ಯಾಯಾಲಯದಲ್ಲಿ ಹೂಡುವ ಮೊಕದ್ದಮೆಗಳನ್ನು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳು ಎನ್ನುವರು.
- ಇತ್ತೀಚೆಗೆ ಮಾದ್ಯಮಗಳ ಮಾಹಿತಿಯ ಆಧಾರದ ಮೇಲೆ ನ್ಯಾಯಾಲಯಗಳೇ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳನ್ನು ದಾಖಲಿಸಿಕೊಳ್ಳುತ್ತಿವೆ.

**ಮೂಲಭೂತ ಕರ್ತವ್ಯಗಳು**

- ಹಕ್ಕುಮತ್ತು ಕರ್ತವ್ಯ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ.
- ಕರ್ತವ್ಯರಹಿತ ಹಕ್ಕಿಗೆ ಪ್ರಾಮುಖ್ಯತೆಯಾಗಲೀ ಮೌಲ್ಯವಾಗಲೀ ಇರುವುದಿಲ್ಲ.
- ಇವುಗಳಿಗೆ ನ್ಯಾಯಾಲಯದ ರಕ್ಷಣೆಯಿಲ್ಲ
- ಇವುಗಳನ್ನು ಉಲ್ಲಂಘಿಸಿದವರಿಗೆ ಸಾಮಾನ್ಯ ಕಾನೂನಿನನ್ವಯ ಶಿಕ್ಷೆಯಾಗುತ್ತದೆ.

1. ಸಂವಿಧಾನ, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗಳನ್ನು ಗೌರವಿಸುವುದು.
2. ಸ್ವಾತಂತ್ರ್ಯ ಚಳುವಳಿಯ ಸ್ಪೂರ್ತಿದಾಯಕ ಆದರ್ಶ ತತ್ವಗಳನ್ನು ಪಾಲಿಸುವುದು.
3. ಭಾರತದ ಸಾರ್ವಭೌಮತೆ, ಏಕತೆ,ಸಮರ್ಗತೆಯನ್ನು ಕಾಪಾಡುವುದು ಮತ್ತು ರಕ್ಷಿಸುವುದು.
4. ಅಗತ್ಯ ಬಂದಾಗ ರಾಷ್ಟ್ರವನ್ನು ರಕ್ಷಿಸಿ ದೇಶದ ಸೇವೆ ಮಾಡಬೇಕು.
5. ಭಾರತೀಯರಲ್ಲಿ ಸಾಮರಸ್ಯ ಹಾಗೂ ಸಹೋದರತೆಯ ಭಾವನೆಯನ್ನು ಬೆಳೆಸಬೇಕು ಮತ್ತು ಮಹಿಳೆಯರ ಗೌರವಕ್ಕೆ ಭಂಗ ತರುವ ಆಚರಣೆಗಳನ್ನು ತ್ಯಜಿಸಬೇಕು.
6. ನಮ್ಮ ಸಂಘಟಿತ ಸಂಸ್ಕೃತಿಯ ಪರಂಪರೆಯನ್ನು ಗೌರವಿಸಿ ರಕ್ಷಿಸಬೇಕು.
7. ಅರಣ್ಯಗಳು, ಸರೋವರಗಳು, ನದುಗಳು, ವನ್ಯಮೃಗಗಳೂ ಸೇರಿದಂತೆಪ್ರಕೃತಿ, ಪರಿಸರವನ್ನು ಅಭಿವೃದ್ಧಿಪಡಿಸಬೇಕು ಹಾಘೂ ಜೀವಂತ ಪ್ರಾಣಿಗಳಿಗೆ ಅನುಕಂಪ ತೋರಿಸಬೇಕು.

8. ವೈಜ್ಞಾನಿಕ ಹಾಗೂ ಮಾನವೀಯತೆಯ ಗುಣಗಳ ವಿಚಾರಣಾ ಹಾಗೂ ಸುಧಾರಣಾ ಭಾವನೆಯನ್ನು ಬೆಳೆಸಿಕೊಳ್ಳಬೇಕು.
9. ಸಾರ್ವಜನಿಕ ಆಸ್ತಿಯನ್ನು ರಕ್ಷಿಸಬೇಕು ಮತ್ತು ಹಿಂಸಾಮಾರ್ಗವನ್ನು ತ್ಯಜಿಸಬೇಕು.
10. ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ಪ್ರಾವೀಣ್ಯತೆಯನ್ನು ಪ್ರದರ್ಶಿಸಿ ರಾಷ್ಟ್ರದ ಪ್ರಗತಿಗೆ ಶ್ರಮಿಸಬೇಕು.
11. ತಂದೆ/ತಾಯಿ ಅಥವಾ ಪೋಷಕರು6 ರಿಂದ 14 ವರ್ಷದದವರೆಗೆ ತಮ್ಮ ಮಗುವಿನ ಶಿಕ್ಷಣಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು.

**ರಾಜ್ಯನಿರ್ದೇಶಕ ತತ್ವಗಳು**

- ಸಂವಿಧಾನದ 4ನೇ ಭಾಗದಲ್ಲಿವೆ.
- ಮಾರ್ಗದರ್ಶಿ ಸೂತ್ರಗಳೆಂದೂ ಕರೆಯುತ್ತಾರೆ.
- ಸುಖೀ ರಾಜ್ಯದ ಕಲ್ಪನೆಯಿಂದ ನಮ್ಮ ಸಂವಿಧಾನದಲ್ಲಿ ಅಳವಡಿಸಲಾಗಿದೆ.
- ಐರಿಷ್ ಸಂವಿಧಾನದಿಂದ ಪ್ರಭಾವಿತವಾಗಿ ನಮ್ಮ ಸಂವಿಧಾನದಲ್ಲಿ ಅಳವಡಿಸಲಾಗಿದೆ.
- ಇವು ಸಾಮಾಜಿಕ ಹಾಗೂ ಆರ್ಥಿಕ ಪ್ರಜಾಪ್ರಭುತ್ವವನ್ನು ಪಡೆಯಲು ಬುನಾದಿಯಾಗಿವೆ.
- ದೇಶದ ಆಡಳಿತಕ್ಕೆ ಮೂಲ ನಿಯಮಗಳಾಗಿವೆ
- ಕಾನೂನನ್ನು ರೂಪಿಸಿ ಜಾರಿಗೆ ತರುವಾಗ ಸರ್ಕಾರ ಇವುಗಳಿಗೆ ಹೆಚ್ಚು ಗಮನವನ್ನು ನೀಡಬೇಕು.
- ಯಾವುದೇ ಪಕ್ಷ ಾಡಳಿತ ನಡೆಸುವಾಗ ಇವುಗಳನ್ನು ಗಮನದಲ್ಲಿಟ್ಟುಕೊಂಡು ಆಡಳಿತ ನಡೆಸಬೇಕು.
- ಇವುಗಳನ್ನು ಸರ್ಕಾರ ಜಾರಿಗೊಳಿಸದಿದ್ದರೆ ನ್ಯಾಯಾಲಯದಲ್ಲಿ ಪ್ರಶ್ನಿಸಲು ಸಾಧ್ಯವಿಲ್ಲ.

**ರಾಜ್ಯನಿರ್ದೇಶಕ ತತ್ವಗಳು**

1. ಎಲ್ಲಾ ಪೈರರಿಗೂ ತಮ್ಮಜೀವನೋಪಾಯಕ್ಕೆ ಬೇಕಾದ ಸೈಲಭ್ಯಗಳನ್ನು ಒದಗಿಸುವುದು.
2. ಸಮುದಾಯದಲ್ಲಿನ ಸಂಪತ್ತು ಮತ್ತು ಉತ್ಪಾದನಾ ಸಾಧನಗಳು ಕೆಲವೇ ಜನರ ಸ್ವತ್ತಾಗದಂತೆ ತಡೆಗಟ್ಟುವುದು.
3. ಸ್ತ್ರೀ ಮತ್ತು ಪುರುಷರೆಲ್ಲರಿಗೂ ಸಮಾನ ಕೆಲಸಕ್ಕೆ ಸಮಾನ ವೇತನ ನೀಡುವುದು ಮತ್ತು ಕಾರ್ಮಿಕರ ಯೋಗಕ್ಷೇಮ ರಕ್ಷಿಸುವುದು.
4. ವೃದ್ಧರಯ, ರೋಗಿಗಳು, ಅಸಮರ್ಥರು, ಮತ್ತು ದುರ್ಬಲವರ್ಗದವರಿಗೆ ಸಹಾಯಧನ ನೀಡುವುದು.
5. ದೇಶದಾದ್ಯಂತ ಏಕರೂಪದ ನಾಗರಿಕ ಕಾನೂನನ್ನು ಜಾರಿಗೆ ತರುವುದು.
6. 6 ವರ್ಷದವರೆಗಿನ ಎಲ್ಲ ಮಕ್ಕಳಿಗೆ ಬಾಲ್ಯಪೋಷಣೆ ಮತ್ತು ಶಾಲಾಪೂರ್ವ ಶಿಕ್ಷಣವನ್ನು ಕೊಡಲು ರಾಜ್ಯಗಳು ಪ್ರಯತ್ನಿಸುವುದು.
7. ಐತಿಹಾಸಿಕ ಸ್ಮಾರಕ ಮತ್ತು ಸ್ಥಳಗಳನ್ನು ರಕ್ಷಿಸುವುದು.
8. ನ್ಯಾಯಾಂಗವನ್ನು ಕಾರ್ಯಾಂಗದಿಂದ ಪ್ರತ್ಯೇಕಿಸುವುದು.

9. ಅಂತರಾಷ್ಟ್ರೀಯ ಶಾಂತಿಯುತ ವಿದೇಶಾಂಗ ನೀತಿಯನ್ನು ಪಾಲಿಸುವುದು. ಭದ್ರತೆ ಕಾಪಾಡಿ ವಿಶ್ವ ಕಾನೂನನ್ನು ಗೌರವಿಸಿವಿದಿ.
10. ಗ್ರಾಮ ಪಂಚಾಯಿತಿಯನ್ನು ಸ್ಥಾಪಿಸುವುದು.
11. ಗ್ರಾಮೀಣ ಹಾಗೂ ಗುಡಿ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದು.
12. ಕೃಷಿ ಮತ್ತು ಪಶುಸಂಗೋಪನೆಯನ್ನು ವೈಜ್ಞಾನಿಕವಾಗಿ ಅಭಿವೃದ್ಧಿಪಡಿಸಿವುದು.
13. ಪಾನ ನಿಷೇಧವನ್ನು ಜಾರಿಗೆ ತರುವುದು.
14. ವೈಜ್ಞಾನಿಕ ಆಧಾರದ ಮೇಲೆ ಬೇಸಾಯವನ್ನು ಅಭಿವೃದ್ಧಿಪಡಿಸಿವುದು.
    - ರಾಜ್ಯನಿರ್ದೇಶಕ ತತ್ವಗಳು ಪ್ರಮುಖವಾಗಿದ್ದು ಎಲ್ಲರ ಸುಖವನ್ನು ಸಾಧಿಸುವುದೇ ಇವುಗಳ ಗುರಿಯಾಗಿದೆ,
    - ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇವುಗಳನ್ನು ಜಾರಿಗೆ ತರುವ ಪ್ರಯತ್ನ ಮಾಡುತ್ತಿವೆ.
    - ಭಾರತದ ಸರ್ವಾಂಗೀಣ ಅಭಿವೃದ್ಧಿಗೆ ಇವು ದಿಕ್ಸೂಚಿಯಾಗಿವೆ.

## ಕೇಂದ್ರ ಸರ್ಕಾರ

* ಭಾರತವು ಒಂದು ಸಾರ್ವಭೌಮ, ಸ್ವತಂತ್ರ್ಯ, ಸಮಾಜವಾದಿ, ಜಾತ್ಯತೀತ, ಪ್ರಜಾಸತ್ತಾತ್ಮಕ ಗಣರಾಜ್ಯವಾಗಿದೆ.
* ಇಗ್ಲೆಂಡ್ ಮತ್ತು ಫ್ರಾನ್ಸ್ ಏಕಾತ್ಮಕ ಸರ್ಕಾರವನ್ನು ಹೊಂದಿವೆ.
* ಭಾರತವು ಅಮೆರಿಕಾದಂತೆ ಸಂಯುಕ್ತ ಸರ್ಕಾರ ವ್ಯವಸ್ಥೆಯನ್ನು ಹೊಂದಿದೆ.
* ಭಾರತ ಕೇಂದ್ರದಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯಗಳಲ್ಲಿ ರಾಜ್ಯ ಸರ್ಕಾರಗಳನ್ನು ಹೊಂದಿದೆ.
* ಭಾರತ ರಾಜ್ಯಗಳ ಒಕ್ಕೂಟವಾಗಿದ್ದು, ಅಧಿಕಾರವು ಕೇಂದ್ರ ಮತ್ತು ರಾಜ್ಯಗಳ ನಡುವೆ ಸಂವಿಧಾನ ಬದ್ಧವಾಗಿ ವಿಭಜನೆಯಾಗಿದೆ.
* ರಾಷ್ಟ್ರದ ಏಕತೆ ಮತ್ತು ಸುರಕ್ಷತೆಯ ದೃಷ್ಟಿಯಿಂದ ಕೇಂದ್ರ ಸರ್ಕಾರವು ಹೆಚ್ಚು ಅಧಿಕಾರಗಳನ್ನು ಹೊಂದಿದೆ.
* ಕೇಂದ್ರ ಸರ್ಕಾರ ತನ್ನ ಅಧಿಕಾರಗಳನ್ನು ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳ ಮೂಲಕ ಚಲಾಯಿಸುತ್ತದೆ.

## ಕೇಂದ್ರ ಶಾಸಕಾಂಗ

* ಭಾರತವು ಸಂಸದೀಯ ಮಾದರಿಯ ಸರ್ಕಾರವನ್ನು ಹೊಂದಿದೆ.
* ಕೇಂದ್ರ ಶಾಸಕಾಂಗವನ್ನು **"ಸಂಸತ್ತು"** ಎಂದು ಕರೆಯುತ್ತಾರೆ.
* ನಮ್ಮ ಸಂವಿಧಾನದ 79 ನೇ ವಿಧಿಯು ಸಂಸತ್ತಿನ ರಚನೆಗೆ ಅವಕಾಶ ಮಾಡಿಕೊಟ್ಟಿದೆ.
* ನಮ್ಮ ಸಂಸತ್ತು ದ್ವಿಸದನವನ್ನು ಹೊಂದಿದ್ದು, ಮೇಲ್ಮನೆಯನ್ನು "ರಾಜ್ಯಸಭೆ" ಮತ್ತು ಕೆಳಮನೆಯನ್ನು "ಲೋಕಸಭೆ" ಎಂದು ಕರೆಯುತ್ತಾರೆ.

## ರಾಜ್ಯಸಭೆ

* ಸಂಸತ್ತಿನ ಮೇಲ್ಮನೆಯನ್ನು "ರಾಜ್ಯಸಭೆ" ಎಂದು ಕರೆಯುತ್ತಾರೆ.

* ರಾಜ್ಯಸಭೆಯು 250 ಸದಸ್ಯರನ್ನು ಒಳಗೊಂಡಿದೆ.

* ರಾಜ್ಯಸಭೆಯ 238 ಸದಸ್ಯರು ರಾಜ್ಯ ಹಾಗೂ ಕೇಂದಾಡಳಿತ ಪ್ರದೇಶಗಳ ವಿಧಾನಸಭೆಯ ಸದಸ್ಯರಿಂದ ಆಯ್ಕೆಯಾಗುತ್ತಾರೆ.

* ರಾಜ್ಯಸಭೆಯ ಉಳಿದ 12 ಸದಸ್ಯರು ಸಾಹಿತ್ಯ, ಕಲೆ, ವಿಜ್ಞಾನ ಮತ್ತು ಸಮಾಜ ಸೇವೆಯಲ್ಲಿ ವಿಶೇಷ ಅನುಭವ ಪಡೆದವರನ್ನು

ರಾಷ್ಟ್ರಪತಿಗಳು ನಾಮಕರಣ ಮಾಡುತ್ತಾರೆ.

* ಇದು ಹಿರಿಯರ ಸದನವಾಗಿದೆ.

## ಅಧಿಕಾರ ಅವದಿ

* ರಾಜ್ಯಸಭೆಯು ಖಾಯಂ ಸದನವಾಗಿದ್ದು, ಲೋಕಸಭೆಯಂತೆ ವಿಸರ್ಜಿಸಲಾಗದು.
* ರಾಜ್ಯಸಭೆಯ ಸದಸ್ಯರ ಅಧಿಕಾರ ಅವಧಿ 6 ವರ್ಷಗಳು.
* ರಾಜ್ಯಸಭೆಯ ಸದಸ್ಯರು ಪ್ರತಿ 2 ವರ್ಷಕ್ಕೊಮ್ಮೆ ಮೂರನೇ ಒಂದು ಭಾಗದಷ್ಟು ನಿವೃತ್ತರಾಗುತ್ತಾರೆ.
* ಇಷ್ಟವಿಲ್ಲದ ಸದಸ್ಯರು ತಮ್ಮ ಸ್ಥಾನಗಳಿಗೆ ರಾಜಿನಾಮೆಯನ್ನು ಸಭಾಧ್ಯಕ್ಷರಿಗೆ ಸಲ್ಲಿಸಬಹುದು.

## ಅರ್ಹತೆಗಳು

1) ಭಾರತದ ಪ್ರಜೆಯಾಗಿರಬೇಕು.
2) 30 ವರ್ಷ ವಯೋಮಿತಿಯನ್ನು ಹೊಂದಿರಬೇಕು.
3) ಮಾನಸಿಕ ಸ್ವಾಸ್ಥ್ಯ ಕಳೆದುಕೊಂಡಿರಬಾರದು.
4) ನ್ಯಾಯಾಲಯದಿಂದ ಅಪರಾಧ ಶಿಕ್ಷೆಗೆ ಒಳಗಾಗಿರಬಾರದು.
5) ಸಂಸತ್ತು ಕಾಲಕಾಲಕ್ಕೆ ನಿಗಧಿಪಡಿಸುವ ಅರ್ಹತೆ ಪಡೆದಿರಬೇಕು.

## ಸಭಾಪತಿ ಮತ್ತು ಉಪಸಭಾಪತಿ

* ಉಪರಾಷ್ಟ್ರಪತಿಯು ರಾಜ್ಯಸಭೆಯ ಸಭಾಪತಿಯಾಗಿರುತ್ತಾರೆ.
* ರಾಜ್ಯಸಭೆಯ ಸದಸ್ಯರು ತಮ್ಮಲ್ಲಿಯೇ ಒಬ್ಬರನ್ನು ಉಪಸಭಾಪತಿಯಾಗಿ ಆಯ್ಕೆ ಮಾಡುತ್ತಾರೆ.
* ರಾಜ್ಯಸಭೆಯ ಅಧಿವೇಶನ ನಡೆಯಬೇಕಾದರೆ ಕನಿಷ್ಠ 25 ಸದಸ್ಯರು ಹಾಜರಿರಬೇಕು.
* ವರ್ಷದಲ್ಲಿ ಕನಿಷ್ಠ 2 ಬಾರಿಯಾದರೂ ಅಧಿವೇಶನ ಸೇರಬೇಕು.
* ಸದಸ್ಯರ ಕೋರಿಕೆಯ ಮೇರೆಗೆ ವಿಶೇಷ ಅಧಿವೇಶನ ಕರೆಯಬಹುದು.

## ಲೋಕಸಭೆ

* ಲೋಕಸಭೆಯ ಸದಸ್ಯರು ಜನರಿಂದ ನೇರವಾಗಿ ಆಯ್ಕೆಯಾಗಿರುವುದರಿಂದ ಇದನ್ನು “ಜನತಾ ಸದನ” ಎಂದು ಕರೆಯುತ್ತಾರೆ.
* ಲೋಕಸಭೆಯು ಒಟ್ಟು 545 ಸದಸ್ಯರನ್ನು ಒಳಗೊಂಡಿದೆ.
* ಲೋಕಸಭೆಯ 543 ಸದಸ್ಯರು ಸಾರ್ವತ್ರಿಕ ಚುನಾವಣೆಯಲ್ಲಿ ಜನರಿಂದ ಆಯ್ಕೆಯಾಗುತ್ತಾರೆ.

* ಲೋಕಸಭೆಗೆ ಇಬ್ಬರು ಆಂಗ್ಲೋ-ಇಂಡಿಯನ್ನರನ್ನು ಸದಸ್ಯರನ್ನಾಗಿ ರಾಷ್ಟ್ರಪತಿಗಳು ನಾಮಕರಣ ಮಾಡುತ್ತಾರೆ.
* ಪರಿಶಿಷ್ಟ ಜಾತಿಯವರಿಗೆ 79 ಸ್ಥಾನಗಳು ಮತ್ತು ಪರಿಶಿಷ್ಟ ಪಂಗಡದವರಿಗೆ 41 ಸ್ಥಾನಗಳನ್ನು ಮೀಸಲಿಡಲಾಗಿದೆ.

## ಅಧಿಕಾರ ಅವಧಿ

* ಲೋಕಸಭೆಯ ಅಧಿಕಾರ ಅವಧಿ 5 ವರ್ಷಗಳು.
* ಅವಧಿಗೆ ಮೊದಲೇ ಪ್ರಧಾನಿಯ ಸಲಹೆಯ ಮೇರೆಗೆ ರಾಷ್ಟ್ರಪತಿಗಳು ಲೋಕಸಭೆಯನ್ನು ವಿಸರ್ಜಿಸಬಹುದು.
* ರಾಷ್ಟ್ರೀಯ ತುರ್ತು ಪರಿಸ್ಥಿತಿಯ ಸಮಯದಲ್ಲಿ ಅಧಿಕಾರ ಅವಧಿಯನ್ನು ಒಂದು ವರ್ಷ ವಿಸ್ತರಿಸಬಹುದು.

## ಅರ್ಹತೆಗಳು

1) ಭಾರತದ ಪ್ರಜೆಯಾಗಿರಬೇಕು.
2) 25 ವರ್ಷ ವಯೋಮಿತಿಯನ್ನು ಹೊಂದಿರಬೇಕು.
3) ಮಾನಸಿಕ ಸ್ವಾಸ್ಥ್ಯ ಕಳೆದುಕೊಂಡಿರಬಾರದು.
4) ನ್ಯಾಯಾಲಯದಿಂದ ಅಪರಾಧ ಶಿಕ್ಷೆಗೆ ಒಳಗಾಗಿರಬಾರದು.
5) ಸಂಸತ್ತು ಕಾಲಕಾಲಕ್ಕೆ ನಿಗಧಿಪಡಿಸುವ ಅರ್ಹತೆ ಪಡೆದಿರಬೇಕು.

## ಸಭಾಪತಿ ಮತ್ತು ಉಪಸಭಾಪತಿ

* ಲೋಕಸಭೆಯ ಸದಸ್ಯರು ತಮ್ಮಲ್ಲಿ ಒಬ್ಬರನ್ನು ಸಭಾಪತಿಯಾಗಿ, ಮತ್ತೊಬ್ಬರನ್ನು ಉಪಸಭಾಪತಿಯಾಗಿ ಆಯ್ಕೆ ಮಾಡಿಕೊಳ್ಳಲು ಅವಕಾಶವಿದೆ.
* ಸಭಾಧ್ಯಕ್ಷರಾಗಿ ಆಯ್ಕೆಯಾದ ನಂತರ ಸದನದಲ್ಲಿ ಪಕ್ಷಾತೀತವಾಗಿ ಕಾರ್ಯನಿರ್ವಸಬೇಕಾಗುತ್ತದೆ.
* ಸಭಾಧ್ಯಕ್ಷರು ಸಭೆಯ ಕಾರ್ಯಕಲಾಪಗಳ ಅಧ್ಯಕ್ಷತೆ ವಹಿಸಿ ಸದನದಲ್ಲಿ ಶಾಂತಿ ಮತ್ತು ಶಿಸ್ತನ್ನು ಕಾಪಾಡುತ್ತಾರೆ.
* ನಿಯಮಗಳ ಸ್ಪಷ್ಟತೆ ಹಾಗೂ ನಿರ್ಣಯ ಕೊಡುವ ಅಧಿಕಾರ ಹೊಂದಿದ್ದಾರೆ.
* ಸದನದಲ್ಲಿ ಎಲ್ಲರೂ ಸಭಾಧ್ಯಕ್ಷರಿಗೆ ಗೌರವ ನೀಡುವುದು ಶಿಷ್ಟಾಚಾರ.
* ಮಸೂದೆಯ ಬಗ್ಗೆ ಸಮ ಮತಗಳು ಬಿದ್ದಾಗ ನಿರ್ಣಾಯಕ ಮತ ಚಲಾಯಿಸುತ್ತಾರೆ.
* ಸಭಾಧ್ಯಕ್ಷರ ಅನುಪಸ್ಥಿತಿಯಲ್ಲಿ ಉಪಾಧ್ಯಕ್ಷರು ಕಾರ್ಯಕಲಾಪ ನಿರ್ವಹಿಸುತ್ತಾರೆ.

## ಪ್ರತಿಪಕ್ಷ ನಾಯಕರ ಪಾತ್ರ ಮತ್ತು ಕಾರ್ಯಗಳು

* ಆಡಳಿತ ಪಕ್ಷದ ತಪ್ಪುಗಳನ್ನು ಎತ್ತಿ ತೋರಿಸುವುದು.
* ಸರ್ಕಾರದ ನೀತಿ ನಿಯಮಗಳನ್ನು ಪರಾಮರ್ಶಿಸುವುದು.
* ಸರ್ಕಾರ, ಮಂತ್ರಿ ಮಂಡಲ ಮತ್ತು ಅಧಿಕಾರಿಗಳನ್ನು ಎಚ್ಚರಗೊಳಿಸುವುದು.
* ಪ್ರತಿ ಪಕ್ಷ ನಾಯಕರಿಗೆ ಗೌರವಾನ್ವಿತ ಸ್ಥಾನವಿದೆ.

## ಸಂಸತ್ತಿನ ಅಧಿಕಾರ ಮತ್ತು ಕಾರ್ಯಗಳು

**1) ಶಾಸನ ರಚನಾ ಕಾರ್ಯಗಳು :**

* ದೇಶಕ್ಕೆ ಬೇಕಾದ ಕಾನೂನುಗಳನ್ನು ರಚಿಸುವುದು.

* ಸಂಸತ್ತು ಕೇಂದ್ರಪಟ್ಟಿಯಲ್ಲಿನ ವಿಷಯಗಳ ಬಗ್ಗೆ ಶಾಸನ ರಚಿಸುವ ಅಧಿಕಾರ ಹೊಂದಿದೆ.

* ಹಣಕಾಸಿನ ಮಸೂದೆಯನ್ನು ಲೋಕಸಭೆಯಲ್ಲಿ ಮಾತ್ರ ಮಂಡಿಸಲಾಗುತ್ತದೆ.

* ಸಾಮಾನ್ಯ ಮಸೂದೆಗಳನ್ನು ಯಾವುದೇ ಸದನದಲ್ಲಿ ಮಂಡಿಸಬಹುದು.

* ಮಸೂದೆ ಉರ್ಜಿತವಾಗಬೇಕಾದರೆ ಚರ್ಚೆಗಳ ಮೂಲಕ ಉಭಯ ಸದನಗಳ ಅನುಮೊದನೆ ಪಡೆಯಬೇಕು.

* ಮಸೂದೆಯ ಬಗ್ಗೆ ಸಮ ಮತಗಳು ಬಿದ್ದಾಗ ನಿರ್ಣಾಯಕ ಮತ ಚಲಾಯಿಸುತ್ತಾರೆ.

* ಮಸೂದೆಯ ಬಗ್ಗೆ ಭಿನ್ನಾಭಿಪ್ರಾಯ ಮೂಡಿದರೆ ರಾಷ್ಟ್ರಾಧ್ಯಕ್ಷರು ಜಂಟಿ ಅಧಿವೇಶನ ಕರೆದು ಬಗೆಹರಿಸಬಹುದು.

* ಸದನಗಳ ಒಪ್ಪಿಗೆ ದೊರೆತರೆ ಆ ಮಸೂದೆಯನ್ನು ರಾಷ್ಟ್ರಪತಿಗಳ ಒಪ್ಪಿಗೆಗಾಗಿ ಕಳುಹಿಸಬಹುದು.

* ರಾಷ್ಟ್ರಪತಿಗಳ ಒಪ್ಪಗೆಯ ನಂತರ ಮಸೂದೆಯು ಶಾಸನವಾಗಿ ಜಾರಿಗೆ ಬರುತ್ತದೆ.

**2) ಆಡಳಿತಾಧಿಕಾರ :**

* ಭಾರತ ಸಂಸದೀಯ ಸರ್ಕಾರವಾಗಿರುವುದರಿಂದ ಪ್ರಧಾನಮಂತ್ರಿ ಮತ್ತು ಮಂತ್ರಿ ಮಂಡಲ ನಿಜವಾದ ಕಾರ್ಯಾಂಗವಾಗಿದೆ.

* ಕೇಂದ್ರ ಮಂತ್ರಿಮಂಡಲ ಸಂಸತ್ತಿಗೆ ಜವಾಬ್ದಾರಿಯಾಗಿ ಕಾರ್ಯನಿರ್ವಹಿಸುತ್ತದೆ.

* ಸಂಸತ್ತು ಮಂತ್ರಿ ಮಂಡಲವನ್ನು ಪ್ರಶ್ನಿಸುವ ಮೂಲಕ ಕಾರ್ಯಾಂಗದ ಮೇಲೆ ಸಂಪೂರ್ಣ ನಿಯಂತ್ರಣ ಹೊಂದಿರುತ್ತದೆ.

* ಸಂಸತ್ತಿನ ವಿಶ್ವಾಸವಿರುವವರೆಗೆ ಮಾತ್ರ ಮಂತ್ರಿ ಮಂಡಲ ಅಧಿಕಾರದಲ್ಲಿ ಮುಂದುವರೆಯುತ್ತದೆ.

* ವಿಶ್ವಾಸ ಕಳೆದುಕೊಂಡಾಗ ಮಂತ್ರಿ ಮಂಡಲ ರಾಜೀನಾಮೆ ನೀಡಬೇಕಾಗುತ್ತದೆ.

**3) ಹಣಕಾಸಿನ ಅಧಿಕಾರ :**

* ಲೋಕಸಭೆಯು ರಾಷ್ಟ್ರದ ಹಣಕಾಸನ ಮೇಲೆ ಸಂಪೂರ್ಣ ಅಧಿಕಾರ ಹೊಂದಿದೆ.

* ಲೋಕಸಭೆಯ ಅನುಮತಿಯಿಲ್ಲದೆ ಸರ್ಕಾರ ತೆರಿಗೆಯನ್ನು ಸಂಗ್ರಹಣ ಮಾಡಲಿಕ್ಕೆ ಅಥವಾ ಖರ್ಚು ಮಾಡಲಿಕ್ಕೆ ಅಧಿಕಾರವಿಲ್ಲ.

* ಆಯವ್ಯಯವನ್ನು ಮೊದಲು ಲೊಕಸಭೆಯಲ್ಲಿ ಮಂಡಿಸುವ ನಿಯಮವಿದೆ.

* ಹಣಕಾಸಿನ ಮಸೂದೆಗೆ ಲೊಕಸಭೆಯ ಒಪ್ಪಿಗೆ ಪಡೆದ ನಂತರ ರಾಜ್ಯಸಭೆಗೆ ಕಳುಹಿಸಲಾಗುವುದು.

* ರಾಜ್ಯಸಭೆ ಮಸೂದೆಯ ಬಗ್ಗೆ ಕೆಲವು ಸಲಹೆ ಮತ್ತು ಸೂಚನೆ ಕೊಡುವ ಹಾಗೂ 14 ದಿನಗಳ ಕಾಲ ತಡೆಹಿಡಿಯುವ ಅಧಿಕಾವಿದೆ.

* ರಾಜ್ಯಸಭೆ 14 ದಿನಗಳಲ್ಲಿ ಹಿಂತಿರುಗಿಸದೇ ಹೋದರೆ ಮಸೂದೆ ಅಂಗೀಕಾರವಾಗಿದೆ ಎಂದು ಪರಿಗಣಿಸಿ ರಾಷ್ಟ್ರಪತಿಗಳ ಅನುಮೋದನೆಗೆ
ಕಳುಹಿಸಲಾಗುವುದು.

**4) ನ್ಯಾಯಾಂಗಾಧಿಕಾರ :**

* ರಾಷ್ಟ್ರಪತಿಗಳನ್ನು ಪದಚ್ಯುತಗೊಳಿಸುವುದು.

* ಸುಪ್ರೀಂಕೋರ್ಟ ಮತ್ತು ಹೈಕೋರ್ಟನ ನ್ಯಾಯಾಧೀಶರನ್ನು ಪದಚ್ಯುತಗೊಳಿಸುವುದು.
* ನ್ಯಾಯಾಲಯಕ್ಕೆ ಸಂಬಂಧಿಸಿದ ಕೆಲವು ತನಿಖಾ ವರದಿಗಳನ್ನು ಚರ್ಚಿಸುವ ಅಧಿಕಾರ.

**5) ಸಂವಿಧಾನ ತಿದ್ದುಪಡಿ ಮಾಡುವ ಅಧಿಕಾರ :**

* ಉಭಯ ಸದನಗಳಿಗೆ ಸಂವಿಧಾನ ತಿದ್ದುಪಡಿ ಮಾಡುವ ಸಮಾನ ಅಧಿಕಾರವಿದೆ.
* ಸಂವಿಧಾನ ತಿದ್ದುಪಡಿಗೆ ಸಂಬಂಧಿಸಿದ ಮಸೂದೆಯನ್ನು ಯಾವುದೇ ಸದನದಲ್ಲಿ ಮೊದಲು ಮಂಡಿಸಬಹುದು.
* ತಿದ್ದುಪಡಿ ಮಸೂದೆಗೆ ಉಭಯ ಸದನಗಳ ಅಂಗೀಕಾರ ಬೇಕೆಬೇಕು.
* ಒಂದು ಸದನ ಅಂಗೀಕರಿಸಿದ ಮಸೂದೆಯನ್ನು ಇನ್ನೊಂದು ಸದನ ತಿರಸ್ಕರಿಸಿದರೆ ಸಂವಿಧಾನ ತಿದ್ದುಪಡಿ ಸಾಧ್ಯವಿಲ್ಲ.
* ಕೆಲವು ಸಂದರ್ಭಗಳಲ್ಲಿ ಸಂವಿಧಾನ ತಿದ್ದುಪಡಿಗೆ ರಾಜ್ಯಗಳ ವಿಧಾನ ಸಭೆಗಳ ಸಹಮತವು ಅವಶ್ಯಕಾವಾಗಿದೆ.

**6) ಇತರೆ ಅಧಿಕಾರ ಕಾರ್ಯಗಳು :**

* ಸರ್ವೋಚ್ಚ ಮತ್ತು ಉಚ್ಚ ನ್ಯಾಯಾಲಯದ ಅಧಿಕಾರ ಮತ್ತು ವ್ಯಾಪ್ತಿಯ ಬಗ್ಗೆ ಕಾನೂನು ರೂಪಿಸುವುದು.
* ಎರಡು ಅಥವಾ ಎರಡಕ್ಕಿಂತ ಹೆಚ್ಚು ರಾಜ್ಯಗಳಿಗೆ ಒಂದೇ ಉಚ್ಚ ನ್ಯಾಯಾಲಯ ಸ್ಥಾಪನೆ ಅಧಿಕಾರ.
* ಹೊಸ ರಾಜ್ಯಗಳ ಸೃಷ್ಟಿ, ಹೆಸರು ಬದಲಾವಣೆ, ರಾಜ್ಯದ ಗಡಿ ರೇಖೆ ನಿರ್ಧರಿಸುವುದು.
* ಲೋಕಸೇವಾ ಆಯೋಗ, ಹಣಕಾಸು ಆಯೋಗ, ಚುನಾವಣಾ ಆಯೋಗ, ಹಿಂದುಳಿದ ವರ್ಗಗಳ ಆಯೋಗ ಮುಂತಾದ ಆಯೋಗಗಳ ವರದಿಗಳ ಬಗ್ಗೆ ಚರ್ಚೆ ನಡೆಸುವುದು.
* ರಾಷ್ಟ್ರೀಯ ತುರ್ತು ಪರಿಸ್ಥಿತಿ, ರಾಜ್ಯ ತುರ್ತು ಪರಿಸ್ಥಿತಿ ಮತ್ತು ಹಣಕಾಸಿನ ತುರ್ತು ಪರಿಸ್ಥಿತಿಯನ್ನು ಅನುಮೋದಿಸುವುದು.

## ಕೇಂದ್ರ ಕಾರ್ಯಾಂಗ

* ಕೇಂದ್ರ ಶಾಸಕಾಂಗ ರೂಪಿಸಿದ ಕಾನೂನುಗಳನ್ನು ಜಾರಿಗೆಗೊಳಿಸುವುದು.
* ಇದು ಕೇಂದ್ರ ಸರ್ಕಾರದ ಕಾರ್ಯಕ್ರಮಗಳು ಹಾಗೂ ನೀತಿಗಳನ್ನು ಜಾರಿಗೊಳಿಸುತ್ತದೆ.
* ಕಾರ್ಯಾಂಗವು ರಾಷ್ಟ್ರಪತಿ, ಪ್ರಧಾನ ಮಂತ್ರಿ ಮತ್ತು ಮಂತ್ರಿಮಂಡಲವನ್ನು ಒಳಗೊಂಡಿದೆ.
* ರಾಷ್ಟ್ರಪತಿ ನಾಮಮಾತ್ರ ಕಾರ್ಯಾಂಗದ ಮುಖ್ಯಸ್ಥರಾದರೆ, ಪ್ರಧಾನ ಮಂತ್ರಿ ಮತ್ತು ಮಂತ್ರಿಮಂಡಲ ನಿಜವಾದ ಕಾರ್ಯಾಂಗವಾಗಿದೆ.

## ರಾಷ್ಟ್ರಪತಿ

* ನಮ್ಮ ಸಂವಿಧಾನದ 52ನೇ ವಿಧಿಯು ರಾಷ್ಟ್ರಪತಿ ಸ್ಥಾನಕ್ಕೆ ಅವಕಾಶ ಕಲ್ಪಿಸಿ ಕೊಟ್ಟಿದೆ.
* ಭಾರತದ ರಾಷ್ಟ್ರಪತಿಯು ಸಂವಿಧಾನದ ಮುಖ್ಯಸ್ಥರು, ರಾಷ್ಟ್ರದ ಪ್ರಥಮ ಪ್ರಜೆಯೂ ಹಾಗೂ ಕಾರ್ಯಾಂಗದ ಮುಖ್ಯಸ್ಥರು ಆಗಿದ್ದಾರೆ.
* ಭೂಪಡೆ, ವಾಯುಪಡೆ ಮತ್ತು ನೌಕಾ ಪಡೆಯ ಮಹಾದಂಡನಾಯಕರು ಆಗಿದ್ದಾರೆ.
* ರಾಷ್ಟ್ರದ ಸಮಸ್ತ ಅಧಿಕಾರವೆಲ್ಲವೂ ಇವರಿಗೆ ಸೇರಿದ್ದು, ಸರ್ವೋನ್ನತ ಸ್ಥಾನವನ್ನು ಹೊಂದಿದ್ದಾರೆ.

* ಇವರ ಅಧಿಕಾರವನ್ನು ಯಾವ ನ್ಯಾಯಾಲಯದಲ್ಲಿಯೂ ಪ್ರಶ್ನಿಸುವಂತಿಲ್ಲ.

* ರಾಷ್ಟ್ರಪತಿ ಸ್ಥಾನವನ್ನು ಅಲಂಕರಿಸುವವರು ಭಾರತದ ಸತ್ಪ್ರಜೆಯಾಗಿರಬೇಕು.

**ರಾಷ್ಟ್ರಪತಿಯವರ ಚುನಾವಣಾ ವಿಧಾನ**

* ಸಂವಿಧಾನದ 54 ಮತ್ತು 55ನೇ ವಿಧಿಯಲ್ಲಿ ರಾಷ್ಟ್ರಪತಿಯ ಚುನಾವಣಾ ವಿಧಾನವನ್ನು ಅಳವಡಿಸಲಾಗಿದೆ.

* ರಾಷ್ಟ್ರಪತಿಯವರನ್ನು ಉಭಯ ಸದನಗಳ ಚುನಾಯಿತ ಸದಸ್ಯರು ಹಾಗೂ ಎಲ್ಲಾ ರಾಜ್ಯಗಳ ವಿಧಾನಸಭಾ ಚುನಾಯಿತ ಸದಸ್ಯರಿಂದ ಕೂಡಿದ ಮತದಾರರ ವರ್ಗ ಚುನಾಯಿಸುತ್ತದೆ.

* ಸುಪ್ರೀಂಕೋರ್ಟನ ಮುಖ್ಯ ನ್ಯಾಯಾಧೀಶರು ಇವರಿಗೆ ಪ್ರಮಾಣ ವಚನ ಬೋಧಿಸುತ್ತಾರೆ.

* ಇವರ ಅಧಿಕಾರ ಅವಧಿ 5 ವರ್ಷವಾಗಿದ್ದು, ಪುನರ್ ಆಯ್ಕೆಗೆ ಅರ್ಹರು.

* ಸಂವಿಧಾನವನ್ನು ಉಲ್ಲಂಘಿಸಿದಲ್ಲಿ ಮಹಾಭೀಯೋಗದ ಮೂಲಕ ರಾಷ್ಟ್ರಪತಿಯನ್ನು ಪದಚ್ಯುತಗೊಳಿಸುವ ಅಧಿಕಾರ
ಸಂಸತ್ತಿಗಿದೆ.

**ಅರ್ಹತೆಗಳು**

1) ಭಾರತದ ಪ್ರಜೆಯಾಗಿರಬೇಕು.
2) 35 ವರ್ಷ ವಯೋಮಿತಿಯನ್ನು ಹೊಂದಿರಬೇಕು.
3) ಸಂಸತ್ ಸದಸ್ಯರಾಗಲು ಇರಬೇಕಾದ ಅರ್ಹತೆಗಳನ್ನು ಹೊಂದಿರಬೇಕು.
4) ಸರ್ಕಾರದ ಯಾವುದೇ ಹುದ್ದೆಯಲ್ಲಿರಬಾರದು.

**ರಾಷ್ಟ್ರಪತಿಯವರ ಅಧಿಕಾರಗಳು**

**1) ಕಾರ್ಯಾಂಗಾಧಿಕಾರಗಳು :**

* ಪ್ರಧಾನ ಮಂತ್ರಿಯನ್ನು ನೇಮಕ ಮಾಡುವುದು.
* ಪ್ರಧಾನಿಯ ಸಲಹೆಯ ಮೇರೆಗೆ ಇತರೆ ಮಂತ್ರಿಗಳನ್ನು ನೇಮಕ ಮಾಡುವುದು.
* ಅಟಾರ್ನಿ ಜನರಲ್ ರನ್ನು ನೇಮಕ ಮಾಡುವುದು.
* ಸುಪ್ರೀಂ ಕೋರ್ಟ ಮತ್ತು ಹೈಕೋರ್ಟನ ನ್ಯಾಯಾಧೀಶರನ್ನು ನೇಮಕ ಮಾಡುವುದು.
* ರಾಜ್ಯಪಾಲರನ್ನು ನೇಮಕ ಮಾಡುವುದು.
* ಹಣಕಾಸು ಆಯೋಗದ ಉಪಾಧ್ಯಕ್ಷರನ್ನು ಮತ್ತು ಸದಸ್ಯರನ್ನು ನೇಮಕ ಮಾಡುವುದು.
* ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಕ ಮಾಡುವುದು.
* ಚುನಾವಣಾ ಆಯುಕ್ತರನ್ನು ನೇಮಕ ಮಾಡುವುದು.
* ಸೇನಾ ಪಡೆಗಳ ದಂಡನಾಯಕರನ್ನು ನೇಮಕ ಮಾಡುವುದು.
* ವಿವಿಧ ರಾಷ್ಟ್ರಗಳಿಗೆ ರಾಯಭಾರಿಗಳನ್ನು ನೇಮಕ ಮಾಡುವುದು.
* ಈ ಮೇಲಿನ ಅಧಿಕಾರಿಗಳನ್ನು ಸಂವಿಧಾನಬದ್ಧವಾಗಿ ಪದಚ್ಯುತಗೊಳಿಸುವ ಅಧಿಕಾರವು ರಾಷ್ಟ್ರಪತಿಗಳಿಗಿದೆ.

**2) ಶಾಸನಾಧಿಕಾರಗಳು :**

* ಸಂಸತ್ತಿನ ಅಧಿವೇಶನ ಕರೆಯುವ, ಮುಂದೂಡುವ ಹಾಗೂ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡುವ ಅಧಿಕಾರ ಹೊಂದಿದ್ದಾರೆ.
* ಪ್ರಧಾನಿಯ ಸಲಹೆಯ ಮೇರೆಗೆ ಲೋಕಸಭೆಯನ್ನು ವಿಸರ್ಜಿಸುವ ಅಧಿಕಾರವನ್ನು ಹೊಂದಿದ್ದಾರೆ.
* ಸಂಸತ್ತಿನ ಉಭಯ ಸದನಗಳಿಂದ ಅಂಗೀಕರಿಸಲ್ಪಟ್ಟ ಮಸೂದೆಗಳಗೆ ಒಪ್ಪಿಗೆ ನೀಡುವ, ಪುನರ್ ಪರಿಶೀಲಿಸುವ, ಹಿಂದಿರುಗಿಸುವ ಅಥವಾ ತಡೆಹಿಡಿಯುವ ಅಧಿಕಾರ ಹೊಂದಿದ್ದಾರೆ.
* ಲೋಕಸಭೆಗೆ ಇಬ್ಬರು ಆಂಗ್ಲೋ-ಇಂಡಿಯನ್ ರನ್ನು ಮತ್ತು ರಾಜ್ಯಸಭೆಗೆ 12 ಜನರನ್ನು ನಾಮಕರಣ ಮಾಡು ಅಧಿಕಾರವನ್ನು ಹೊಂದಿದ್ದಾರೆ.
* ಈ ಎಲ್ಲಾ ಅಧಿಕಾರವನ್ನು ಪ್ರಧಾನಿ ಮತ್ತು ಮಂತ್ರಿಮಂಡಲದ ಸಲಹೆಯಂತೆ ನಿರ್ವಹಿಸುತ್ತಾರೆ.

**3) ನ್ಯಾಯಾಂಗಾಧಿಕಾರಗಳು :**

* ನ್ಯಾಯಾಲಯಗಳು ಅಪರಾಧಿಗಳಿಗೆ ನೀಡಿದ ಶಿಕ್ಷೆಯನ್ನು ಕಡಿಮೆ ಮಾಡುವ ಅಧಕಾರ ಹೊಂದಿದ್ದಾರೆ.
* ಮರಣ ದಂಡನೆಯಂತಹ ಕಠಿಣ ಶಿಕ್ಷೆಯನ್ನು ರದ್ದುಪಡಿಸುವ ಅಧಿಕಾರ ಹೊಂದಿದ್ದಾರೆ.
* ರಾಷ್ಟ್ರದ ಕಾನೂನುಗಳಿಗೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯದ ಸಲಹೆ ಕೇಳಬಹುದು.

**4) ಹಣಕಾಸಿನ ಅಧಿಕಾರಗಳು :**

* ರಾಷ್ಟ್ರಪತಿಯವರ ಅನುಮತಿಯಿಲ್ಲದೆ ಹಣಕಾಸಿನ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸುವಂತಿಲ್ಲ.
* ಆಯೋಗಗಳ ವರದಿಯನ್ನು ಸಂಸತ್ತಿನಲ್ಲಿ ಚರ್ಚಿಸಲು ಇವರ ಶಿಫಾರಸ್ಸು ಅವಶ್ಯಕ.
  ಉದಾ : ಹಣಕಾಸು ಆಯೋಗದ ವರದಿ, ಮಹಾಲೇಖಪಾಲರು ಮತ್ತು ಪರಿಶೋಧಕರ ವರದಿ.
* ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು, ಲೋಕಸೇವಾ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರಿಗೆ ಸಂಚಿತ ನಿಧಿಯಿಂದ ವೇತನ ಬಿಡುಗಡೆ ಮಾಡುತ್ತಾರೆ.
* ಒಟ್ಟಾರೆ ಹಣಕಾಸು ಮಸೂದೆ ಕಾಯ್ದೆಯಾಗಬೇಕಾದರೆ ಇವರ ಒಪ್ಪಿಗೆ ಅವಶ್ಯಕ.

**5) ಮಿಲಿಟರಿ ಅಧಿಕಾರಗಳು :**

* ಸಮಸ್ತ ಸೇನಾ ಪಡೆಗಳ ಮಹಾದಂಡನಾಯಕರು ಆಗಿದ್ದಾರೆ.
* ಭೂಪಡೆ, ವಾಯುಪಡೆ ಮತ್ತು ನೌಕಾ ಪಡೆಯ ದಂಡನಾಯಕರು ನೇಮಕ ಮಾಡುತ್ತಾರೆ.
* ಸಂಸತ್ತಿನ ಒಪ್ಪಿಗೆ ಮೇರೆಗೆ ಯುದ್ಧ ಅಥವಾ ಶಾಂತಿಯನ್ನು ಘೋಷಿಸುವ ಅಧಿಕಾರವಿದೆ.

**6) ತುರ್ತು ಪರಿಸ್ಥಿತಿಯ ಅಧಿಕಾರಗಳು :**

* ಸಚಿವ ಸಂಪುಟದ ಲಿಖಿತ ಶಿಫಾರಸ್ಸಿನ ಮೇರೆಗೆ ರಾಷ್ಟ್ರಪತಿಗಳು 3 ಸದರ್ಭಗಳಲ್ಲಿ ತುರ್ತು ಪರಿಸ್ಥಿತಿಯನ್ನು ಜಾರಿಗೋಳಿಸಬಹುದು.
* ನಮ್ಮ ಸಂವಿಧಾನದ 18ನೇ ಭಾಗದಲ್ಲಿ 3 ಬಗೆಯ ತುರ್ತು ಪರಿಸ್ಥಿತಿಗೆ ಅವಕಾಶ ಕಲ್ಪಿಸಲಾಗಿದೆ.

* ತುರ್ತು ಪರಿಸ್ಥಿತಿಯನ್ನು ಘೋಷಿಸಿದಾಗ ಒಂದು ತಿಂಗಳೊಳಗೆ ಸಂಸತ್ತಿನ ಅನುಮೋದನೆ ಪಡೆಯಬೇಕು.

1) ರಾಷ್ಟ್ರೀಯ ತುರ್ತು ಪರಿಸ್ಥಿತಿ (352ನೇ ವಿಧಿ)

2) ರಾಜ್ಯ ತುರ್ತು ಪರಿಸ್ಥಿತಿ (356ನೇ ವಿಧಿ)

3) ಆರ್ಥಿಕ ತುರ್ತು ಪರಿಸ್ಥಿತಿ (360ನೇ ವಿಧಿ)

7) **ವಿವೇಚನಾಧಿಕಾರಗಳು** : ರಾಷ್ಟ್ರಪತಿಗಳು ಮಂತ್ರಿಮಂಡಲದ ಸಲಹೆ ಇಲ್ಲದೆ ಕೆಲವು ಅಧಿಕಾರ ಚಲಾಯಿಸಬಹುದು.

* ಲೋಕಸಭೆಯಲ್ಲಿ ಯಾವುದೇ ಪಕ್ಷ ಸ್ಪಷ್ಟ ಬಹುಮತ ಪಡೆಯದಿದ್ದಾಗ ಯಾವುದೇ ಪಕ್ಷದ ನಾಯಕನನ್ನು ಸರ್ಕಾರ ರಚಿಸುವಂತೆ ಆಮಂತ್ರಿಸುವ ಅಧಿಕಾರ.

* ಸಂಸತ್ತು ಅಂಗೀಕರಿಸಿದ ಮಸೂದೆಗಳನ್ನು ಮರು ಪರಿಶೀಲನೆಗೆ ವಾಪಸ್ಸು ಕಳುಹಿಸುವ ಅಥವಾ ತಡೆಹಿಡಿಯುವ ಅಧಿಕಾರ.

* ಲೋಕಸಭೆಯನ್ನು ವಿಸರ್ಜಿಸುವ ಅಧಿಕಾರ.

## ಪ್ರಧಾನ ಮಂತ್ರಿ

* ರಾಷ್ಟ್ರಪತಿಯವರಿಗೆ ಸಹಾಯ ಮತ್ತು ಸಲಹೆ ನೀಡಲು ಪ್ರಧಾನ ಮಂತ್ರಿ ಮತ್ತು ಮಂತ್ರಿಮಂಡಲಕ್ಕೆ ಸಂವಿಧಾನಕ್ಕೆ ಅವಕಾಶ ಕಲ್ಪಿಸಲಾಗಿದೆ.

* ಪ್ರಧಾನಿಯವರು ಅಧಿಕಾರಗಳ ಕೇಂದ್ರಬಿಂದುವಾಗಿದ್ದು, ರಾಷ್ಟ್ರದ ಸಮಗ್ರ ಆಡಳಿತವನ್ನು ನಿರ್ವಹಿಸುವ ಅಧಿಕಾರವಿದೆ.

* ರಾಷ್ಟ್ರಪತಿಯವರು ರಾಷ್ಟ್ರದ ಮುಖ್ಯಸ್ಥರಾದರೆ, ಪ್ರಧಾನಿಯವರು ಸರ್ಕಾರದ ಮುಖ್ಯಸ್ಥರಾಗಿದ್ದಾರೆ.

* ಲೋಕಸಭೆಯ ವಿಶ್ವಾಸವಿರುವವರೆಗೆ ಇವರು ಅಧಿಕಾರದಲ್ಲಿ ಮುಂದುವರೆಯುತ್ತಾರೆ.

## ಪ್ರಧಾನ ಮಂತ್ರಿ ಅಧಿಕಾರಗಳು

* ಮಂತ್ರಿಗಳ ನೇಮಕ, ಖಾತೆಗಳ ಹಂಚಿಕೆ ಮತ್ತು ಮಂತ್ರಿಗಳನ್ನು ವಜಾ ಮಾಡುವ ಅಧಿಕಾರ.

* ಸರ್ಕಾರದ ಮುಖ್ಯಸ್ಥರು.

* ಸಚಿವ ಸಂಪುಟದ ನಾಯಕ.

## ಮತ್ರಿಮಂಡಲ

* ಮಂತ್ರಿಮಂಡಲ ನೈಜ ಕಾರ್ಯಾಂಗವಾಗಿದೆ.

* ಸಚಿವರಲ್ಲಿ ಎರಡು ಬಗೆಯ ಸ್ಥಾನಮಾನಗಳಿವೆ.

    1) ಸಂಪುಟ ದರ್ಜೆ ಸಚಿವರು.

    2) ರಾಜ್ಯ ಸಚಿವರು.

* ಮಂತ್ರಿಮಂಡಲದ ಗರಿಷ್ಠ ಸಂಖ್ಯೆಯು ಸಂಸತ್ತಿನ ಒಟ್ಟು ಸದಸ್ಯರಲ್ಲಿ ಶೇಕಡಾ 15 ರಷ್ಟಿರಬೇಕು.

* ಪ್ರತಿ ಇಲಾಖೆಯ ಮಂತ್ರಿಯು ತಮ್ಮ ಖಾತೆಯ ಆಗು-ಹೋಗುಗಳು, ಸಫಲತೆ-ವಿಫಲತೆಗೆ ವೈಯಕ್ತಿಕ ಹೊಣೆಗಾರಿಕೆಯನ್ನು ಹೊಂದಿರುತ್ತಾರೆ.
* ಮಂತ್ರಿಮಂಡಲವು ಸಂಸತ್ತಿಗೆ ಸಾಮೂಹಿಕ ಹೊಣೆಗಾರಿಕೆಯನ್ನು ಹೊಂದಿರುತ್ತದೆ.
* ಮಂತ್ರಿಮಂಡಲವು ಸಂಸತ್ತಿನ ವಿಶ್ವಾಸವಿರುವವರೆಗೂ ಅಧಿಕಾರದಲ್ಲಿ ಮುಂದುವರೆಯುತ್ತದೆ.
* ವಿಶ್ವಾಸ ಕಳೆದುಕೊಂಡರೆ ಅವಿಶ್ವಾಸ ಗೊತ್ತುವಳಿ ಮೂಲಕ ಅಧಿಕಾರದಿಂದ ಕೆಳಗಿಳಿಸಬೇಕಾಗುತ್ತದೆ.

## ಸ್ಥಳೀಯ ಸರ್ಕಾರ

- ಗ್ರಾಮ ಪಂಚಾಯಿತಿಗಳನ್ನು ಸಂಘಟಿಸುವಂತೆ ಹಾಗೂ ಅವುಗಳ ಪರಿಣಾಮಕಾರಿ ಕಾರ್ಯನಿರ್ವಹಣೆಗೆ ಸೂಕ್ತ ಅಧಿಕಾರ ಒದಗಿಸುವಂತೆ ಸಂವಿಧಾನ ರಾಜ್ಯಗಳಿಗೆ ಸ್ಪಷ್ಟ ನಿರ್ದೇಶನ ನೀಡಿರುತ್ತದೆ.
- ಸಂವಿಧಾನದ 73ನೇ ಮತ್ತು 74ನೇ ತಿದ್ದುಪಡಿಗಳು 1993 ರಲ್ಲಿ ಜಾರಿಗೆ ಬಂದು ಪಂಚಾಯತ್ ರಾಜ್ ವ್ಯವಸ್ಥೆಯ ಇತಿಹಾಸದಲ್ಲಿಯೇ ಒಂದು ಮೈಲಿಗಲ್ಲು ಎನಿಸಿಕೊಂಡಿದೆ.
- ಕರ್ನಾಟಕದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿಯೇ ಅನೇಕ ಸ್ಥಳೀಯ ಸ್ವಯಂ ಸರ್ಕಾರಗಳು ಕಾರ್ಯನಿರ್ವಹಿಸಿದ್ದವು ಎಂದು ತಿಳಿದು ಬಂದಿದೆ.
- ಸ್ವಾತಂತ್ರ್ಯ ನಂತರ ಸ್ಥಳೀಯ ಸ್ವಯಂ ಸರ್ಕಾರಗಳ ಸ್ಥಾಪನೆ ಹಾಗೂ ಬಲವರ್ಧನೆಗಾಗಿ ನಮ್ಮ ರಾಜ್ಯವು ಹಲವು ಸಮಿತಿಗಳನ್ನು ರಚಿಸಿ ಸಲಹೆ ಪಡೆದು ಅವುಗಳನ್ನು ಅನುಸರಿಸಿದೆ.
- ನಮ್ಮ ರಾಜ್ಯ ಸರ್ಕಾರವು 1983ರಲ್ಲಿ ಪಂಚಾಯತ್ ರಾಜ್ ಕಾಯಿದೆಯನ್ನು ಪರಿಚಯಿಸಿ 1985ರಿಂದ ಆ ಕಾಯಿದೆಯನ್ನು ಜಾರಿಗೆ ತಂದಿದೆ.
- ಈ ಕಾಯಿದೆಯ ಪ್ರಕಾರ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯಿತಿಗಳು, ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಪಂಚಾಯಿತಿಗಳು ಮತ್ತು ಗ್ರಾಮ ಮಟ್ಟದಲ್ಲಿ ಗ್ರಾಮಪಂಚಾಯಿತಿಗಳು ಪ್ರತ್ಯಕ್ಷ ಚುನಾವಣೆಗಳ ಮೂಲಕ ರಚಿತವಾಗಬೇಕೆಂದು ಸೂಚಿಸಲಾಗಿದೆ.
- 1983 ರ ಕಾಯಿದೆಯನ್ನು ಇನ್ನಷ್ಟು ಬಲಪಡಿಸಲು 1993ರಲ್ಲಿ ಪಂಚಾಯತ್ ಕಾಯಿದೆಗೆ ತಿದ್ದುಪಡಿ ತರಲಾಯಿತು.
- ಈ ತಿದ್ದುಪಡಿಯಲ್ಲಿ ಗ್ರಾಮ ಸಭೆಗಳ ರಚನೆಗಳಿಗೆ ಅವಕಾಶ ಕಲ್ಪಿಸಲಾಯಿತು ಕರ್ನಾಟಕ ಪಂಚಾಯತ್ ರಾಜ್ ಕಾಯಿದೆಯಲ್ಲಿ ಗ್ರಾಮಾಭಿವೃದ್ಧಿಗೆ ಅನುಕೂಲವಾಗುವಂತಹ ತಿದ್ದುಪಡಿಗಳನ್ನು ಮಾಡಲಾಗಿದೆ.

**ಸ್ಥಳೀಯ ಸ್ವಯಂಸರ್ಕಾರಗಳ ಉದ್ದೇಶಗಳು :**

- ಸ್ಥಳೀಯ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಸ್ಥಳೀಯರನ್ನೇ ಬಳಸಿಕೊಳ್ಳುವುದು.
- ಜನ ಸಾಮಾನ್ಯರಿಗೆ ಆಡಳಿತಜ್ಞಾನ ಒದಗಿಸುವುದು.
- ಅಧಿಕಾರವನ್ನು ವಿಕೇಂದ್ರೀಕರಿಸಿ ಆಡಳಿತವನ್ನು ಹೆಚ್ಚು ಪರಿಣಾಮಕಾರಿಯಾಗುವಂತೆ ಮಾಡುವುದು.
- ತಳಮಟ್ಟದ ಹಂತದಲ್ಲಿ ಜನರಿಗೆ ನಾಯಕತ್ವದ ಗುಣಲಕ್ಷಣಗಳನ್ನು ಅಭಿವೃದ್ದಿಗೊಳಿಸುವುದು ಅಥವಾ ತರಬೇತಿ ನೀಡುವುದು.

**ಸ್ಥಳೀಯ ಸ್ವಯಂ ಸರ್ಕಾರಗಳ ಕಾರ್ಯಗಳು :**

- ಸ್ಥಳೀಯ ಸ್ವಯಂ ಸರ್ಕಾರಗಳಾದಂತಹ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳ ಕಾರ್ಯಗಳು ಬೇರೆ ಬೇರೆಯಾಗಿದ್ದು ಅವುಗಳು ಅನೇಕ ಕಾರ್ಯಗಳನ್ನು ಒಳಗೊಂಡಿವೆ. ಅವುಗಳಲ್ಲಿ ಪ್ರಮುಖ ಮತ್ತು ಸಾಮಾನ್ಯ ಕಾರ್ಯಗಳೆಂದರೆ
- ಪಂಚಾಯಿತಿಯ ಆಸ್ತಿಯನ್ನು ರಕ್ಷಿಸಿ ಕಾಪಾಡಿಕೊಳ್ಳುವುದು.
- ಸ್ಥಳೀಯ ಮಂಡಳಿಯ ವಾರ್ಷಿಕ ಆಯವ್ಯಯದ ಮುಂಗಡ ಪತ್ರ ತಯಾರಿಸುವುದು.
- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಯೋಜನೆಗಳನ್ನು ಕೈಗೊಳ್ಳುವುದು.

- ರಸ್ತೆ ನಿರ್ಮಾಣ, ವಿದ್ಯುತ್ತೀಕರಣ, ಗೃಹನಿರ್ಮಾಣ ಮತ್ತು ಕುಡಿಯುವ ನೀರಿನ ಸರಬರಾಜು ಮುಂತಾದ ಅಭಿವೃದ್ಧಿ ಕೆಲಸಗಳಿಗೆ ಕಾರ್ಯಯೋಜನೆ ರೂಪಿಸಿ ಅನುಷ್ಠಾನಗೊಳಿಸುವುದು.
- ಪ್ರಾಥಮಿಕ, ಪ್ರೌಢ, ವಯಸ್ಕರ ಮತ್ತು ಅನೌಪಚಾರಿಕ ಶೈಕ್ಷಣಿಕ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸುವುದು.
- ತಮ್ಮ ಪ್ರದೇಶಗಳಲ್ಲಿ ಸ್ವಚ್ಚತೆ ಮತ್ತು ನಿರ್ಮಲೀಕರಣವನ್ನು ಕಾಪಾಡುವುದು.
- ಎಲ್ಲಾ ಪ್ರಕಾರದ ಮಾಲಿನ್ಯಗಳನ್ನು ತಡೆಗಟ್ಟಿ ಉತ್ತಮ ಆರೋಗ್ಯಕರ ಸವಲತ್ತುಗಳನ್ನು ಒದಗಿಸುವುದು.
- ಅವಶ್ಯಕ ಪಡಿತರಗಳಾದ ಆಹಾರಧಾನ್ಯ, ಸೀಮೆಎಣ್ಣೆ ಇತ್ಯಾದಿಗಳ ವಿತರಣೆಗೆ ಸೂಕ್ತ ವ್ಯವಸ್ಥೆಯನ್ನು ನಿರ್ಮಿಸಿ ಸವಲತ್ತುಗಳನ್ನು ಒದಗಿಸುವುದು.
- ಜನನ ಮತ್ತು ಮರಣಗಳ ನೊಂದಣಿ ಪ್ರಾಮಾಣಿಕವಾಗಿ ಆಗುತ್ತಿರುವುದನ್ನು ಖಾತ್ರಿ
- ಪಡಿಸಿಕೊಳ್ಳುವುದು. ಕೃಷಿ, ಪಶುಸಂಗೋಪನೆ, ಖಾದಿ ಮತ್ತು ಕರಕುಶಲ ಉದ್ಯೋಗಗಳನ್ನು ಪ್ರೋತ್ಸಾಹಿಸುವುದು.
- ಮಣ್ಣು, ನೀರು ಮತ್ತು ಅರಣ್ಯ ರಕ್ಷಣೆಗೆ ಕಾರ್ಯಕ್ರಮಗಳನ್ನು ಕೈಗೊಳ್ಳುವುದು.
- ರೈತರಿಗೆ ಸಹಾಯ ಮಾಡುವ ಸಲುವಾಗಿ ಕೃಷಿ ವಿಸ್ತರಣಾ ಕಾರ್ಯಕ್ರಮಗಳನ್ನು ನಡೆಸುವುದು.
- ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ದುರ್ಬಲವರ್ಗ, ಮಹಿಳೆ ಮತ್ತು ಮಕ್ಕಳಿಗಾಗಿ ಕಲ್ಯಾಣಯೋಜನೆಗಳನ್ನು ರೂಪಿಸಿ ಅನುಷ್ಠಾನಕ್ಕೆ ತರುವುದು.
- ವಾಚನಾಲಯ, ಬೀದಿ ದೀಪಗಳು ಮತ್ತು ಮಾರುಕಟ್ಟೆ ಸವಲತ್ತುಗಳನ್ನು ಒದಗಿಸಿ ಕೊಡುವುದು.
- ಶುಲ್ಕ, ದಂಡ ಮತ್ತು ತೆರಿಗೆಗಳನ್ನು ಸಂಗ್ರಹಿಸುವುದು.
- ಸರ್ಕಾರದ ಕಲ್ಯಾಣ ಯೋಜನೆಗಳಿಗೆ ಫಲಾನುಭವಿಗಳನ್ನು ಮುಕ್ತವಾಗಿ ಗುರುತಿಸುವುದು.

**ಸ್ಥಳೀಯ ಸ್ವಯಂ ಆಡಳಿತ ಮಂಡಳಿಗಳ ರಚನೆ :**

**ಗ್ರಾಮ ಸಭೆಗಳು :** ಗ್ರಾಮ ಸಭೆಯು ಒಂದು ಹಳ್ಳಿಯ ಅಥವಾ ಗ್ರಾಮದ ಮಂಡಳಿ ಎಂದು ಪರಿಭಾವಿಸಲಾಗಿದ್ದು ಇದರ ರಚನೆಗೆ ಚುನಾವಣೆ ಬೇಕಿರುವುದಿಲ್ಲ. ಗ್ರಾಮದಲ್ಲಿನ

- ಹದಿನೆಂಟು ವರ್ಷಗಳಿಗಿಂತ ಮೇಲ್ಪಟ್ಟ ವಂಯಸ್ಸಿನ ಎಲ್ಲಾ ಪುರುಷ ಮತ್ತು ಸ್ತ್ರೀ ಸದಸ್ಯರು ಗ್ರಾಮ ಸಭೆಯಲ್ಲಿ ಪಾಲ್ಗೊಳ್ಳಬಹುದು.
- ಗ್ರಾಮ ಪಂಚಾಯಿತಿಯ ಸದಸ್ಯರುಗಳು ಈ ಸಭೆಯಲ್ಲಿ ಭಾಗವಹಿಸಬಹುದು. ಗ್ರಾಮಪಂಚಾಯಿತಿ ಅಧ್ಯಕ್ಷ, ಗ್ರಾಮ ಸಭೆಯ ಅಧ್ಯಕ್ಷತೆ ವಹಿಸಿ ಸಭಾಕಲಾಪ ನಡೆಸಿಕೊಡಬೇಕು.
- ಗ್ರಾಮಸಭೆಯು ಪ್ರತಿ ಆರು ತಿಂಗಳಿಗೊಮ್ಮೆಯಂತೆ ನಡೆಯಬೇಕು.
- ಸಭೆಯಲ್ಲಿ ಗ್ರಾಮಸ್ಥರು ತಮ್ಮ ಗ್ರಾಮದ ಸಮಸ್ಯೆಗಳನ್ನು, ಅವುಗಳನ್ನು ಪರಿಹರಿಸಲು ಕೈಗೊಂಡ ಕ್ರಮಗಳನ್ನು ಹಾಗೂ ಮುಂದೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸುತ್ತಾರೆ. ಗ್ರಾಮಸ್ಥರಿಗೆ ಸಲಹೆ ನೀಡಲು ಅವಕಾಶವಿರುತ್ತದೆ.

- ಸರಕಾರದ ವಿವಿಧ ಯೋಜನೆಗಳಿಗೆ ಫಲಾನುಭವಿಗಳನ್ನು ಗುರುತಿಸುವ ಜವಾಬ್ದಾರಿಯು ಈ ಸಭೆಗೆ ಇರುತ್ತದೆ.

**ಗ್ರಾಮ ಪಂಚಾಯಿತಿ :**

- ಗ್ರಾಮ ಪಂಚಾಯಿತಿಗಳು ಜನಸಂಖ್ಯೆಯ ಆಧಾರಿತವಾಗಿ ರಚಿತಗೊಳ್ಳುತ್ತವೆ.
- ಒಟ್ಟು 5000 ದಿಂದ 7000 ಜನಸಂಖ್ಯೆಗಳಿರುವ ಒಂದು ಗ್ರಾಮ ಅಥವಾ ಎರಡು ಮೂರು ಗ್ರಾಮಗಳು ಸೇರಿ ಗ್ರಾಮದ ಪಂಚಾಯಿತಿ ರಚನೆಯಾಗುತ್ತದೆ.
- ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಮಲೆನಾಡಿನ ಪ್ರದೇಶಗಳಲ್ಲಿ ಕೇವಲ 2000 ಜನಸಂಖ್ಯೆಗಳಿರುವ ಗ್ರಾಮಗಳು ಗ್ರಾಮ ಪಂಚಾಯಿತಿಗಳನ್ನು ರಚಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.
- ಗ್ರಾಮ ಪಂಚಾಯಿತಿಯ ಸದಸ್ಯರುಗಳು ತಮ್ಮ ಪಂಚಾಯಿತಿಯ ಮಿತಿಗೊಳಪಟ್ಟ ಪ್ರದೇಶದಲ್ಲಿನ ವಯಸ್ಕಮತದಾರರಿಂದ ಚುನಾವಣೆಯಲ್ಲಿ ಆಯ್ಕೆಗೊಳ್ಳುತ್ತಾರೆ.
- ಪ್ರತಿ 400 ಮತದಾರನಿಗೆ ಒಬ್ಬ ಪ್ರತಿನಿಧಿ ಆಯ್ಕೆಗೊಳ್ಳುತ್ತಾನೆ.
- ಈ ಗ್ರಾಮ ಪಂಚಾಯಿತಿಗಳಲ್ಲೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಮತ್ತು ಮಹಿಳೆಯರಿಗೆ ಮೀಸಲು ಸ್ಥಾನಗಳಿವೆ. ಗ್ರಾಮ ಪಂಚಾಯಿತಿಯ ಆಡಳಿತಾವಧಿ
- ಮೊದಲ ಸಭೆಯ ದಿನದಿಂದ ಆರಂಭಗೊಂಡು ಪೂರ್ಣ ಐದು ವರ್ಷಗಳವರೆಗೆ ಇರುತ್ತದೆ.
- 2000ರದ ಪಂಚಾಯತ್ ರಾಜ್ ಕಾಯ್ದೆಯ ಎರಡನೇ ತಿದ್ದುಪಡಿಯ ಪ್ರಕಾರ ಪ್ರತಿ ಪಂಚಾಯಿತಿ ಸದಸ್ಯರು ಕಡ್ಡಾಯವಾಗಿ ತಮ್ಮ ಮನೆಗಳಲ್ಲಿ ಶೌಚಾಲಯವನ್ನು ಹೊಂದಿರಬೇಕು.
- ಒಂದು ವೇಳೆ ಇಲ್ಲದಿದ್ದಲ್ಲಿ ಚುನಾಯಿತರಾದ ಒಂದು ವರ್ಷದೊಳಗೆ ಶೌಚಾಲಯವನ್ನು ನಿರ್ಮಿಸಿಕೊಳ್ಳಲೇಬೇಕು.
- ಪಂಚಾಯಿತಿ ಸಭೆಗಳು ಕಡೆ ಪಕ್ಷ ಎರಡು ತಿಂಗಳಿಗೊಮ್ಮೆ ನಡೆಯಬೇಕು ಹಾಗೂ ಸಭೆಯಲ್ಲಿ ಮೂರನೇ ಒಂದು ಮೂರು ಭಾಗದಷ್ಟು ಪಂಚಾಯಿತಿ ಸದಸ್ಯರುಗಳು ಹಾಜರಿದ್ದಲ್ಲಿ ಮಾತ್ರ ನಿರ್ಧಾರಗಳಿಗೆ ಸಮ್ಮತಿ ದೊರೆಯಬೇಕು.
- ಗ್ರಾಮ ಪಂಚಾಯಿತಿಯ ಎಲ್ಲಾ ಸದಸ್ಯರುಗಳು ಒಟ್ಟಾಗಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಮೂವತ್ತು ತಿಂಗಳ ಅವಧಿಗೆ ಆಯ್ಕೆಮಾಡುತ್ತಾರೆ.
- ಚುನಾಯಿತ ಅಧ್ಯಕ್ಷ ಗ್ರಾಮ ಪಂಚಾಯಿತಿ ಸಭೆಗಳ ಅಧ್ಯಕ್ಷತೆ ವಹಿಸುತ್ತಾರೆ.
- ಅವನ/ಅವಳ ಅನುಪಸ್ಥಿತಿಯಲ್ಲಿ ಉಪಾಧ್ಯಕ್ಷರು ಸಭೆಯ ಅಧ್ಯಕ್ಷ ಸ್ಥಾನವಹಿಸಿ ಸಭೆಯ ಕಲಾಪಗಳನ್ನು ನಡೆಸಬೇಕು.
- ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳಿಗೆ ಮೀಸಲಾತಿ ನಿಯಮ ಅನ್ವಯವಾಗುತ್ತದೆ.
- ಗ್ರಾಮ ಪಂಚಾಯಿತಿಗಳು ಪರಿಣಾಮಕಾರಿ ಆಡಳಿತಕ್ಕಾಗಿ ಸ್ಥಾಯಿಸಮಿತಿಗಳನ್ನು ರಚಿಸಿಕೊಳ್ಳಬಹುದು.

- ಗ್ರಾಮ ಪಂಚಾಯಿತಿಯ ಕಾರ್ಯಪಾಲನೆಗಾಗಿ ಪೂರ್ಣಾವಧಿಯ ಕಾರ್ಯದರ್ಶಿ ಎಂಬ ಅಧಿಕಾರಿಯು ನೇಮಕಗೊಂಡಿರುತ್ತಾನೆ.
- ಇತ್ತೀಚೆಗೆ ಕರ್ನಾಟಕ ಲೋಕ ಸೇವಾ ಆಯೋಗದ ಮುಖಾಂತರ ಪ್ರತಿ ಒಂದು ಪಂಚಾಯಿತಿಗೆ ಒಬ್ಬ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ(PDO) ಎಂಬ ಅಧಿಕಾರಿಯನ್ನು ರಾಜ್ಯ ಸರ್ಕಾರ ನೇಮಕ ಮಾಡಿದೆ.

**ತಾಲ್ಲೂಕು ಪಂಚಾಯಿತಿಗಳು :**

- 1993 ರ ಪಂಚಾಯಿತಿ ರಾಜ್ ಕಾಯಿದೆಯು ತಾಲ್ಲೂಕುಗಳಲ್ಲಿ ತಾಲ್ಲೂಕು ಪಂಚಾಯಿತಿಗಳನ್ನು ರಚಿಸಲು ಅವಕಾಶ ಕಲ್ಪಿಸಿದೆ.
- ತಾಲ್ಲೂಕು ಪಂಚಾಯಿತಿಯು ಚುನಾಯಿತರಾದ ಸದಸ್ಯರುಗಳನ್ನು ಹೊಂದಿರುತ್ತದೆ.
- ಚುನಾಯಿತ ಸದಸ್ಯರು ಪ್ರತ್ಯಕ್ಷ ಚುನಾವಣೆಗಳ ಮೂಲಕ ಅರ್ಹ ಮತದಾರರಿಂದ ಆಯ್ಕೆಗೊಳ್ಳುತ್ತಾರೆ.
- ತಾಲ್ಲೂಕು ಪಂಚಾಯಿತಿಯ ಸದಸ್ಯರುಗಳ ಸಂಖ್ಯೆಯು ಆಯಾ ತಾಲ್ಲೂಕಿನ ಒಟ್ಟು ಜನ ಸಂಖ್ಯೆಯನ್ನು ಅವಲಂಬಿಸಿದ್ದು, ಪ್ರತಿ 10,000 ಮತದಾರರಿಗೊಬ್ಬರಂತೆ ತಾಲ್ಲೂಕು ಪಂಚಾಯಿತಿಯ ಸದಸ್ಯನನ್ನು ಹೊಂದಿರುತ್ತದೆ,
- ಸದಸ್ಯ ಸ್ಥಾನ ಹಂಚಿಕೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಮತ್ತು ಮಹಿಳಾ ಮೀಸಲಾತಿಯನ್ನು ಕೂಡ ಅನುಪಾಲನೆ ಮಾಡಬೇಕಾಗುತ್ತದೆ.
- ಇದರ ಜೊತೆಗೆ ಆಯಾ ತಾಲ್ಲೂಕಿನ ವ್ಯಾಪ್ತಿಗೊಳಪಡುವ ಗ್ರಾಮ ಪಂಚಾಯಿತಿಗಳ ಐದನೆ ಒಂದರಷ್ಟು ಅಧ್ಯಕ್ಷರುಗಳು ತಾಲೂಕು ಪಂಚಾಯಿತಿಯ ಸದಸ್ಯರಾಗಿ ಸೇವೆ ಸಲ್ಲಿಸುವ ಅವಕಾಶವೂ ಇದ್ದು, ಇವರುಗಳನ್ನು ಲಾಟರಿ ಮೂಲಕ ಆಯ್ಕೆ ಮಾಡಲಾಗುತ್ತದೆ. ಹಾಗೂ ಇವರ ಅವಧಿಯು ಒಂದು ವರ್ಷಕ್ಕೆ ಸೀಮಿತವಾಗಿರುತ್ತದೆ.
- ಇವರ ಆಯ್ಕೆಯು ಪರ್ಯಾನುಕ್ರಮದ (Rotation Basis) ಅನುಸಾರ ನಡೆಯುತ್ತದೆ.
- ತಾಲ್ಲೂಕು ಪಂಚಾಯಿತಿಯ ಸದಸ್ಯರುಗಳ ಅಧಿಕಾರವಧಿಯು ಐದು ವರ್ಷಗಳಾಗಿದ್ದು,
- ಸಂಧರ್ಭ ಬಂದಾಗ ರಾಜೀನಾಮೆ ನೀಡುವ ಅಥವಾ ಸರ್ಕಾರ ಅವರನ್ನು ವಜಾಗೊಳಿಸುವ ಅವಕಾಶವಿದೆ.
- ವಿಧಾನಸಭೆ, ವಿಧಾನ ಪರಿಷತ್ತು ಮತ್ತು ಲೋಕಸಭೆ ಸದಸ್ಯರುಗಳು ತಮ್ಮತಮ್ಮ ಕ್ಷೇತ್ರಗಳ ತಾಲ್ಲೂಕು ಪಂಚಾಯಿತಿಗಳ ಸಭೆಯಲ್ಲಿ ಭಾಗವಹಿಸಲು ಅವಕಾಶವಿದೆ.
- ತಾಲ್ಲೂಕು ಪಂಚಾಯಿತಿ ಸಭೆಗಳು ಕೊನೆ ಪಕ್ಷ ಎರಡು ತಿಂಗಳಿಗೊಂದರಂತೆ ನಡೆಯಬೇಕಿದ್ದು,
- ವಿಶೇಷ ಸಂದರ್ಭಗಳಲ್ಲಿ ತುರ್ತು ಅಥವಾ ಪ್ರಮುಖ ಸಭೆಗಳನ್ನು ನಡೆಸಬಹುದಾಗಿದೆ.

- ತಾಲೂಕು ಪಂಚಾಯಿತಿಯ ಅಧ್ಯಕ್ಷರು ಸಭೆಗಳ ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಹಾಗೂ ಅವರ ಗೈರು ಹಾಜರಿಯಲ್ಲಿ ಉಪಾಧ್ಯಕ್ಷರು ಆ ಕಾರ್ಯವನ್ನು ನಿರ್ವಹಿಸತಕ್ಕದ್ದು. ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳನ್ನು ತಾಲ್ಲೂಕು ಪಂಚಾಯಿತಿಯ ಸದಸ್ಯರುಗಳು ಇಪ್ಪತ್ತು ತಿಂಗಳುಗಳ ಅವಧಿಗೆ ಆಯ್ಕೆ ಮಾಡಿಕೊಳ್ಳುತ್ತಾರೆ. ತಾಲ್ಲೂಕು ಪಂಚಾಯಿತಿಗಳ ಆಡಳಿತದ ಪರಿಣಾಮಕಾರಿ ನಿರ್ವಹಣೆಗಾಗಿ
- ಸ್ಥಾಯಿಸಮಿತಿಗಳನ್ನು ರಚಿಸಿಕೊಳ್ಳುವ ಅವಕಾಶವಿದ್ದು, ಸರ್ಕಾರವು ಆಡಳಿತ ಕ್ರಮಗಳನ್ನು ಸುಗಮಗೊಳಿಸಲು ಕಾರ್ಯನಿರ್ವಾಹಕ ಅಧಿಕಾರಿಗಳನ್ನು ನೇಮಿಸುತ್ತದೆ. ತಾಲ್ಲೂಕು ಪಂಚಾಯಿತಿಗಳು ಸ್ಥಳೀಯ ಸಂಸ್ಥೆಗಳ ಕಾರ್ಯಗಳೊಂದಿಗೆ ಇನ್ನೂ ಕೆಲವು ಕಾರ್ಯಗಳನ್ನು ನಿರ್ವಹಿಸಬೇಕಾಗುತ್ತದೆ,
- ಗ್ರಾಮ ಪಂಚಾಯಿತಿಗಳ ವಾರ್ಷಿಕ ಯೋಜನಾ ಪ್ರಸ್ತಾವನೆಗಳನ್ನು ಕ್ರೋಢಿಕರಿಸಿ ಜಿಲ್ಲಾ ಪಂಚಾತಿಗಳಿಗೆ ಸಲ್ಲಿಸುವುದು.
- ರಾಜ್ಯ ಸರ್ಕಾರ ಅಥವಾ ಜಿಲ್ಲಾ ಪಂಚಾಯಿತಿಗಳು ಸೂಚಿಸುವ ಎಲ್ಲಾ ಕಲ್ಯಾಣದಾಯಕ ಕಾರ್ಯಕ್ರಮ ಅಥವಾ ಯೋಜನೆಗಳನ್ನು ಕಾರ್ಯಗತಗೊಳಿಸುವುದು.

**ಜಿಲ್ಲಾ ಪಂಚಾಯಿತಿಗಳು :**

- ಜಿಲ್ಲಾಡಳಿತವನ್ನು ನೋಡಿಕೊಳ್ಳಲು ಪ್ರತಿ ಜಿಲ್ಲೆಯಲ್ಲೂ ಜಿಲ್ಲಾ ಪಂಚಾಯಿತಿಗಳನ್ನು ಸ್ಥಾಪಿಸಲಾಗುತ್ತಿದೆ. ಜಿಲ್ಲಾಡಳಿತವನ್ನು ಈ ಹಿಂದೆ ಜಿಲ್ಲಾ ಮಂಡಳಿಗಳು ಅಥವಾ ಸಮಿತಿಗಳೆಂದು ಕರೆಯಲಾಗುತ್ತಿತ್ತು.
- ಜಿಲ್ಲಾ ಪಂಚಾಯಿತಿ ಸದಸ್ಯರು ನೇರವಾಗಿ ಅಥವಾ ಪ್ರತ್ಯಕ್ಷವಾಗಿ ಆ ಜಿಲ್ಲೆಯ ಜನರಿಂದ ಚುನಾಯಿತರಾಗುತ್ತಾರೆ.
- ಜನಸಂಖ್ಯಾ ಆಧಾರದ ಮೇಲೆ ಜಿಲ್ಲೆಗಳ ಪ್ರತಿನಿಧಿಗಳ ಸಂಖ್ಯೆಯಲ್ಲಿ ವ್ಯತ್ಯಾಸ ಕಂಡುಬರುತ್ತದೆ.
- ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 30,000 ಜನಸಂಖ್ಯೆಗೆ ಒಬ್ಬ ಪ್ರತಿನಿಧಿಯಿದ್ದರೆ, ಕೊಡಗಿನಲ್ಲಿ ಪ್ರತಿ 18,000 ಜನಸಂಖ್ಯೆಗೊಬ್ಬ ಪ್ರತಿನಿಧಿಯಿದ್ದು ಹಾಗೂ ಇತರೆ ಜಿಲ್ಲೆಗಳಲ್ಲಿ ಪ್ರತಿ 40,000 ಜನಸಂಖ್ಯೆಗೊಬ್ಬ ಪ್ರತಿನಿಧಿ ಆಯ್ಕೆಗೊಳ್ಳುತ್ತಾನೆ.
- ಆಯ್ಕೆಗೊಂಡ ಜಿಲ್ಲಾ ಪಂಚಾಯಿತಿ ಸದಸ್ಯರುಗಳ ಜೊತೆಗೆ ಆ ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರುಗಳು, ವಿಧಾನ ಸಭೆಯ ಹಾಗೂ ವಿಧಾನ ಪರಿಷತ್ತಿನ ಶಾಸಕರು ಮತ್ತು ಆ ಜಿಲ್ಲೆಯ ಲೋಕಸಭಾ ಸದಸ್ಯರು, ಜಿಲ್ಲಾ ಪಂಚಾಯಿತಿಯ. ಸಭೆಗಳಲ್ಲಿ ಭಾಗವಹಿಸುವ ಮತ್ತು ಮತ ಚಲಾಯಿಸುವ ಅವಕಾಶ ಹೊಂದಿರುತ್ತಾರೆ.
- ಜಿಲ್ಲಾ ಪಂಚಾಯಿತಿಯಲ್ಲಿ ನಿಯಮದಂತೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಮತ್ತು ಮಹಿಳಾ ಮೀಸಲಾತಿ ಅನ್ವಯವಾಗುತ್ತದೆ.
- ಜಿಲ್ಲಾ ಪಂಚಾಯಿತಿ ಸದಸ್ಯರ ಅವಧಿ ಐದು ವರ್ಷಗಳಾಗಿರುತ್ತದೆ.

- ಜಿಲ್ಲಾ ಪಂಚಾಯಿತಿಗೆ ಮೂವತ್ತು ತಿಂಗಳುಗಳ ಅವಧಿಗೆ ಒಬ್ಬ ಅಧ್ಯಕ್ಷ ಮತ್ತು ಒಬ್ಬ ಉಪಾಧ್ಯಕ್ಷ ಆಯ್ಕೆಗೊಳ್ಳುತ್ತಾರೆ.
- ಆಯ್ಕೆಗೊಂಡ ಅಧ್ಯಕ್ಷನನ್ನು ಜಿಲ್ಲಾಧ್ಯಕ್ಷ ಎಂದು ಕರೆಯಲಾಗುತ್ತದೆ.
- ಜಿಲ್ಲಾ ಪಂಚಾಯಿತಿಗಳು ಕನಿಷ್ಟ ಎರಡು ತಿಂಗಳಿಗೊಂದು ಸಭೆ ನಡೆಸಬೇಕು ಮತ್ತು ಈ ಸಭೆಗಳ ಅಧ್ಯಕ್ಷತೆಯನ್ನು ಜಿಲ್ಲಾಧ್ಯಕ್ಷರು ವಹಿಸುತ್ತಾರೆ. ಅವರ ಗೈರುಹಾಜರಿಯಲ್ಲಿ ಉಪಾಧ್ಯಕ್ಷರು ಆ ಜವಾಬ್ದಾರಿಯನ್ನು ನಿಭಾಯಿಸುತ್ತಾರೆ.
- ಪ್ರಕೃತಿ ವಿಕೋಪಗಳು ಸಂಭವಿಸಿದಾಗ ಪರಿಹಾರವಾಗಿ ಒಂದು ಲಕ್ಷರೂಗಳನ್ನು ಅನುದಾನವೆಂದು ಬಿಡುಗಡೆ ಮಾಡುವ ಅಧಿಕಾರ ಜಿಲ್ಲಾಧ್ಯಕ್ಷನಿಗಿರುತ್ತದೆ.
- ಜಿಲ್ಲಾ ಪಂಚಾಯಿತಿಯ ಸಮರ್ಥ ಆಡಳಿದ ದೃಷ್ಠಿಯಿಂದ ಐದು ಸ್ಥಾಯಿ ಸಮಿತಿಗಳನ್ನು ರಚಿಸಿಕೊಳ್ಳಲಾಗುತ್ತದೆ.
- ಜಿಲ್ಲಾಧಿಕಾರಿಗಳಿಗೆ ಸಮಾನವಾದ ಅಧಿಕಾರಿಯನ್ನು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ (CEO)ಯನ್ನಾಗಿ ರಾಜ್ಯ ಸರ್ಕಾರ ನೇಮಿಸುತ್ತದೆ.
- ಈ ಅಧಿಕಾರಿಯು ಜಿಲ್ಲಾ ಪಂಚಾಯಿತಿಯ ಸಭೆಯಲ್ಲಿ, ಚರ್ಚೆಗಳಲ್ಲಿ ಭಾಗವಹಿಸುವ ಅಧಿಕಾರ ಹೊಂದಿದ್ದರೂ ಮತಚಲಾಯಿಸುವ ಹಕ್ಕು ಇರುವುದಿಲ್ಲ.
- ಜಿಲ್ಲಾ ಪಂಚಾಯಿತಿ ಕಾರ್ಯ ನಿರ್ವಹಣಾ ಅಧಿಕಾರವನ್ನೂ ಇವರು ಹೊಂದಿರುತ್ತಾರೆ.
- ಜಿಲ್ಲಾ ಪಂಚಾಯಿತಿಯೆಂದರೆ ಜಿಲ್ಲಾ ಸರ್ಕಾರವೆಂದರ್ಥ. ಅಭಿವೃದ್ಧಿ ಕಾರ್ಯಗಳನ್ನು ಮತ್ತು ಜನಪ್ರಿಯ ಕಲ್ಯಾಣಯೋಜನೆಗಳನ್ನು ಕಾರ್ಯಗತಗೊಳಿಸುವ ಎಲ್ಲಾ ಅಧಿಕಾರವು ಜಿಲ್ಲಾ ಪಂಚಾಯಿತಿಗಿದೆ.
- ರಾಜ್ಯ ಸರ್ಕಾರದ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಕಲ್ಯಾಣಯೋಜನೆಗಳು ಜಿಲ್ಲಾ ಪಂಚಾಯಿತಿಯ ಮೂಲಕವೇ ಅನುಷ್ಠಾನಗೊಳ್ಳುತ್ತವೆ.

**ಇವುಗಳ ಜೊತೆಗೆ ಜಿಲ್ಲಾ ಪಂಚಾಯಿತಿಯು ಕೆಳಗಿನ ಕಾರ್ಯಗಳನ್ನು ನಿರ್ವಹಿಸುತ್ತದೆ.**

- ಸರ್ಕಾರದ ಯೋಜನೆಗಳು ಹಾಗೂ ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನಕ್ಕಾಗಿ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳ ನಡುವೆ ಪರಸ್ಪರನಂಬಿಕೆ, ವಿಶ್ವಾಸ, ಮತ್ತು ಸಹಕಾರ ಭಾವನೆಯ ವಾತಾವರಣವನ್ನು ಸೃಷ್ಟಿಸುವುದಾಗಿದೆ.
- ಯೋಜನೆಗಳು ಮತ್ತು ಅಭಿವೃದ್ಧಿ ಕಾರ್ಯಗಳನ್ನು ಯಶಸ್ವಿಗೊಳಿಸಲು ಜಿಲ್ಲೆಯ ಎಲ್ಲಾ ಇಲಾಖೆಗಳ ಜೊತೆಗೆ ಸಹಕರಿಸಿ ಸಮನ್ವಯತೆ ಹೊಂದುವುದು.
- ಜಿಲ್ಲೆಯಲ್ಲಿ ಸಹಕಾರಿ ಸಂಘಗಳು, ಸಹಕಾರಿ ಬ್ಯಾಂಕ್‌ಗಳು ಹಾಗೂ ಇನ್ನಿತರೆ ಸಹಕಾರಿ ಸಂಸ್ಥೆಗಳನ್ನು ಸ್ಥಾಪಿಸಿ ಅವುಗಳು ಕಾರ್ಯನಿರ್ವಹಿಸಿಕೊಂಡು ಹೋಗಲು ಪ್ರೋತ್ಸಾಹ ಮತ್ತು ಬೆಂಬಲ ಒದಗಿಸುವುದು.
- ರಾಜ್ಯ-ಸರ್ಕಾರದ ನಿರ್ದೇಶನದಂತೆ ಕೆಲಸಗಳನ್ನು ಕಾರ್ಯರೂಪಕ್ಕೆ ತರುವುದು.

**ನಗರ ಸ್ಥಳೀಯ ಸಂಸ್ಥೆಗಳು :**

- ರಾಜ್ಯದಲ್ಲಿ ಹಲವಾರು ನಗರ ಮತ್ತು ಪಟ್ಟಣಗಳಿದ್ದು ಇವುಗಳನ್ನು ನಗರ ಪ್ರದೇಶಗಳೆಂದು ಗುರುತಿಸಲಾಗಿದೆ. ಈ ನಗರ ಪ್ರದೇಶಗಳ ಜನರು ಶಿಕ್ಷಣ, ಆರೋಗ್ಯ, ಸಾರಿಗೆ, ಕುಡಿಯುವ
- ನೀರು, ನೈರ್ಮಲೀಕರಣ, ಮನರಂಜನೆ, ಇತ್ಯಾದಿಯಾದ ಉತ್ತಮ ಸವಲತ್ತುಗಳನ್ನು ಹೊಂದಿರುವುದರ
- ಜೊತೆಗೆ ಅನೇಕ ಸಮಸ್ಯೆಗಳನ್ನು ಹೊಂದಿರುತ್ತಾರೆ. ಈ ನಗರವಾಸಿಗಳ ಸಮಸ್ಯೆಗಳಿಗೆ ಪರಿಹಾರ ಒದಗಿಸುವ
- ಸಲುವಾಗಿ ನಗರಸ್ಥಳೀಯ ಸಂಸ್ಥೆಗಳು ಅಥವಾ ನಗರ ಸ್ಥಳೀಯ ಸ್ವಯಂ ಸರ್ಕಾರಗಳನ್ನು ರಚಿಸಿಕೊಳ್ಳಲಾಗಿದೆ.

**ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮೂರು ಬಗೆ ಅವುಗಳೆಂದರೆ:**

- ○ ನಗರ ಪಾಲಿಕೆ (ಮಹಾನಗರ ಪಾಲಿಕೆ) – ಪ್ರಮುಖನಗರಗಳು.
- ○ ನಗರ ಸಭೆಗಳು ಅಥವಾ ಪುರಸಭೆಗಳು – ನಗರ ಪಟ್ಟಣಗಳು.
- ○ ದಂಡು ಪ್ರದೇಶದ ಭಾಗ – ರಕ್ಷಣಾ ಪಡೆಯ ಹಿಡಿತದಲ್ಲಿರುವ ಪ್ರದೇಶ

- ಜನಸಂಖ್ಯೆ, ವರಮಾನ, ಸಾಮಾಜಿಕ ಸ್ಥಿತಿಗತಿಗಳ ಆಧಾರದ ಮೇಲೆ ರಾಜ್ಯ ಸರ್ಕಾರವು ಪ್ರದೇಶವೊಂದನ್ನು ನಗರ ಅಥವಾ ಪಟ್ಟಣವೆಂದು ಘೋಷಿಸುವ ಅಧಿಕಾರ ಹೊಂದಿದೆ.

**ನಗರದ ಸ್ಥಳೀಯ ಸಂಸ್ಥೆಗಳ ಕಾರ್ಯಗಳು ಹಲವಾರಿದ್ದು ಅವುಗಳಲ್ಲಿ ಪ್ರಮುಖವಾದವುಗಳೆಂದರೆ.**

- ಆಯ–ವ್ಯಯ ಪಟ್ಟಿ ತಯಾರಿಸಿ ಮಂಡಳಿಯಿಂದ ಅನುಮೋದನೆ ಪಡೆಯುವುದು.
- ನಗರ ಅಥವಾ ಪಟ್ಟಣದ ಸಂಪೂರ್ಣ ಆಡಳಿತ ನೋಡಿಕೊಳ್ಳುವುದು.
- ಉತ್ತಮ ನಗರ ಯೋಜನೆಯನ್ನು ತಯಾರಿಸಿ ಕಾರ್ಯರೂಪಕ್ಕೆ ತರುವುದು.
- ಉತ್ತಮವಾದ ರಸ್ತೆ, ಸಾರಿಗೆ ವ್ಯವಸ್ಥೆ, ನೀರು ಸರಬರಾಜು, ಶಿಕ್ಷಣ, ವಿದ್ಯುಚ್ಛಕ್ತಿ, ಮಾರುಕಟ್ಟೆ, ಆರೋಗ್ಯ ಹಾಗೂ ಇನ್ನಿತರೆ ಸವಲತ್ತುಗಳನ್ನು ಉತ್ತಮ ರೀತಿಯಲ್ಲಿ ಒದಗಿಸುವುದು.
  - ನಗರಗಳಲ್ಲಿ ಒಳಚರಂಡಿ ವ್ಯವಸ್ಥೆ ಮತ್ತು ಘನತ್ಯಾಜ್ಯ ವಸ್ತುಗಳ ವಿಲೇವಾರಿಗೆ ಸೌಕರ್ಯ ಕಲ್ಪಿಸಿ ಸ್ವಚ್ಛತೆ ಕಾಪಾಡುವುದು.
- ಕಟ್ಟಡ ನಿರ್ಮಾಣಕ್ಕೆ ಪರವಾನಗಿ ನೀಡುವುದು, ನಗರ ಸಭೆಯ ಕಟ್ಟಡಗಳು ಹಾಗೂ ಆಸ್ತಿಯನ್ನು ರಕ್ಷಿಸುವುದು.
- ಜನನ ಮರಣಗಳ ನೋಂದಣಿ ಮಾಡಿಕೊಳ್ಳುವುದು.
- ಕ್ರೀಡಾಂಗಣ, ಮನರಂಜನಾ ಮಂದಿರ, ಉದ್ಯಾನವನಗಳನ್ನು ನಿರ್ಮಿಸಿ ಅವುಗಳನ್ನು ನಿರ್ವಹಿಸುವುದು.
- ನಗರದ ಕೊಳೆಗೇರಿವಾಸಿಗಳಿಗೆ ಸೌಕರ್ಯ ಒದಗಿಸುವುದರ ಮೂಲಕ ಅಲ್ಲಿನ ನಿವಾಸಿಗಳ ಜೀವನ ಮಟ್ಟ ಸುಧಾರಿಸುವಂತೆ ನೋಡಿಕೊಳ್ಳುವುದು.
- ಮಕ್ಕಳ ಕಲ್ಯಾಣ ಕೇಂದ್ರಗಳು, ಬಾಲಾಪರಾಧಿ ಗೃಹಗಳು, ಭಿಕ್ಷುಕರ ಕಾಲೋನಿಗಳು, ಅನಾಥಾಶ್ರಮಗಳು,

ಹೀಗೆ ಇತ್ಯಾದಿ ಸಹಾಯಕ ಕೇಂದ್ರಗಳನ್ನು ಸ್ಥಾಪಿಸಿ ನಿರ್ವಹಿಸಿಕೊಂಡು ಹೋಗುವುದು.

## ನಗರ ಸ್ಥಳೀಯ ಸಂಸ್ಥೆಗಳ ಸಂರಚನೆ.

**ನಗರ ಪಾಲಿಕೆಗಳು :**

- ನಗರ ಪ್ರದೇಶಗಳು ಜನಸಂಖ್ಯೆಯ ಆಧಾರವಾಗಿ ಪಟ್ಟಣ ಮತ್ತು ನಗರ ಪ್ರದೇಶಗಳೆಂದು ವರ್ಗೀಕರಿಸಲ್ಪಟ್ಟಿದ್ದು,
- 20ರಿಂದ 50 ಸಾವಿರದೊಳಗಿನ ಜನಸಂಖ್ಯೆಯನ್ನು ಹೊಂದಿದ್ದರೆ, ಅದನ್ನು ಪಟ್ಟಣವೆಂದು ಪರಿಗಣಿಸಲಾಗುತ್ತದೆ.
- 50 ಸಾವಿರದಿಂದ 3 ಲಕ್ಷದೊಳಗಿನ ಜನಸಂಖ್ಯೆಯನ್ನು ಹೊಂದಿರುವ ಪ್ರದೇಶವನ್ನು ನಗರವೆಂತಲೂ ವರ್ಗೀಕರಿಸಲಾಗಿದೆ.
- ಪಟ್ಟಣದಲ್ಲಿ ಆಡಳಿತ ನಡೆಸುವ ಸಭೆಗೆ ಪುರಸಭೆ ಅಥವಾ ಪಟ್ಟಣ ಸಭೆ ಎಂದು ಕರೆದರೆ ನಗರದ ಆಡಳಿತದ ಮಂಡಳಿಗೆ ನಗರ ಸಭೆ ಎಂದು ಕರೆಯುತ್ತಾರೆ.
- ಪಟ್ಟಣ ಮತ್ತು ನಗರ ಸಭೆಗಳ ಸದಸ್ಯರುಗಳು ಪ್ರತ್ಯಕ್ಷ ಮತದಾನದ ಮೂಲಕ ಚುನಾಯಿತರಾಗಿ ಆಡಳಿತ ಮಂಡಲಿ ಸಭೆಯ ಸದಸ್ಯ ಅಥವಾ ಕೌನ್ಸಿಲರ್ (Councillor) ಎಂದು ಕರೆಸಿಕೊಳ್ಳುತ್ತಾರೆ.
- ಈ ಸದಸ್ಯರುಗಳ ಸಂಖ್ಯೆಯು ನಗರ ಅಥವಾ ಪಟ್ಟಣದ ಜನಸಂಖ್ಯೆಯನ್ನು ಆಧರಿಸುತ್ತದೆ.
- ಪುರಸಭೆಗಳಲ್ಲಿ ಸಾಧಾರಣವಾಗಿ 23 ರಿಂದ 27 ಸದಸ್ಯರಿದ್ದರೆ,
- ನಗರ ಸಭೆಗಳಲ್ಲಿ 31 ರಿಂದ 37 ಸದಸ್ಯರು ಇರುತ್ತಾರೆ.
- ಇದರ ಜೊತೆಗೆ ರಾಜ್ಯ ಸರ್ಕಾರವು ಐದು ಜನ ಸದಸ್ಯರುಗಳನ್ನು ಪುರಸಭೆ ಮತ್ತು ನಗರ ಸಭೆಗಳಿಗೆ ನಾಮ ನಿರ್ದೇಶನ ಮಾಡುತ್ತದೆ.
- ಈ ನಾಮ ನಿರ್ದೇಶಿತ ಸದಸ್ಯರುಗಳಿಗೆ ಸಭೆಯ ಚರ್ಚೆಯಲ್ಲಿ ಭಾಗವಹಿಸುವ ಹಕ್ಕಿದ್ದು ಮತ ಹಾಕುವ ಹಕ್ಕಿಲ್ಲ.
- ಸ್ಥಳೀಯ ವಿಧಾನಸಭಾ ಶಾಸಕರು, ವಿಧಾನಪರಿಷತ್ತು ಶಾಸಕರು ಮತ್ತು ಲೋಕಸಭಾ ಸದಸ್ಯರುಗಳು ಸಭೆಗಳಲ್ಲಿ ಭಾಗವಹಿಸುವ ಮತ್ತು ಮತ ಹಾಕುವ ಹಕ್ಕನ್ನು ಹೊಂದಿರುತ್ತಾರೆ.
- ನಗರ ಸ್ಥಳೀಯ ಸಂಸ್ಥೆಗಳಲ್ಲಿಯೂ ಸಹ ನಿಯಮಾನುಸಾರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಮತ್ತು ಮಹಿಳಾ ಮೀಸಲಾತಿಯಿದೆ.
- ಸ್ಥಳೀಯ ಸಂಸ್ಥೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರು ಆ ಸಂಸ್ಥೆಗಳ ಮುಖ್ಯಸ್ಥರಾಗಿರುತ್ತಾರೆ. ಇವರುಗಳನ್ನು ಆಯ್ಕೆಗೊಂಡ ಸದಸ್ಯರು ಚುನಾಯಿಸುತ್ತಾರೆ.
- ಅಧ್ಯಕ್ಷರು ಸಭೆಯ ಅಧ್ಯಕ್ಷತೆವಹಿಸಿ ಕಲಾಪಗಳು ಸುಗಮವಾಗಿ ನಡೆಯುವಂತೆ ನೋಡಿಕೊಳ್ಳುತ್ತಾರೆ.
- ಅಧ್ಯಕ್ಷರ ಗೈರು ಹಾಜರಿಯಲ್ಲಿ ಉಪಾಧ್ಯಕ್ಷರು ಈ ಜವಾಬ್ದಾರಿಯನ್ನು ನಿರ್ವಹಿಸಬೇಕಾಗುತ್ತದೆ.

- ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಾವಧಿಯು ಐದು ವರ್ಷಗಳಾಗಿದ್ದು ಕೆಲವು ವಿಶೇಷ ಸಂದರ್ಭಗಳಲ್ಲಿ ಅಧಿಕಾರಾವಧಿಯನ್ನು ಮುಂದುವರಿಸುವ ಹಕ್ಕನ್ನು ರಾಜ್ಯ ಸರ್ಕಾರ ಹೊಂದಿದೆ.
- ಸ್ಥಳೀಯ ಸಂಸ್ಥೆಗಳ ಸಮರ್ಥ ಆಡಳಿತದ ನಿರ್ವಹಣೆಗಾಗಿ ನಾಲ್ಕು ಸ್ಥಾಯಿಸಮಿತಿಗಳನ್ನು ರಚಿಸಿಕೊಳ್ಳಲಾಗುತ್ತದೆ.
- ರಾಜ್ಯ ಸರ್ಕಾರದಿಂದ ನೇಮಕಗೊಂಡ ಅಥವಾ ಮುಖ್ಯಾಧಿಕಾರಿ ಅಥವಾ ಚೀಫ್ ಆಫೀಸರ್ ಮುಖ್ಯ ಆಡಳಿತಾಧಿಕಾರಿಯಾಗಿ ಸ್ಥಳೀಯ ಸಂಸ್ಥೆಯ ಎಲ್ಲಾ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸಿಕೊಂಡು ಹೋಗುತ್ತಾನೆ.
- **ಮಹಾನಗರ ಪಾಲಿಕೆಗಳು**
- 1976ರ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯಿದೆ ಅನ್ವಯ ಮಹಾನಗರ ಪಾಲಿಕೆಗಳನ್ನು ರಚಿಸಲಾಗಿದೆ.
- ಎರಡು ಲಕ್ಷಕ್ಕಿಂತ ಹೆಚ್ಚು ಜನ ಸಂಖ್ಯೆ ಮತ್ತು ಕೋಟಿಗಿಂತಲೂ ಹೆಚ್ಚು ಆಧಾಯವಿರುವ ನಗರಪ್ರದೇಶಗಳಲ್ಲಿ ಮಹಾನಗರ ಪಾಲಿಕೆಗಳನ್ನು ರಚಿಸಲಾಗಿದೆ.
- ನಗರ ಪಾಲಿಕೆಯ ಸದಸ್ಯರುಗಳು ಚುನಾವಣೆಗಳ ಮೂಲಕ ಚುನಾಯಿತರಾಗಿ ಪಾಲಿಕೆ ಸದಸ್ಯ (Corporator) ಎನಿಸಿಕೊಳ್ಳುತ್ತಾರೆ.
- ಈ ಸದಸ್ಯರುಗಳ ಸಂಖ್ಯೆ ಜನಸಂಖ್ಯೆ ಆಧಾರಿತವಾಗಿದ್ದು ಸಾಧಾರಣವಾಗಿ 30ರಿಂದ 100 ರವರೆಗೆ ಇರುತ್ತದೆ. ಪಾಲಿಕೆಗಾತ್ರವನ್ನು ಸರ್ಕಾರ ನಿರ್ಧರಿಸುತ್ತದೆ.
- **ಕರ್ನಾಟಕದಲ್ಲಿ ಏಳು ನಗರ ಪಾಲಿಕೆಗಳು ಹಾಗೂ ಒಂದು ಬೃಹತ್ ಮಹಾನಗರಪಾಲಿಕೆ ಇವೆ. ಅವುಗಳೆಂದರೆ**

  1. ಮೈಸೂರು 2. ಹುಬ್ಬಳ್ಳಿ–ಧಾರವಾಡ 3. ಬಳ್ಳಾರಿ 4. ಬೆಳಗಾವಿ 6. ಗುಲ್ಬರ್ಗ 7. ದಾವಣಗೆರೆ

- ಬೆಂಗಳೂರು ನಗರ ಪಾಲಿಕೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (BBMP) ಎಂದು ಕರೆಯಲಾಗಿದೆ.
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (BBMP) ಯಲ್ಲಿ ಒಟ್ಟು 198 ಜನ ಪಾಲಿಕೆ ಸದಸ್ಯರಿದ್ದಾರೆ.
- 2011ರಲ್ಲಿ ಕರ್ನಾಟಕ ನಗರ ಪಾಲಿಕೆಯ ಕಾಯ್ದೆಗೆ ತಿದ್ದುಪಡಿ ತಂದಿದೆ. ಈ ತಿದ್ದುಪಡಿ ಕಾಯ್ದೆಯು ಬೆಂಗಳೂರನ್ನೂ ಒಳಗೊಂಡಂತೆ ಕರ್ನಾಟಕದ ಏಳು ಪಾಲಿಕೆಗಳಿಗೆ ಅನ್ವಯವಾಗುತ್ತದೆ.
- ಈ ಕಾಯ್ದೆಯು ಪಾಲಿಕೆಯ ಕಾರ್ಯಚಟುವಟಿಕೆಗಳಲ್ಲಿ ಸಮುದಾಯವು ಭಾಗವಹಿಸುವ ಅವಕಾಶವನ್ನು ಒದಗಿಸಿದೆ.
- ಈ ಕಾಯ್ದೆಯ ಪ್ರಕಾರ ಪ್ರತಿ ಪಾಲಿಕೆಯು ಕ್ಷೇತ್ರ ಅಥವಾ ಪ್ರದೇಶ ಸಭೆ ಮತ್ತು ವಲಯ ಸಮಿತಿ (Ward Committe)ಗಳೆಂಬ ಎರಡು ಹೆಚ್ಚುವರಿ ಮಂಡಳಿಗಳನ್ನು ಹೊಂದಿರುತ್ತದೆ. ಈ ಮಂಡಳಿಗಳು ಪಾಲಿಕೆಯ ಅಭಿವೃದ್ಧಿಕಾರ್ಯಗಳಲ್ಲಿ ತೊಡಗಿಸಿಕೊಳ್ಳುತ್ತವೆ.

# ಒಕ್ಕೂಟ ನ್ಯಾಯಾಂಗ

* ನಮ್ಮ ನ್ಯಾಯಾಂಗ ವ್ಯವಸ್ಥೆಯು ಏಕರೂಪವಾಗಿದ್ದು, ಹೆಚ್ಚು ಮಹತ್ವದ ಸ್ಥಾನ ಪಡೆದುಕೊಂಡಿದೆ.
* ಸಮಸ್ತ ರಾಷ್ಟ್ರಕ್ಕೆ ಒಂದೇ ನ್ಯಾಯಾಂಗ ವ್ಯವಸ್ಥೆ ಜಾರಿಯಲ್ಲಿದೆ.
* ನಮ್ಮ ನ್ಯಾಯಾಂಗವು ಶಾಸಕಾಂಗ ಮತ್ತು ಕಾರ್ಯಾಂಗಗಳಿಂದ ಸ್ವತಂತ್ರ್ಯವಾಗಿದೆ.
* ಉಚ್ಚ ನ್ಯಾಯಾಲಯ, ಅಧೀನ ನ್ಯಾಯಾಲಯಗಳು ಸರ್ವೋಚ್ಚ ನ್ಯಾಯಾಲಯಗಳ ಅಧೀನದಲ್ಲಿ ಕಾರ್ಯನಿರ್ವಹಿಸುತ್ತವೆ.
* ಸಂವಿಧಾನ, ನ್ಯಾಯ, ಶಾಸನ, ಸಂಪ್ರದಾಯ, ಹಿಂದೆಯೇ ನಿರ್ಣಯಿಸಲಾದ ವಿಧಿಗಳು ನ್ಯಾಯ ನಿರ್ಣಯಗಳಿಗೆ ಆಧಾರಗಳು.
* ಇದು ದೇಶದ ಅತ್ಯುನ್ನತ ನ್ಯಾಯಾಲಯವಾಗಿದೆ, ಇದರ ತೀರ್ಪೇ ಅಂತಿಮವಾದದ್ದು.

**ಸರ್ವೋಚ್ಚ ನ್ಯಾಯಾಲಯ**

* ಸರ್ವೋಚ್ಚ ನ್ಯಾಯಾಲಯವು ಜನವರಿ 28, 1950 ರಂದು ಅಸ್ಥಿತ್ವಕ್ಕೆ ಬಂದಿದೆ.
* ಇದು ದೆಹಲಿಯಲ್ಲಿದೆ.
* ಈ ನ್ಯಾಯಾಲಯದ ಮುಖ್ಯ ನ್ಯಾಯ್ಯಾಧೀಶರು ಮತ್ತು ಇತರ ನ್ಯಾಯಾಧೀಶರನ್ನು ರಾಷ್ಟ್ರಪತಿಗಳು ನೇಮಕ ಮಾಡುತ್ತಾರೆ.
* ಇಂದು ಮುಖ್ಯ ನ್ಯಾಯಾಧೀಶರನ್ನೊಳಗೊಂಡು 31 ಮಂದಿ ನ್ಯಾಯಾಧೀಶರಿದ್ದಾರೆ.

**ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ಅರ್ಹತೆಗಳ**

1) ಭಾರತದ ಪ್ರಜೆಯಾಗಿರಬೇಕು.
2) ಯಾವುದೇ ಉಚ್ಚ ನ್ಯಾಯಾಲಯದಲ್ಲಿ ಕನಿಷ್ಠ 5 ವರ್ಷಗಳ ಕಾಲ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿರಬೇಕು ಅಥವಾ ಯಾವುದೇ ಉಚ್ಚ ನ್ಯಾಯಾಲಯದಲ್ಲಿ 10 ವರ್ಷಗಳ ಕಾಲ ವಕೀಲರಾಗಿ ಸೇವೆ ಸಲ್ಲಿಸಿರಬೇಕು.
3) ರಾಷ್ಟ್ರಪತಿಯವರ ಅಭಿಪ್ರಾಯದಲ್ಲಿ ನ್ಯಾಯ ನಿಪುಣರಾಗಿರಬೇಕು.

**ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ಅಧಿಕಾರವಧಿ**

* ಈ ನ್ಯಾಯಾಲಯದ ನ್ಯಾಯಾಧೀಶರ ನಿವೃತ್ತಿ ವಯಸ್ಸು 65 ವರ್ಷ.
* ಅವಧಿಗೆ ಮುಂಚೆಯೆ ರಾಷ್ಟ್ರಪತಿಗಳಿಗೆ ರಾಜೀನಾಮೆ ಸಲ್ಲಿಸಬಹುದು.
* ಅವರು ಕರ್ತವ್ಯಲೋಪ ಎಸಗಿದಲ್ಲಿ ಸಂಸತ್ತಿನ ಬಹುಮತ ಕೋರಿಕೆಯಂತೆ ರಾಷ್ಟ್ರಪತಿಗಳು ವಜಾ ಮಾಡಬಹುದು.
* ನಿವೃತ್ತಿಯಾದ ಅಥವಾ ವಜಾಗೊಂಡ ನಂತರ ದೇಶದ ಯಾವುದೇ ನ್ಯಾಯಾಲಯದಲ್ಲಿ ವಾದ ಮಾಡುವಂತಿಲ್ಲ.
* ಇವರ ವೇತನ ಮತ್ತು ಭತ್ಯೆಗಳು ಸಂಸತ್ತು ಕಾನೂನು ಮಾಡುವುದರ ಮೂಲಕ ನಿರ್ಧರಿಸುತ್ತದೆ.

**ಅಧಿಕಾರ ಕಾರ್ಯಗಳು**

**1) ಮೂಲ ಅಧಿಕಾರ ವ್ಯಾಪ್ತಿ :**

* ಕೇಂದ್ರ-ರಾಜ್ಯಗಳ ನಡುವಿನ ವಿವಾಧಗಳು.
* ರಾಜ್ಯ-ರಾಜ್ಯಗಳ ನಡುವಿನ ವಿವಾಧಗಳು.
* ಮೂಲಭೂತ ಹಕ್ಕುಗಳ ರಕ್ಷಣೆ.
* ಸಂವಿಧಾನಕ್ಕೆ ಅರ್ಥ ವಿವರಣೆ.
* ರಿಟ್ ಅರ್ಜಿಗಳ ವಿಚಾರಣೆ.

**2) ಮೇಲ್ಮನವಿ ಅಧಿಕಾರ ವ್ಯಾಪ್ತಿ :**

* ಕೆಳ ನ್ಯಾಯಾಲಯಗಳ ತೀರ್ಪುಗಳ ವಿರುದ್ಧ ಕಕ್ಷಿದಾರರು ಈ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಬಹುದು.
* ಮೇಲ್ಮನವಿಗಳನ್ನು ಸ್ವೀಕರಿಸಿ ವಿಚಾರಣೆ ನಡೆಸುವ ಅಧಿಕಾರ.
* ಮೇಲ್ಮನವಿ ಸಲ್ಲಿಸುವಂತೆ ವಿಶೇಷ ಅನುಮತಿ ನೀಡುವ ಅಧಿಕಾರ.

**3) ಸಲಹಾ ಅಧಿಕಾರ ವ್ಯಾಪ್ತಿ :**

* ರಾಷ್ಟ್ರಪತಿಗಳು ಸಾರ್ವಜನಿಕವಾಗಿ ಪ್ರಮುಖವಾದ ವಿಷಯಗಳ ಬಗ್ಗೆ ಸಲಹೆ ಕೇಳಿದಾಗ ನೀಡುವುದು.
* ಸಂವಿಧಾನ ಜಾರಿಗೆ ಬರುವದಕ್ಕಿಂತ ಮುಂಚೆ ಸರ್ಕಾರ ಮಾಡಿಕೊಂಡ ಒಪ್ಪಂದ, ಕರಾರು, ಮುಂತಾದ ವಿಷಯಗಳ ಬಗ್ಗೆ ವಿವಾದ ಉಂಟಾದರೆ ರಾಷ್ಟ್ರಪತಿಗಳು ಈ ನ್ಯಾಯಾಲಯದ ಸಲಹೆ ಕೇಳಬಹುದು.

**4) ಇತರೆ ಕಾರ್ಯಗಳು :**

* ದಾಖಲೆಗಳ ನ್ಯಾಯಾಲಯವಾಗಿ ಕಾರ್ಯನಿರ್ವಹಿಸುವುದು.
* ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಮುಖ್ಯ ಸಲಹೆಗಾರನಾಗಿ ಕಾರ್ಯನಿರ್ವಹಿಸುವುದು.
* ವಿಶೇಷ ರಿಟ್ ಗಳನ್ನು ಹೊರಡಿಸುವ ಅಧಿಕಾರ ಪಡೆದಿದೆ.

## ಉಚ್ಚ ನ್ಯಾಯಾಲಯ

* ಪ್ರತಿಯೊಂದು ರಾಜ್ಯದಲ್ಲಿ ಒಂದು ಉಚ್ಚ ನ್ಯಾಯಾಲಯ ಇರಬೇಕೆಂದು ಸಂವಿಧಾನದಲ್ಲಿ ತಿಳಿಸಲಾಗಿದೆ.
* ಎರಡು ಅಥವಾ ಅದಕ್ಕಿಂತ ಹೆಚ್ಚು ರಾಜ್ಯಗಳಿಗೆ ಒಂದೇ ನ್ಯಾಯಾಲಯ ಇರಬಹುದು.
* ಉಚ್ಚ ನ್ಯಾಯಾಲಯವು ಒಬ್ಬ ಮುಖ್ಯ ನ್ಯಾಯಾಧೀಶರು ಮತ್ತು ಇತರೆ ನ್ಯಾಯಾಧೀಶರನ್ನು ಒಳಗೊಂಡಿರುತ್ತದೆ.
* ನ್ಯಾಯಾಧೀಶರ ಸಂಖ್ಯೆಯು ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿರುತ್ತದೆ.

## ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಅರ್ಹತೆಗಳು

* ಭಾರತದ ಪ್ರಜೆಯಾಗಿರಬೇಕು.
* ಕನಿಷ್ಠ 10 ವರ್ಷಗಳು ನ್ಯಾಯಾಲಯದ ಕಚೇರಿಯಲ್ಲಿ ನ್ಯಾಯಾಧಿಕಾರಿಯಾಗಿ ಸೇವೆ ಸಲ್ಲಿಸಿರಬೇಕು ಅಥವಾ 10 ವರ್ಷಗಳ ಕಾಲ ಉಚ್ಚ ನ್ಯಾಯಾಲಯದಲ್ಲಿ ವಕೀಲರಾಗಿ ಸೇವೆ ಸಲ್ಲಿಸಿರಬೇಕು.
* ರಾಷ್ಟಪತಿಯವರ ಅಭಿಪ್ರಾಯದಲ್ಲಿ ಕಾನೂನು ಪಂಡಿತನಾಗಿರಬೇಕು.

## ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಅಧಿಕಾರವಧಿ

* ಇವರ ನಿವೃತ್ತಿ ವಯಸ್ಸು 62 ವರ್ಷಗಳು.

* ಸಂವಿಧಾನದ 15ನೇ ತಿದ್ದುಪಡಿ ಕಾಯ್ದೆ 1963ರ ಪ್ರಕಾರ ನಿವೃತ್ತಿ ವಯಸ್ಸನ್ನು 60 ರಿಂದ 62ಕ್ಕೆ ಹೆಚ್ಚಿಸಿದೆ. ಇದಕ್ಕೆ ಕೇಂದ್ರ ಸಚಿವ ಸಂಪುಟ ಒಪ್ಪಗೆ ನೀಡಿ 31 ಜುಲೈ 2010 ರ ಕಾನೂನಿನ ಮೂಲಕ ಜಾರಿಗೆ ಬಂದಿದೆ.

* ಇವರ ವೇತನವನ್ನು ಕಾನೂನಿನ ಮೂಲಕ ನಿರ್ಧಾರವಾಗುತ್ತದೆ.

## ಉಚ್ಚ ನ್ಯಾಯಾಲಯದ ಅಧಿಕಾರ ಕಾರ್ಯಗಳು

**1) ಮೂಲ ಅಧಿಕಾರ ಕಾರ್ಯ :**

* ನಾಗರಿಕ ಮತ್ತು ಅಪರಾಧ ವಿವಾಧಗಳು.

* ವೈವಾಹಿಕ ಸಂಬಂಧಗಳು.

* ನ್ಯಾಯಾಂಗ ನಿಂದನೆ.

**2) ಮನವಿ ಅಧಿಕಾರ ಕಾರ್ಯ :**

* ಅಧೀನ ನ್ಯಾಯಾಲಯಗಳು ನೀಡಿದ ತೀರ್ಪಿನ ವಿರುದ್ಧ ಮೇಲ್ಮನವಿ ಸ್ವೀಕರಿಸಿ ಇತ್ಯರ್ಥ್ಯಪಡಿಸುವುದು.

**3) ಇತರೆ ಅಧಿಕಾರ ಕಾಯ :**

* ಅಧೀನ ನ್ಯಾಯಾಲಯದಲ್ಲಿನ ಮೊಕದ್ದಮೆಗಳನ್ನು ತನ್ನಲ್ಲಿಗೆ ವರ್ಗಾಯಿಸಿಕೊಳ್ಳುವುದು.

* ಅಧೀನ ನ್ಯಾಯಾಲಯಗಳು ಕೆಲವು ನಿಯಮಗಳನ್ನು ಪಾಲಿಸುವಂತೆ ಸೂಚಿಸುವುದು.

* ಅಧೀನ ನ್ಯಾಯಾಲಯಗಳಗೆ ದಾಖಲೆಗಳನ್ನು ಸಂಗ್ರಹಿಸಲು ನಿರ್ದೇಶನ ನೀಡುವುದು.

* ಮೂಲಭೂತ ಹಕ್ಕುಗಳನ್ನು ರಕ್ಷಣೆ ಮಾಡುವುದು.

* ವಿವಿಧ ರಿಟ್ ಗಳನ್ನು ಸ್ವೀಕರಿಸಿ ನ್ಯಾಯ ಒದಗಿಸುವುದು.

* ಸಿಬ್ಬಂದಿ ನೇಮಕ ಮತ್ತು ನಿಯಂತ್ರಣ ಮಾಡುವುದು.

**ಅಧೀನ ನ್ಯಾಯಾಲಯಗಳು**

* 1948 ರಲ್ಲಿ ನಡೆದ ನ್ಯಾಯಾಲಯಗಳ ಸಮ್ಮೇಳನವು ಅಧೀನ ನ್ಯಾಯಾಲಯಗಳಿಗೆ ಸ್ವಾಯತ್ತತೆ ಇರಬೇಕೆಂದು ಆಗ್ರಹಿಸಿದವು.

* ಇದರ ಪರಿಣಾಮವಾಗಿ ಸಂವಿಧಾನದಲ್ಲಿ ಅಧೀನ ನ್ಯಾಯಾಲಯಗಳು, ಅವುಗಳ ರಚನೆ ಹಾಗೂ ಅವುಗಳ ಕಾರ್ಯವ್ಯಾಪ್ತಿಯನ್ನು ಅಳವಡಿಸಲಾಗಿದೆ.

* ಅಧೀನ ನ್ಯಾಯಾಲಯಗಳಲ್ಲಿ ಎರಡು ವಿಧಗಳು.

1) ನಾಗರಿಕ ನ್ಯಾಯಾಲಯಗಳು (ಸಿವಿಲ್ ಕೋರ್ಟ)

2) ಅಪರಾಧ ನ್ಯಾಯಾಲಯಗಳು (ಕ್ರಿಮಿನಲ್ ಕೋರ್ಟ)

**ನಾಗರಿಕ ನ್ಯಾಯಾಲಯಗಳು (ಸಿವಿಲ್ ಕೋರ್ಟ) :**

* ಪ್ರತಿಯೊಂದು ಜಿಲ್ಲೆಯಲ್ಲಿ ಇದ್ದು, ಜಿಲ್ಲಾ ನ್ಯಾಯಾಧೀಶರು ಇದರ ಮುಖ್ಯ ನ್ಯಾಯಾಧೀಶರಾಗಿರುತ್ತಾರೆ.

* ರಾಜ್ಯಪಾಲರು ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರೊಂದಿಗೆ ಚರ್ಚಿಸಿ ಈ ನ್ಯಾಯಾಧೀಶರನ್ನು ನೇಮಕ ಮಾಡುತ್ತಾರೆ.

* ಶ್ರೇಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಬೇಕಾದರೆ ದೇಶದಲ್ಲಿ ಅಥವಾ ರಾಜ್ಯದಲ್ಲಿ 7 ವರ್ಷಗಳ ಕಾಲ ವಕೀಲರಾಗಿ ಸೇವೆ ಸಲ್ಲಿಸಿರಬೇಕು.

* ಇತರ ನ್ಯಾಯಾಧೀಶರನ್ನು ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಆಯ್ಕೆ ಮಾಡಲಾಗುವುದು.

* ಈ ನ್ಯಾಯಾಲಯವು ನಾಗರಿಕ ವಿವಾದಗಳಾದ ಆಸ್ತಿ, ಭೂಮಿ, ಹಣಕಾಸು ವ್ಯವಹಾರ, ಮದುವೆ, ವಿವಾಹ ವಿಚ್ಛೇಧನ ಮುಂತಾದ ವಿವಾದಗಳನ್ನು ಬಗೆಹರಿಸುತ್ತದೆ.

* ಕೆಳ ಹಂತದ ನ್ಯಾಯಾಲಯಗಳು ನೀಡುವ ತೀರ್ಪುಗಳ ವಿರುದ್ಧ ಮೇಲ್ಮನವಿ ಸ್ವೀಕರಿಸಿ ತೀರ್ಪುಗಳನ್ನು ನೀಡುವುದು.

**ನಾಗರಿಕ ನ್ಯಾಯಾಲಯಗಳ ಅಡಿಯಲ್ಲಿ ಈ ಕೆಳಕಂಡ ನ್ಯಾಯಾಲಯಗಳಿವೆ.**

1) ಅಧೀನ ನ್ಯಾಯಾಧೀಶರ ನ್ಯಾಯಾಲಯ.

2) ಹೆಚ್ಚುವರಿ ಅಧೀನ ನ್ಯಾಯಾಧೀಶರ ನ್ಯಾಯಾಲಯ.

3) ಮುನ್ಸೀಫ್ ನ್ಯಾಯಾಲಯ.

4) ಹೆಚ್ಚುವರಿ ಮುನ್ಸೀಫ್ ನ್ಯಾಯಾಲಯ.

**ಅಪರಾಧ ನ್ಯಾಯಾಲಯಗಳು (ಕ್ರಿಮಿನಲ್ ಕೋರ್ಟ್) :**

* ಈ ನ್ಯಾಯಾಲಯ ಏಪ್ರೀಲ್ 1, 1974 ರಂದು ಅಸ್ತಿತ್ವಕ್ಕೆ ಬಂದಿದೆ.

* ಇದನ್ನು ಜಿಲ್ಲಾ ದಂಡಾಧಿಕಾರಿ ನ್ಯಾಯಾಲಯ ಎಂದು ಕರೆಯುತ್ತಾರೆ.

* ಇದು ರಾಜ್ಯ ಶ್ರೇಷ್ಠ ನ್ಯಾಯಾಲಯದ ನಿಯಂತ್ರಣದಲ್ಲಿದೆ.

* ಇದು ಕೊಲೆ, ದರೋಡೆ, ಡಕಾಯಿತಿ, ಮುಂತಾದ ಮೊಕದ್ದಮೆಗಳನ್ನು ವಿಚಾರಣೆ ಮಾಡಿ ತೀರ್ಪು ನೀಡುತ್ತದೆ.

* ಇದು ಮರಣ ದಂಡನೆ ಶಿಕ್ಷೆ ನೀಡಿದರೆ, ಅದಕ್ಕೆ ಶ್ರೇಷ್ಠ ನ್ಯಾಯಾಲಯ ದೃಢಿಕರಿಸಬೇಕು.

* ಈ ನ್ಯಾಯಾಲಯದ ತೀರ್ಪಿನ ವಿರುದ್ಧ ಶ್ರೇಷ್ಠ ನ್ಯಾಯಾಲಯದಲ್ಲಿ ಮೇಲ್ಮನೆ ಸಲ್ಲಿಸಬಹುದು.

**ಮುಖ್ಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯ :**

* ಈ ನ್ಯಾಯಾಲಯಕ್ಕೆ ಮರಣ ದಂಡನೆ ಮತ್ತು ಜೀವಾವಧಿ ಶಿಕ್ಷೆಯನ್ನು ವಿಧಿಸುವ ಅಧಿಕಾವಿಲ್ಲ.

* ಈ ನ್ಯಾಯಾಲಯಕ್ಕೆ 7 ವರ್ಷಗಳವರೆಗೆ ಶಿಕ್ಷೆ ವಿಧಿಸುವ ಅಧಿಕಾರವಿದೆ.

**ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯ :**

* ಈ ನ್ಯಾಯಾಲಯವು ಮೇಲ್ದರ್ಜೆ ಅಧಿಕಾರ ಪಡೆದಿದೆ.

* ಇದು 3 ವರ್ಷಗಳವರೆಗೆ ಶಿಕ್ಷೆ ವಿಧಿಸುವ ಅಥವಾ 5,000 ರೂ. ದಂಡ ವಿಧಿಸುವ ಅಥವಾ ಎರಡನ್ನು ವಿಧಿಸುವ ಅಧಿಕಾರ ಪಡೆದಿದೆ.

* ಈ ಕೆಳಗಿನ ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳ ತೀರ್ಪಿನ ವಿರುದ್ಧ ಮೇಲ್ಮನವಿ ವಿಚಾರಣೆ ನಡೆಸುತ್ತದೆ.

**ದ್ವತೀಯ ದರ್ಜೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯ :**

* ಇದು 2 ವರ್ಷಗಳವರೆಗೆ ಶಿಕ್ಷೆ ವಿಧಿಸುವ ಅಥವಾ 1,000 ರೂ.ಗಳಿಗಿಂತ ಹೆಚ್ಚಿಲ್ಲದ ದಂಡ ವಿಧಿಸುವ ಅಥವಾ ಎರಡನ್ನು ವಿಧಿಸುವ ಅಧಿಕಾರ ಪಡೆದಿದೆ.

* ಈ ನ್ಯಾಯಾಲಯಕ್ಕೆ ಮೇಲ್ಮನವಿ ಸ್ವೀಕರಿಸುವ ಅಧಿಕಾರವಿಲ್ಲ.

**ತೃತೀಯ ದರ್ಜೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯ :**

* ಈ ನ್ಯಾಯಾಲಯವು ಕಡಿಮೆ ಅಧಿಕಾರವನ್ನು ಹೊಂದಿದೆ.

* ಇದು 1 ತಿಂಗಳವರೆಗೆ ಶಿಕ್ಷೆ ವಿಧಿಸುವ ಅಥವಾ 50 ರೂ. ದಂಡ ವಿಧಿಸುವ ಅಥವಾ ಎರಡನ್ನು ವಿಧಿಸುವ ಅಧಿಕಾರ ಪಡೆದಿದೆ.

* ಈ ನ್ಯಾಯಾಲಯಕ್ಕೆ ಮೇಲ್ಮನವಿ ಸ್ವೀಕರಿಸುವ ಅಧಿಕಾರವಿಲ್ಲ.

**ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಗಳು :**

* ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಗಳು ಬೇರೆ ಬೇರೆಯಾಗಿರದೆ ಎರಡು ಒಂದೇ ಆಗಿವೆ.

* ಎರಡು ನ್ಯಾಯಾಲಯಕ್ಕೆ ಒಬ್ಬರೆ ನ್ಯಾಯಾಧೀಶರು ಕಾರ್ಯನಿರ್ವಹಿಸುತ್ತಾರೆ.

* ಸಿವಿಲ್ ವಿವಾದಗಳ ವಿಚಾರಣೆ ನಡೆಸುವ ಸಂದರ್ಭದಲ್ಲಿ ಜಿಲ್ಲಾ ನ್ಯಾಯಾಧೀಶರಾಗಿ, ಅಪರಾಧ ವಿವಾದಗಳ ವಿಚಾರಣೆ ನಡೆಸುವಾಗ ಸೆಷನ್ಸ್ ನ್ಯಾಯಾಲಯವೆಂತಲೂ ಕರೆಯುತ್ತಾರೆ.

**ಕಂದಾಯ ನ್ಯಾಯಾಲಯಗಳು :**

* ಈ ನ್ಯಾಯಾಲಯಗಳು ಕಮಧಾಯಕ್ಕೆ ಸಂಬಂಧಿಸಿದ ಮೊಕದ್ದಮೆಗಳ ವಿಚಾರಣೆ, ಭೂ ದಾಖಲೆಗಳು, ಭೂ ಕಂದಾಯ ಮುಂತಾದವುಗಳ ವಿಚಾರಣೆ ನಡೆಸುತ್ತದೆ.

* ಕಂದಾಯ ನ್ಯಾಯಾಲಯದಲ್ಲಿ ಈ ಕೆಳಕಂಡ ನ್ಯಾಯಾಲಯಗಳು ಕಂಡು ಬರುತ್ತವೆ.

**1) ತಹಸೀಲ್ದಾರ ನ್ಯಾಯಾಲಯ :**

* ಕಂದಾಯ ನ್ಯಾಯಾಲಯಗಳಲ್ಲಿ ಅತಿ ಕೆಳಗಿನ ನ್ಯಾಯಾಲಯವಾಗಿದೆ.

* ಇಲ್ಲಿ ತಹಸೀಲ್ದಾರ ನ್ಯಾಯಾಧೀಶರಾಗಿರುತ್ತಾರೆ.

* ಈ ನ್ಯಾಯಾಲಯವನ್ನು ತಾಲ್ಲೂಕು ಮಾಜಿಸ್ಟ್ರೇಟ್ ನ್ಯಾಯಾಲಯ ಎಂದು ಕರೆಯುತ್ತಾರೆ.

**2) ಜಿಲ್ಲಾ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯ :**

* ತಹಸೀಲ್ದಾರ ನ್ಯಾಯಾಲಯದ ತೀರ್ಪಿನ ವಿರುದ್ಧ ಸಲ್ಲಿಸಿದ ಮೇಲ್ಮನವಿಯನ್ನು ವಿಚಾರಣೆ ನಡೆಸುವುದು.

* ಇಲ್ಲಿ ಸಹಾಯಕ ಆಯುಕ್ತರು ನ್ಯಾಯಾಧೀಶರಾಗಿರುತ್ತಾರೆ.

**3) ಜಿಲ್ಲಾ ಕಂದಾಯ ನ್ಯಾಯಾಲಯ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟ್ ನ್ಯಾಯಾಲಯ :**

* ಇದು ಜಿಲ್ಲಾ ಕೇಂದ್ರದಲ್ಲಿವೆ.

* ತಹಸೀಲ್ದಾರ ಮತ್ತು ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದ ತೀರ್ಪಿನ ವಿರುದ್ಧ ಸಲ್ಲಿಸಿದ ಮೇಲ್ಮನವಿಯನ್ನು ವಿಚಾರಣೆ ನಡೆಸುವುದು.

* ಇಲ್ಲಿ ಜಿಲ್ಲಾಧಿಕಾರಿಗಳು ನ್ಯಾಯಾಧೀಶರಾಗಿರುತ್ತಾರೆ.

**4) ಆಯುಕ್ತರ ನ್ಯಾಯಾಲಯ :**

* ಜಿಲ್ಲಾ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ತೀರ್ಪಿನ ವಿರುದ್ಧ ಸಲ್ಲಿಸಿದ ಮೇಲ್ಮನವಿಯನ್ನು ವಿಚಾರಣೆ ನಡೆಸುವುದು.

* ಇಲ್ಲಿ ರಾಜ್ಯ ಮಟ್ಟದ ವಿಭಾಗಾಧಿಕಾರಿಗಳು ನ್ಯಾಯಾಧೀಶರಾಗಿರುತ್ತಾರೆ.

**5) ಕಂದಾಯ ಮಂಡಳಿ :**

* ಕಂದಾಯ ನ್ಯಾಯಾಲಯಗಳಲ್ಲಿ ಅತ್ಯುನ್ನತ ನ್ಯಾಯಾಲಯವಾಗಿದೆ.

* ಅದೀನ ಕಂದಾಯ ನ್ಯಾಯಾಲಯಗಳು ನೀಡಿದ ತೀರ್ಪಿನ ವಿರುದ್ಧ ಸಲ್ಲಿಸಿದ ಮೇಲ್ಮನವಿಯನ್ನು ವಿಚಾರಣೆ ನಡೆಸುವುದು.

* ಇಲ್ಲಿ ಕಂದಾಯ ಕಾರ್ಯದರ್ಶಿಗಳು ನ್ಯಾಯಾಧೀಶರಾಗಿರುತ್ತಾರೆ.

* ಇದು ಶ್ರೇಷ್ಠ ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸುತ್ತದೆ.

**ಜನತಾ ನ್ಯಾಯಾಲಯಗಳು (ಲೋಕ ಅದಾಲತ್)**

* ಮೊಕದ್ದಮೆಗಳನ್ನು ಶೀಘ್ರಗತಿಯಲ್ಲಿ ಮತ್ತು ಕಡಿಮೆ ವೆಚ್ಚದಲ್ಲಿ ಇತ್ಯರ್ಥಪಡಿಸಲು ಜನತಾ ನ್ಯಾಯಾಲಯಗಳು 1985 ರಲ್ಲಿ ಅಸ್ಥಿತ್ವಕ್ಕೆ ಬಂದಿವೆ.

* ಒಂದು ನಿರ್ದಿಷ್ಟ ಪ್ರಕರಣದಲ್ಲಿ ಭಾಗಿಯಾದ ಇಬ್ಬರು ವ್ಯಕ್ತಿಗಳ ನಡುವಿನ ವಿವಾದಗಳನ್ನು ರಾಜಿ ಸಂಧಾನ ಮಾಡಿಸುವುದು ಇದರ ಉದ್ದೇಶವನ್ನು ಹೊಂದಿದೆ.

* ಈ ನ್ಯಾಯಾಲಯಗಳು ಗುಜರಾತ, ದೆಹಲಿ ಮತ್ತು ಕರ್ನಾಟಕದಲ್ಲಿ ಕಾರ್ಯನಿರ್ವಹಿಸುತ್ತಿವೆ.

* ಸರ್ವೊಚ್ಚ ನ್ಯಾಯಾಲಯದ ಕೆಲವು ನ್ಯಾಯಾಧೀಶರು, ಸಾಮಾಜಿಕ ಕಾರ್ಯಕರ್ತರು, ಮತ್ತು ಯುವ ಕಾನೂನು ಪದವೀಧರರು ಈ ನ್ಯಾಯಾಲಯಗಳ ರೂವಾರಿಗಳು.

* ನ್ಯಾಯಾಲಯಗಳಲ್ಲಿ ಇತ್ಯರ್ಥವಾಗದೆ ಬಾಕಿ ಇರುವ ಮೊಕದ್ದಮೆಗಳನ್ನು ಇಲ್ಲಿ ಇತ್ಯರ್ಥಪಡಿಸಿಕೊಳ್ಳಬಹುದು.

**ಜನತಾ ನ್ಯಾಯಾಲಯಗಳ ಮೂರು ಗುಣಗಳು :**

1) ರಾಜೀ ಸಂಧಾನಕ್ಕೆ ಹೆಚ್ಚು ಉತ್ಸುಕವಾಗಿದೆ.

2) ಇದು ಶೀಘ್ರ ಹಾಗೂ ಮಿತವ್ಯಯದ್ದಾಗಿರುತ್ತದೆ.

3) ಇತರೆ ನ್ಯಾಯಾಲಯಗಳ ಕಾರ್ಯದ ಹೊರೆ ಕಡಿಮೆ ಮಾಡುತ್ತದೆ.

* ವಾಹನ ಅಪಘಾತಗಳು, ಭೂ ಸ್ವಾಧೀನ, ಬ್ಯಾಂಕಿಂಗ್ ಗೆ ಸಂಬಂಧಿಸಿದ ಪ್ರರಕರಣ, ವೈವಾಹಿಕ ಹಾಗೂ ಜೀವನಾಂಶ ಮುಂತಾದ ಪ್ರಕರಣಗಳನ್ನು ಇತ್ಯರ್ಥಪಡಿಸುತ್ತದೆ.

* ಈ ನ್ಯಾಯಾಲಯವು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಅಥವಾ ತಾಲ್ಲೂಕು ಕಾನೂನು ಸೇವಾ ಸಮಿತಿಯಿಂದ ರಚಿತವಾಗಿದೆ.

* ಈ ನ್ಯಾಯಾಲಯ ನೀಡುವ ತೀರ್ಪು ಅಂತಿಮವಾದದ್ದು, ಮೇಲ್ಮನವಿಗೆ ಅವಕಾಶವಿಲ್ಲ.

* ಈ ತೀರ್ಪಿಗೆ ಎರಡು ಕಡೆಯವರು ಬದ್ಧರಾಗಿರಬೇಕಾಗುತ್ತದೆ.

* ಇದು ನೀಡಿದ ತೀರ್ಪು ಸಿವಿಲ್ ನ್ಯಾಯಾಲಯ ನೀಡಿದ ತೀರ್ಪಿನಷ್ಟೇ ಮಾನ್ಯತೆ ಪಡೆದಿರುತ್ತದೆ.